

ಲಂಕೇಶ್
ಜೂನ್ 24, 2009 ರೂ. 12/-

ಲೆಕ್ಚರರ್ಸ್ ನೇಮಕಾತಿ ಹಗರಣ

ಕೆಂಗೇರಿ ಭೂ ಹಗರಣ





ನ್ನಮತೀಯರಿಗೆ RSS ಕುಮ್ಮಕ್ಕು

ಲಿಂಗಾಯತರ ಕೋಟೆಗೆ ಬ್ರಾಹ್ಮಣರ ಲಗ್ಗೆ


ಕಡೆಗಾಲದಲ್ಲೂ ಭೂದಾಹ

ಗಣೇಶನಿಗೆ 33 ಲಕ್ಷ ಟೋಪಿ!




ಒಬಾಮಾ ಚಂದಮಾಮ ಅಲ್ಲ:

ಅಮಾಸೆಯ ಕತ್ತಲಲ್ಲಿ ತಿಂಗಳ ಬೆಳಕಿರುವುದಿಲ್ಲ!



ಮುಸ್ಲಿಂ ಜಗತ್ತಿನಿಂದ ಚಂದ್ರನನ್ನು ಕದ್ದೊಯ್ದಿರುವ ಅಮೆರಿಕ ತನ್ನ ಕರಿಯ ಅಧ್ಯಕ್ಷನನ್ನು ಕೈರೋಗೆ ಕಳಿಸಿ ಅಮಾಸೆಯ ಕತ್ತಲಲ್ಲೂ ಬೆಳದಿಂಗಳನ್ನು ಕಾಣಿರಿ ಎಂದು ಹೇಳುತ್ತಿದೆ! ಕಳೆದ ಜೂನ್ 4 ರಂದು ಈಜಿಪ್ಟಿನ ಕೈರೋದಲ್ಲಿ ಅಮೆರಿಕದ ಅಧ್ಯಕ್ಷ ಒಬಾಮಾ ಮುಸ್ಲಿಂ ಜಗತ್ತನ್ನು ಉದ್ದೇಶಿಸಿ ಮಾಡಿದ ಭಾಷಣವನ್ನು ಹೊಸ ಅಧ್ಯಾಯದ ಪ್ರಾರಂಭವೆಂದು ಬಣ್ಣಿಸುತ್ತಿದೆ! ಅಮೆರಿಕ ಅಧ್ಯಕ್ಷಗಿರಿಗೆ ನಡೆದ ಚುನಾವಣೆಯಲ್ಲಿ ತನ್ನ ಸಮ್ಮೋಹಕ ಭಾಷಣದಿಂದ ಅಮೆರಿಕ ಮಾತ್ರವಲ್ಲದೆ ಇಡೀ ಜಗತ್ತನ್ನೇ ಮೋಡಿ ಮಾಡಿದ್ದ ಒಬಾಮಾರ ಗಾರುಡಿ ಕೈರೋದಲ್ಲೂ ಅಡೆತಡೆಯಿಲ್ಲದೆ ಐವತ್ತೆಂಟು ನಿಮಿಷಗಳ ಕಾಲ ನಡೆಯಿತು. "ಮುಸ್ಲಿಂ ಜಗತ್ತು ಮತ್ತು ಅಮೆರಿಕ ಪರಸ್ಪರ ಶತ್ರುಗಳಲ್ಲವೆಂದೂ", "ಮನುಕುಲದ ಮುನ್ನಡೆಗೆ ಇಬ್ಬರೂ ಜೊತೆಗೂಡಿ ನಡೆಯುವ ಅವಶ್ಯಕತೆಯಿದೆಯೆಂದು ಮನವರಿಕೆ" ಮಾಡಿಕೊಡಲೆಂದೇ ಕೈರೋಗೆ ಬಂದಿರುವುದಾಗಿ ಹೇಳುತ್ತಾ ಒಬಾಮಾ ಕೇಳುಗರ ಮನಸೂರೆಗೊಂಡಿದ್ದು ನಿಜ. ಆದ್ದರಿಂದಲೇ "ಇಂದು ಒಂದು ದೇಶದ ನೋವು ಸಾಗರದಾಚೆ ಖಂಡಾಂತರದಲ್ಲೂ ಪ್ರತಿಧ್ವನಿಸುತ್ತದೆ. ಒಂದು ದೇಶದ ಆರ್ಥಿಕ ಬಿಕ್ಕಟ್ಟು ಇಡೀ ಜಗತ್ತನ್ನೇ ತಲ್ಲಣಗೊಳಿಸುತ್ತದೆ. ಹೀಗಾಗಿ ಮನುಕುಲ ಹಿಂದೆಂದಿಗಿಂತಲೂ ಒಗ್ಗಟ್ಟಾಗಿ ಶ್ರಮಿಸುವ ಅಗತ್ಯವಿದೆ" ಎಂದು ಹೇಳಿದ ಮೊದಲ ಅಮೆರಿಕದ ಅಧ್ಯಕ್ಷ ಒಬಾಮಾ ಎಂದು ಜಗತ್ತಿನ ಹಲವು ಮುಸ್ಲಿಂ ನಾಯಕರು ಮತ್ತು ಬುದ್ಧಿಜೀವಿಗಳು ಆತನನ್ನು ಹಾಡಿ ಹೊಗಳುತ್ತಿದ್ದಾರೆ.

ಆದರೆ ಹೊಸ ಹಗಲು ಬರಬಹುದೆಂಬ ಮುಸ್ಲಿಂ ಜಗತ್ತಿನ ಈ ಸಂಭ್ರಮದಲ್ಲಿ, ಅವರ ನಿರೀಕ್ಷೆಗಳಲ್ಲಿ ಒಬಾಮಾ ನೀಡಿರುವ ಭರವಸೆಗಿಂತ ಮುಸ್ಲಿಂ ಜಗತ್ತು ಅನುಭವಿಸುತ್ತಿರುವ ಅಸಹಾಯಕತೆಯೇ ಎದ್ದುಕಾಣುತ್ತಿದೆ. "ನೀವು ನಮ್ಮೊಂದಿಗಿಲ್ಲ ಎಂದರೆ ನಮ್ಮ ಶತ್ರುಗಳ ಜೊತೆ ಇದ್ದಂತೆ" ಎಂಬ ದುರಹಂಕಾರಿ ಬುಷ್‌ನ ಬೆದರಿಕೆಯ ಮಾತುಗಳನ್ನಷ್ಟೆ ಕೇಳಿದ್ದ ಜನತೆಗೆ ಒಬಾಮಾನ ಭಾಷಣ ಮತ್ತು "ಎಲ್ಲರನ್ನೂ ಜೊತೆಗೆ ಕರೆದೊಯ್ಯಬೇಕು" ಎನ್ನುವಂಥ ಅವನ ಮಾತುಗಳು ಅಪ್ಯಾಯಮಾನವಾಗಿ ಕಾಣುವುದರಲ್ಲಿ ಆಶ್ಚರ್ಯ ವೇನಿಲ್ಲ. ಮುಸ್ಲಿಂ ಜಗತ್ತು, ಅದರಲ್ಲೂ ಮಧ್ಯ ಏಶಿಯಾದ ಪ್ಯಾಲೆಸ್ತೀನ್, ಇರಾಕ್, ಅಫ್ಘಾನಿಸ್ತಾನಗಳು ಕಳೆದೆರಡು ದಶಕಗಳಿಂದ ಸತತವಾಗಿ ಅಮೆರಿಕ ಮತ್ತು ಇಸ್ರೇಲ್‌ಗಳಿಂದ ಭಯೋತ್ಪಾದನೆ, ರಕ್ತಪಾತ, ಬಾಂಬು ದಾಳಿ, ಕೊಲೆ, ಸುಲಿಗೆ ಸರ್ವ ನಾಶಗಳನ್ನೇ ಎದುರಿಸುತ್ತಾ ಬಂದಿವೆ. ಅಮೆರಿಕದ ಕ್ರೂರ ಸೇನಾದಾಳಿಯಿಂದಾಗಿ ಆ ದೇಶಗಳ ಒಂದಿಡೀ ಪೀಳಿಗೆಗೇ ಶಾಂತಿ ಮತ್ತು ನೆಮ್ಮದಿಯ ಪರಿಚಯವಿಲ್ಲದಂತಾಗಿದೆ. ಹಾಗೆಯೇ ತಮ್ಮ ಕಣ್ಣೆದುರಿಗೇ ನಡೆಯುತ್ತಿರುವ ಈ ಅನ್ಯಾಯದ ಯುದ್ಧವನ್ನು ಎಷ್ಟೇ ಹೋರಾಡಿದರೂ ತಡೆಯಲಾಗದೆ ಪ್ರಪಂಚದ ಜನತೆ ಹತಾಶರಾಗಿ ಕೈಚೆಲ್ಲಿ ಕೂರುವಂತಾಗಿದೆ. ಇಂಥ ಸಂದರ್ಭದಲ್ಲಿ ಒಬಾಮಾ ಶಾಂತಿ ಮತ್ತು ಸಹಬಾಳ್ವೆಯ ಮಾತನಾಡತೊಡಗಿದ್ದು ಮುಸ್ಲಿಂ ಜಗತ್ತಿನಲ್ಲೂ ಶಾಂತಿ ಮತ್ತು ನೆಮ್ಮದಿಯ ಜಗತ್ತನ್ನು ಬಯಸುವ ಎಲ್ಲರಲ್ಲೂ ಆಶಾವಾದವನ್ನು ಮೂಡಿಸಿರುವುದು ಸಹಜ. ಆದ್ದರಿಂದಲೇ ಒಬಾಮಾನ ಅಸಲಿ ಚಹರೆಯನ್ನು ನೋಡಲು ಅಥವಾ ಅದನ್ನು ಅರ್ಥಮಾಡಿಕೊಳ್ಳಲು ಒಂದು ಬಗೆಯ ನಿರಾಕರಣೆ ಎದ್ದುಕಾಣುತ್ತದೆ. ಯಾವುದೇ ಸಂಗತಿಯನ್ನು ಸತ್ಯಾ ಸತ್ಯತೆಯ ಒರೆಗೆ ಹಚ್ಚದೆ ಒಪ್ಪಿಕೊಳ್ಳದವರೂ ಸಹ ಒಬಾಮಾನ ಭರವಸೆಗಳ ಅಸಲಿ ಯತ್ತನ್ನು ಅರ್ಥ ಮಾಡಿಕೊಳ್ಳಲು ನಿರಾಕರಿಸುತ್ತಾರೆ. ಇದರಲ್ಲಿ ಒಬಾ ಮಾನ ಸಮ್ಮೋಹಕ ಭಾಷಣದ ಪಾತ್ರದಷ್ಟೆ ಹಾವನ್ನೇ ಹಗ್ಗ ವೆಂದು ಭ್ರಮಿಸಿ ಕೂಪ ದಿಂದ ಹೊರಬರಲು ಪ್ರಯತ್ನಿಸುವ ಜನರ ಅಸಹಾಯ ಕತೆಯೂ ಇದೆ.



ಆದರೆ ಭ್ರಮೆ ವಾಸ್ತವವನ್ನು ಮರೆಮಾಚುತ್ತದೆ. ಅನ್ಯಾಯವನ್ನು ನ್ಯಾಯದ ಭಾಷೆಯಲ್ಲಿ ಮುಂದಿಡುತ್ತದೆ. ಅನುಕಂಪವೆಂಬ ಇಂಪಾದ ಸಂಗೀತದ ಹಿನ್ನೆಲೆಯಲ್ಲಿ ಆಕ್ರಂದನವನ್ನು ಆನಂದಿಸುವಂತೆ ಮಾಡುತ್ತದೆ. ಇಲ್ಲದಿದ್ದರೆ ಒಬಾಮಾ ಅಧಿಕಾರಕ್ಕೆ ಬಂದ ಕೇವಲ ಆರು ತಿಂಗಳಲ್ಲಿ ಇಪ್ಪತ್ತು ಲಕ್ಷಕ್ಕೂ ಹೆಚ್ಚು ಅಫ್ಘನ್ನರು ಬೀದಿ ಪಾಲಾಗಿದ್ದರೂ ಮುಸ್ಲಿಂ ಜಗತ್ತು ಒಬಾಮಾನ ಭಾಷಣಕ್ಕೆ ಚಪ್ಪಾಳೆ ತಟ್ಟುತ್ತಿತ್ತೇ? ಇರಾನಿನ ಮೇಲೆ ಗುಟ್ಟಾಗಿ ಯುದ್ಧ ಸನ್ನಾಹದ ಸಿದ್ಧತೆ ನಡೆಸುತ್ತಿದ್ದರೂ ಒಬಾಮಾನನ್ನು ಶಾಂತಿದೂತ ಎಂದು ಕರೆಯುತ್ತಿತ್ತೇ?



ಪ್ಯಾಲೆಸ್ತೀನಿಯರಿಗೆ ಮಾತ್ರ ಹಿಂಸೆ ಕೈಬಿಡಬೇಕೆಂದು ಉಪದೇಶ ನೀಡುತ್ತಾ ಅಮಾನುಷ ದಾಳಿ ನಡೆಸುತ್ತಿರುವ ಇಸ್ರೇಲಿ ಸರ್ಕಾರಕ್ಕೆ ಬೇಷರತ್ ಬೆಂಬಲ ಘೋಷಿಸಿದರೂ, ಒಬಾಮಾನ ಭಾಷಣವನ್ನು ಜಗತ್ತು ಹೊಸ ಅಧ್ಯಾಯದ ಪ್ರಾರಂಭವೆಂದು ಬಣ್ಣಿಸುತ್ತಿತ್ತೇ?

ಬುಷ್ ಯುದ್ಧಾಸ್ತ್ರಗಳಿಂದಲೂ ಸಾಧಿಸಲಾಗದ್ದನ್ನು ಒಬಾಮಾ ಸಮ್ಮೋಹನಾಸ್ತ್ರದ ಮೂಲಕ ಸಾಧಿಸುತ್ತಿದ್ದಾನೆ. ಆದ್ದರಿಂದಲೇ ರಿಪಬ್ಲಿಕನ್ ಪಕ್ಷದ ನಾಯಕನೂ, ಒಬಾಮಾನ ರಾಜಕೀಯ ಶತ್ರುವೂ ಮತ್ತು ಇರಾಕ್ ಮೇಲಿನ ಯುದ್ಧದ ಪ್ರಬಲ ಪ್ರತಿಪಾದಕನೂ ಆದ ಮ್ಯಾಕ್ಸ್ ಬೂಟ್ ಒಬಾಮಾನ ಬಗ್ಗೆ ಹೀಗೆ ಹೇಳುತ್ತಾನೆ "ಅಮೆರಿಕದ ಆಸಕ್ತಿಗಳ ಬಗ್ಗೆ ಮುಸ್ಲಿಂ ಜಗತ್ತಿಗೆ ತಿಳಿಹೇಳುವಲ್ಲಿ ಒಬಾಮಾ ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದಾನೆಂದು ನನ್ನ ಅಭಿಪ್ರಾಯ. ನಿಸ್ಸಂಶಯವಾಗಿ ಒಬಾಮಾ ತನ್ನ ಹಿಂದಿನ ಬುಷ್‌ಗಿಂತಲೂ ಅಮೆರಿಕದ ಅತ್ಯುತ್ತಮ ಸೇಲ್ಸ್‌ಮ್ಯಾನ್!"

ಈ ಅತ್ಯುತ್ತಮ ಮರಣದ ವ್ಯಾಪಾರಿ ಕೈರೋ ಭಾಷಣಕ್ಕೆ ಮುಂಚೆ ನಡೆಸಿದ ವ್ಯವಹಾರವೇನೆಂದು ತಿಳಿದುಕೊಳ್ಳದೆ ಒಬಾಮಾ ಮುಸ್ಲಿಂ ಜಗತ್ತಿಗೆ ಮಾರಿದ್ದೇನೆಂದು ತಿಳಿಯುವುದಿಲ್ಲ. ಮುಸ್ಲಿಂ ಜಗತ್ತನ್ನು ಉದ್ದೇಶಿಸಿ ಒಬಾಮಾ ಕೈರೋದಲ್ಲಿ ಮಾಡಿದ ಭಾಷಣದಲ್ಲಿ ಮುಸ್ಲಿಂ ಜಗತ್ತು ಮತ್ತು ಅಮೆರಿಕ ನಡುವಿನ ಬಾಂಧವ್ಯಕ್ಕೆ ಅಡ್ಡಿಯಾಗಿರುವ ಏಳು ಪ್ರಮುಖ ವಿಷಯಗಳ ಬಗ್ಗೆ ಮಾತನಾಡಿದರು.

ಅಫ್ಘಾನಿಸ್ತಾನ: "ಇರಲು ಇಷ್ಟ ಇಲ್ಲ-ಆದರೆ ವಾಪಸ್ ಬರಲ್ಲ":

ಇಲ್ಲದ ಒಸಾಮಾನನ್ನು ಹುಡುಕುತ್ತಾ ಅಮೆರಿಕ ಸೈನ್ಯ ಅಫ್ಘಾನಿಸ್ತಾನವನ್ನು ಆಕ್ರಮಿಸಿ ಇಲ್ಲಿಗೆ ಎಂಟು ವರ್ಷಗಳೇ ಕಳೆದವು. ಈಗಾಗಲೇ ಅಮೆರಿಕದ ದಾಳಿಯಿಂದ ಆ ದೇಶದ ಲಕ್ಷಾಂತರ ಮುಸ್ಲಿಮರು ಬೀದಿಪಾಲಾಗಿದ್ದಾರೆ. ಸಾವಿರಾರು ಜನ ಸತ್ತಿದ್ದಾರೆ. ಒಬಾಮಾ ಅಧಿಕಾರಕ್ಕೆ ಬಂದಮೇಲೆ ಪಾಕಿಸ್ತಾನದ ಮೇಲೆ ಒತ್ತಡ ಹಾಕಿ ನಡೆಸಿದ ದಾಳಿಯಿಂದಾಗಿ ಕಳೆದ ಆರು ತಿಂಗಳಲ್ಲಿ ಇಪ್ಪತ್ತು ಲಕ್ಷಕ್ಕೂ ಹೆಚ್ಚು ಮುಸ್ಲಿಮರು ನಿರ್ವಸಿತರಾಗಿದ್ದಾರೆ. ಹೀಗಾಗಿಯೇ ಮುಸ್ಲಿಂ ಜಗತ್ತಿನ ಕಣ್ಣಿನಲ್ಲಿ ಅಮೆರಿಕ ನಂ.1 ಭಯೋತ್ಪಾದಕ. ಆದರೆ ಈ ಅನ್ಯಾಯದ ಯುದ್ಧದ ಬಗ್ಗೆ ಒಬಾಮಾ ಹೇಳಿದ್ದೇನು? "ಅಫ್ಘಾನಿಸ್ತಾನದ ಮೇಲೆ ನಾವು ದಾಳಿ ಮಾಡಿದ್ದು ಇಷ್ಟಪಟ್ಟಲ್ಲ, ಬದಲಿಗೆ ಅದು ಅನಿವಾರ್ಯವಾಗಿತ್ತು." ಏಕೆಂದರೆ ಅಮೆರಿಕದ ಮೇಲೆ ದಾಳಿ ಮಾಡಿದ ಅಲ್‌ಕೈದಾ ಉಗ್ರಗಾಮಿಗಳನ್ನು ನಿರ್ನಾಮ ಮಾಡದೆ ಅಮೆರಿಕ ನೆಮ್ಮದಿಯಿಂದ ಇರುವಂತಿರಲಿಲ್ಲ ಎಂದು 2001ರಲ್ಲಿ ಬುಷ್ ಹೇಳಿದ ಮಾತುಗಳನ್ನೇ ಒಬಾಮಾ ಸಹ ಪುನರುಚ್ಚರಿಸಿದ್ದಾರೆ. ಅಷ್ಟು ಮಾತ್ರವಲ್ಲ, ಈಗಾಗಲೇ ಅಲ್ಲಿ ಅಫ್ಘನರನ್ನು ಬೇಟೆಯಾಡುತ್ತಿರುವ ಅಮೆರಿಕನ್

ಚಾರ್ವಾಕ

▸ ಶಿವಸುಂದರ್

ಸೇನೆಗೆ ಸಹಾಯ ಮಾಡಲು ಇನ್ನೂ 17,000 ಸೈನಿಕರನ್ನು ಒಬಾಮಾ ಸರ್ಕಾರ ಕಳಿಸಿಕೊಟ್ಟಿದೆ. ಆದರೂ "ನಮಗೆ ಅಫ್ಘಾನಿಸ್ತಾನದಲ್ಲಿರಲು ಮನಸ್ಸಿಲ್ಲ. ಆದರೆ ಇಲ್ಲಿ ಕೊನೇ ಟೆರರಿಸ್ಟ್ ಇರುವವರೆಗೂ ವಾಪಸ್ ಬರಲ್ಲ" ಎಂದೂ ಒಬಾಮಾ ತನ್ನ ಕೈರೋ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ. ಅಂದಮೇಲೆ ಬುಷ್‌ಗೂ ಒಬಾಮಾಗೂ ಮಾತಿನ ವರಸೆಯಲ್ಲಿ ಬಿಟ್ಟರೆ ಕೃತಿಯಲ್ಲಿ ವ್ಯತ್ಯಾಸವೇನು?

ಅಮೆರಿಕದ ಅಫ್ಘನ್ ನೀತಿಯನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸುತ್ತಿರುವ ಅಮೆರಿಕದ ವಿದ್ವಾಂಸ ಪ್ರೊ. ಜೇಮ್ಸ್ ಪೆಟ್ರಾಸ್ ಇದರ ಬಗ್ಗೆ ಸಾಕಷ್ಟು ಬೆಳಕು ಚೆಲ್ಲುತ್ತಾರೆ. ಒಬಾಮಾ ಕೈರೋಗೆ ಬರುವ ಸ್ವಲ್ಪ ಮುಂಚೆ ಅಫ್ಘಾನಿಸ್ತಾನದ ಅಮೆರಿಕನ್ ಮತ್ತು ನ್ಯಾಟೊ ಪಡೆಯ ಮುಖ್ಯಸ್ಥನನ್ನಾಗಿ ಜನರಲ್ ಸ್ಟಾನ್ಲಿ ಮೆಕ್‌ಕ್ರಿಸ್ಟಲ್‌ನನ್ನು ನೇಮಿಸಿ ಬಂದಿದ್ದಾರೆ. ಈ ಮಹಾಶಯ ಮತ್ತ್ಯಾರೂ ಅಲ್ಲ. ಬುಷ್ ಸರ್ಕಾರದಡಿಯಲ್ಲಿ ಗ್ವಾಂಟಾನಾಮೋ ಸೆರೆಮನೆಯಲ್ಲಿ ಮತ್ತು ಇರಾಕಿನಲ್ಲಿ ಮುಗ್ಧ ಇರಾಕಿಯರನ್ನು ಹೇಳಲಾಗದಂತಹ ಚಿತ್ರಹಿಂಸೆಗೆ ಗುರಿ ಮಾಡಿದ ವಿಶೇಷ ತಂಡದ ನಾಯಕ. 2003-2008ರಲ್ಲಿ ಅಮೆರಿಕ ನಡೆಸಿದ ಎಲ್ಲಾ ಸೇನಾ ದಾಳಿಗಳಲ್ಲಿ ಮತ್ತು ನಾಗರಿಕರಿಗೆ ನೀಡಿದ ಚಿತ್ರಹಿಂಸೆಗಳಲ್ಲಿ ಈತನ ವಿಶೇಷ ಪಾತ್ರವಿದೆ. ಈಗ ಒಬಾಮಾ ಸರ್ಕಾರ ಈ ಹಿಂಸಾನಂದಿಯನ್ನೇ ಅಫ್ಘನ್

▸▸▸18

ಚಿಂತಕರ ಚಾವಡಿ

"ಒಂದು ವಿಮೋಚನಾ ಹೋರಾಟಕ್ಕಿರಬೇಕಾದ ಹಲವಾರು ಗುಣಲಕ್ಷಣಗಳು ಎಲ್‌ಟಿಟಿಇಗೆ ಇರಲಿಲ್ಲ, ಹೀಗಾಗಿ ಅದು ತನ್ನ ಸೋಲಿನ ಬೀಜವನ್ನು ತಾನೇ ಬಿತ್ತುಕೊಂಡಿತ್ತು, ಬಹುಪಾಲು ಶ್ರೀಲಂಕಾ ತಮಿಳರು ಇದನ್ನು ಒಪ್ಪದೇ ಇರಬಹುದು. ಕೆಲವರಿಗೆ ಸಿಟ್ಟೂ ಬರಬಹುದು. ಆದರೆ ಶ್ರೀಲಂಕಾದಲ್ಲಿರುವ ತಮಿಳರಾದ ನಾವಾದರೂ ಈ ತಪ್ಪುಗಳನ್ನು ಗುರುತಿಸದೇ ಹೋದಲ್ಲಿ ಜಗತ್ತು ನಮ್ಮನ್ನು ಎಂದಿಗೂ ಗಮನಿಸದೇ ಹೋಗಬಹುದು. ನಮ್ಮ ತಪ್ಪುಗಳಿಂದ ನಾವೇ ಪಾಠ ಕಲಿಯದೇ ಹೋದರೇ ಮಗದೊಮ್ಮೆ

ಈಳಂ ಹೋರಾಟಗಾರನೊಬ್ಬನ ಆತ್ಮವಿಮರ್ಶೆ

ನಾವು ಪತನ ಹೊಂದುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಈಗ ಎಲ್‌ಟಿಟಿಇ ನಾಶವಾಗಿರುವುದರಿಂದ ಶ್ರೀಲಂಕಾ ಸರ್ಕಾರ ತಮಿಳರ ನಿಜವಾದ ಆಶೋತ್ತರಗಳನ್ನು ಗಮನಿಸಿ ಸೂಕ್ತವಾದ ರಾಜಕೀಯ ಪ್ಯಾಕೇಜನ್ನು ಕೊಡುತ್ತದೆಂದು ಇಲ್ಲಿ ಯಾರೂ ನಂಬಿಕೊಂಡಿಲ್ಲ. ಆದರೆ ಅವರು ಯಾವುದೇ ಪ್ಯಾಕೇಜನ್ನು ಘೋಷಿಸದಿದ್ದರೂ ಸರ್ಕಾರದ ವಿರುದ್ಧ ಕೂಡಲೇ ಹೋರಾಟವನ್ನು ಪ್ರಾರಂಭಿಸುವ ಪರಿಸ್ಥಿತಿಯಲ್ಲಿ ಯಾವ ತಮಿಳರೂ ಇಲ್ಲ. ಅದೇನೇ ಇದ್ದರೂ ಸೂಕ್ತವಾದ ರಾಜಕೀಯ ಪರಿಹಾರವನ್ನು ಕಂಡುಕೊಳ್ಳದಿದ್ದರೆ, ತತ್‌ಕ್ಷಣದಲ್ಲಿ ಅಲ್ಲದಿದ್ದರೂ ಕೆಲವು ಕಾಲದ ನಂತರವಾದರೂ ಮತ್ತೆ ಹುಟ್ಟಿಕೊಳ್ಳಲಿರುವ ತಮಿಳು ಚಳವಳಿ ಈ ತಪ್ಪುಗಳಿಂದ ಸರಿಯಾದ ಪಾಠ ಕಲಿತಿರುತ್ತದೆ ಹಾಗೂ ಅದು ಪ್ರತ್ಯೇಕ ಈಳಂ ಸ್ಥಾಪನೆಯಾಗದ ಹೊರತು ತಣ್ಣಗಾಗುವುದಿಲ್ಲ."

- ಈಶಾನ್ಯ ಶ್ರೀಲಂಕಾದ ಒಬ್ಬ ತಮಿಳು ಪತ್ರಕರ್ತ

No Comments

"ದಿನವಿಡೀ ಹುಡುಕಾಡಿದರೂ ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್‌ನ ಯೋಧರಿಗೆ ಮೋರಿಯಲ್ಲಿ ಕೊಚ್ಚಿಹೋದ ಅಭಿಷೇಕ್‌ನ ಶವ ಸಿಗಲಿಲ್ಲ."

- ಪತ್ರಿಕಾ ವರದಿ

"ಮಾತುಕತೆ ಸಮಾಧಾನ ತಂದಿಲ್ಲ, ಹತ್ತು ದಿವಸದೊಳಗೆ ಸಮಸ್ಯೆ ಪರಿಹರಿಸುವುದಾಗಿ ಮುಖ್ಯಮಂತ್ರಿಯವರು ಕೊಟ್ಟಿರುವ ಭರವಸೆ ಈಡೇರಿದ ಮೇಲೆ ಸಮಾಧಾನದ ಮಾತು."

- ಸೋಮಶೇಖರ ರೆಡ್ಡಿ

"ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಅಡ್ವಾಣಿಯವರನ್ನು ದುರ್ಬಲರನ್ನಾಗಿ ಮತ್ತು ಅಸಹಾಯಕರನ್ನಾಗಿ ಮಾಡುವಲ್ಲಿ ಆರೆಸ್ಸೆಸ್ಸಿನ ಪಾತ್ರ ಪ್ರಮುಖವಾಗಿತ್ತು."

- ಸುಧೀಂದ್ರ ಕುಲಕರ್ಣಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ರಾಜ್ಯಾದ್ಯಂತ ಪ್ರವಾಸ ಮಾಡಲು ಉತ್ತಮ ಕಾರು ಕೊಡಬೇಕೆಂದು ಕೇಳಿದ್ದನೇ ವಿನಃ ಮುಖ್ಯಮಂತ್ರಿಗಳಿಗೆ ಸರಿಸಮಾನವಾದ ಕಾರು ಬೇಕೆಂದು ಕೇಳಿಲ್ಲ. ಈಗಿರುವ ಕಾರು ವಾಪಸ್ ಪಡೆದರೂ ಸರಿಯೇ ಸಮರ್ಪಕವಾಗಿ ವಿರೋಧ ಪಕ್ಷದ ನಾಯಕನ ಕೆಲಸ ಮಾಡುತ್ತೇನೆ."

- ಉಗ್ರಪ್ಪ

"ಮಹಿಳಾ ಮೀಸಲಾತಿ ಮಸೂದೆಯ ಹಿಂದೆ ಹಿಂದುಳಿದ ವರ್ಗಗಳ ಮುಖಂಡರ ಬೆಳವಣಿಗೆಯನ್ನು ತಡೆಗಟ್ಟುವ ಮತ್ತು ಪ್ರಾದೇಶಿಕ ಪಕ್ಷಗಳನ್ನು ಮುಗಿಸುವ ಸಂಚಿದೆ."

- ಲಾಲು ಪ್ರಸಾದ್ ಯಾದವ್

ತಾನು ಕಳ್ಳ ಪರರನ್ನು ನಂಬ!

"ಕೆಲವು ಜಿಲ್ಲೆಗಳಲ್ಲಿ ನಿರೀಕ್ಷೆಗೆ ತಕ್ಕಂತೆ ಕೆಲಸಗಳು ಆಗುತ್ತಿಲ್ಲ, ಇದಕ್ಕೆ ಅಧಿಕಾರಿಗಳ ಉಪೇಕ್ಷೆಯೇ ಕಾರಣ. ಇನ್ನು ಮುಂದೆ ಅಂಥವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ಅಧಿಕಾರಿಗಳು ಇನ್ನು ಮುಂದೆ ಮಲಗುವಾಗಲೂ ಅವರ ಮೊಬೈಲ್‌ಗಳನ್ನು ಆಫ್ ಮಾಡಕೂಡದು."

- ಯಡಿಯೂರಪ್ಪ

ಅರಣ್ಯ ನಾಶಕ್ಕೆಂದೇ ಒಂದು ಪ್ರಾಧಿಕಾರ!

"ಅರಣ್ಯ ಸಂರಕ್ಷಣೆ ಮತ್ತು ವಿವಿಧ ಯೋಜನೆಗಳಿಗೆ ಅನುಮತಿ ನೀಡುವ ಸಂಬಂಧ ಕೇಂದ್ರದಲ್ಲಿ ಪ್ರತ್ಯೇಕವಾದ ಪರಿಸರ ಸಂರಕ್ಷಣಾ ಪ್ರಾಧಿಕಾರವನ್ನು ರಚಿಸಲಾಗುವುದು. ರಾಜ್ಯದಲ್ಲೂ ಇದೇ ಮಾದರಿಯ ಪ್ರಾಧಿಕಾರಗಳು ರಚನೆಯಾಗಲಿವೆ. ಇದು ಅಸ್ತಿತ್ವಕ್ಕೆ ಬಂದ ನಂತರ ಪ್ರಸ್ತುತ ಇರುವ ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿ ರದ್ದಾಗಲಿದೆ."

- ಜೈರಾಂ ರಮೇಶ್, ಕೇಂದ್ರದ ಅರಣ್ಯ ಸಚಿವ

ಈ ಹಿಂದೂ ಕನ್ನಡಿಗನಿಂದ ಹಿಂದೂತ್ವಕ್ಕೆ ಆಪತ್ತಿದೆ!

"ಇತಿಹಾಸವನ್ನು ಸರಿಯಾಗಿ ಪರಿಶೀಲಿಸಿದರೆ ಮಹಾರಾಷ್ಟ್ರ ಕೂಡಾ ಕರ್ನಾಟಕಕ್ಕೆ ಒಳಪಟ್ಟಿತ್ತು ಎಂಬ ಸತ್ಯ ತಿಳಿಯಬಹುದು."

- ಚಿಮೂ

ಸತ್ತ ರೈತನಿಗೂ ಚೂರಿ ಹಾಕುವ ಸರ್ಕಾರ!

"ಹಾವೇರಿ ಗೋಲಿಬಾರ್‌ನಲ್ಲಿ ಮೃತಪಟ್ಟ ರೈತ ಸಿದ್ದಲಿಂಗಪ್ಪ ಚೂರಿ ಅವರ ಪ್ರತಿಮೆ ಸ್ಥಾಪಿಸುವುದಾಗಿ ಮುಖ್ಯಮಂತ್ರಿಯವರೇ ಹೇಳಿದ್ದರು. ಆದರೆ ಈಗ ಚೂರಿ ರೈತನೇ ಅಲ್ಲ ಎಂದು ಸರ್ಕಾರ ಹೇಳುತ್ತಿರುವುದು ಸರಿಯಲ್ಲ."

- ಎಚ್.ಕೆ. ಪಾಟೀಲ್

You said it!

"ಅನೇಕ ವೇಳೆ ಕನ್ನಡಾಭಿಮಾನ ಎಂಬುದು ಇಂಗ್ಲಿಷ್ ಅಥವಾ ಹಿಂದಿ ಬರದ ಅನಿವಾರ್ಯ ಕರ್ಮವಾಗಿಯೂ ಬಳಕೆಯಾಗುವುದನ್ನು ಅಲ್ಲಗಳೆಯಲಾಗದು. ಇದರಿಂದ ರಾಜ್ಯಕ್ಕೆ ಮತ್ತು ಭಾಷೆಗೆ ಮೂರುಕಾಸಿನ ಪ್ರಯೋಜನವೂ ಇಲ್ಲ. ಲೋಕಸಭೆಯಂತಹ ಬಹುಮುಖ್ಯ ವೇದಿಕೆಯನ್ನು ನಮ್ಮ ಸಂಸದರು ನಮ್ಮ ಭಾಷೆಯ 'ಅಭಿಮಾನ' ಪ್ರಕಟಿಸುವ ವೇದಿಕೆಯನ್ನಾಗಿ ಮಾಡಿಕೊಳ್ಳುವುದಕ್ಕಿಂತ 'ಅಭಿವೃದ್ಧಿ'ಗೆ ಅನುಕೂಲ ಮಾಡಿಕೊಡುವ ವೇದಿಕೆಯನ್ನಾಗಿ ಮಾಡಿಕೊಳ್ಳುವುದು ಒಳ್ಳೆಯದು."


- ರಾಜೇಂದ್ರ ಬುರುಡಿಕಟ್ಟಿ, ವಾಚಕರ ವಾಣಿಯಲ್ಲಿ

ಕೆಟ್ಟಮೇಲೆ ಬುದ್ಧಿ ಬಂತಾ!

"ಹಿಂದೂಗಳು ಯಾವೊಂದು ಪಕ್ಷಕ್ಕೂ ಒಂದು ಬ್ಲಾಕ್ ರೀತಿಯಲ್ಲಿ ಓಟು ಹಾಕಲ್ಲ, ಬಿಜೆಪಿಯನ್ನು ಒಂದು ಹಿಂದೂಪರ ಪಕ್ಷವೆಂದು ಭಾವಿಸಿ ಓಟು ಹಾಕುವ ಹಿಂದೂಗಳ ಸಂಖ್ಯೆ ತುಂಬಾ ಕಡಿಮೆ. ಹೆಚ್ಚೆಂದರೆ ಶೇ.25ರಷ್ಟಿರಬಹುದಷ್ಟೆ!"

- ಸುಧೀಂದ್ರ ಕುಲಕರ್ಣಿ

ಮಹಿಳಾ ಮೀಸಲಾತಿ ಸುತ್ತ...



ಕಂಡಹಾಗೆ

ಗೌರಿ ಲಂಕೇಶ್

ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಕುರಿತಂತೆ ...ಎಲ್ಲೆಡೆ ಚರ್ಚೆಗಳಾಗುತ್ತಿವೆ. ಒಂದು ...ಕ್ಕಿಂತಲೂ ಹಿಂದೆ ಪ್ರಾರಂಭವಾದ ಈ ಚರ್ಚೆ ...ನೂ ತಾರ್ಕಿಕ ಅಂತ್ಯ ಮುಟ್ಟದೆ ಹಿಂದೆ ...ಯುತ್ತದೆ; ಮತ್ತೆ ಮುಂದೊಂದು ದಿನ



...ಲೇಳುತ್ತದೆ.

...ವಾಸ್ತವವಾಗಿ ನಮ್ಮ ದೇಶದ ಸಂಸತ್ತಿನಲ್ಲಿ ...ಳಾ ಪ್ರಾತಿನಿಧ್ಯ ಎಷ್ಟಿದೆ? ನಮ್ಮ ಮತದಾರರ ...ಶೇ. 50 ಜನ ಮಹಿಳೆಯರಾಗಿದ್ದರೂ ಕಳೆದ ...ವರ್ಷಗಳಲ್ಲಿ ಮಹಿಳಾ ಸಂಸದರ ಪ್ರಮಾಣ ...10 ನ್ನೂ ಮೀರಿರಲಿಲ್ಲ. ಆದರೆ ಮೊನ್ನಿನ ...ವಣೆಯಲ್ಲಿ 15 ನೇ ಲೋಕಸಭೆಗೆ ...ಳೆಯರು "ಅತಿಹೆಚ್ಚು" ಸಂಖ್ಯೆಯಲ್ಲಿ ...ಬಂದಿದ್ದು ಮೊದಲನೆ ಬಾರಿಗೆ 524 ...ದರಲ್ಲಿ 59 ಮಹಿಳೆಯರಿದ್ದಾರೆ.

...ಮಹಿಳೆಯರಿಗೆ 33% ಮೀಸಲಾತಿ ...ಬೇಕೆಂದು ಕೋರುತ್ತಿರುವ ಇಂದಿನ ...ರ್ಭದಲ್ಲಿ ಯಾವ ಮೀಸಲಾತಿಯೂ ಇಲ್ಲದೆ ...% ಗಿಂತ ಸ್ವಲ್ಪ ಹೆಚ್ಚು ಮಹಿಳೆಯರು ...ಯಾಗಿ ಬಂದಿರುವುದು ಬೇರೆ ಸಂದರ್ಭದಲ್ಲಿ ...ನೀಯ ಸಾಧನೆಯಾಗಿರುತ್ತಿತ್ತೇನೋ. ಆದರೆ ಆ ...ಮಹಿಳೆಯರು ಯಾರೆಂದು ನೋಡಿದಾಗ ...ದವಾಗುತ್ತದೆ. ಅಂಜಲಿ ಪೂರಿ ...ನವೊಂದರಲ್ಲಿ ಬರೆದಿರುವಂತೆ "ಅವರಲ್ಲಿ ...ಬ್ಬರನ್ನು ಹೊರತುಪಡಿಸಿದರೆ ಉಳಿದವರೆಲ್ಲಾ ...ವಿ ರಾಜಕಾರಣಿಗಳ ಪತ್ನಿ, ಪುತ್ರಿ, ವಿಧವೆ, ... ಅಥವಾ ಸಹೋದರಿಗಳೇ." ಅವರುಗಳಲ್ಲಿ ...ಕ್ಕೆ ಕರ್ನಾಟಕದ ಏಕೈಕ ಸಂಸದೆ ಬಳ್ಳಾರಿಯ ... ಸಚಿವ ಶ್ರೀರಾಮುಲು ಮತ್ತು ಗಣಿ ...ಳ ಹಣಬಲದಿಂದಲೇ ಗೆದ್ದ ಶಾಂತ ಎಷ್ಟರ ...ಗೆ ಬಳ್ಳಾರಿ ಜನರ ಮತ್ತು ಕರ್ನಾಟಕ ...ಯ ಆಶೋತ್ತರಗಳನ್ನು ಸಂಸತ್ತಿನಲ್ಲಿ ...ಸಬಹುದು ಎಂಬುದು ಎಲ್ಲರಿಗೂ ...ರುವ ವಿಷಾದನೀಯ ಸಂಗತಿ.

...ದೇನೇ ಇದ್ದರೂ, ಮಹಿಳೆಯರಿಗೆ ...ಲಾತಿ ಇರಬೇಕು. ಯಾಕೆಂದರೆ ನಿಜವಾದ ಪ್ರಜಾಪ್ರಭುತ್ವದಲ್ಲಿ ಎಲ್ಲಾ ಶೋಷಿತ ವರ್ಗಗಳಿಗೆ ಪ್ರಾತಿನಿಧ್ಯ ಇರಬೇಕು. ನಮ್ಮ ಸಂವಿಧಾನ ಸಭೆಯಲ್ಲಿ ದಲಿತರಿಗೆ ರಾಜಕೀಯ ಮೀಸಲಾತಿ ಘೋಷಿಸಿದ್ದೂ ಈ ಕಾರಣಕ್ಕಾಗಿಯೇ.


ಈಗಾಗಲೇ ಸುಮಾರು 90 ದೇಶಗಳ ಸಂಸತ್ತಿನಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ. ಇವತ್ತು ಭಾರತಕ್ಕಿಂತ ಅಫಘಾನಿಸ್ತಾನ, ಪಾಕಿಸ್ತಾನ, ಇರಾಕ್ ತರಹದ ಇಸ್ಲಾಮಿಕ್ ದೇಶಗಳಲ್ಲೂ ಚೀನಾದಂತಹ ಕಮ್ಯುನಿಸ್ಟ್ ದೇಶದಲ್ಲೂ ಮಹಿಳೆಯರಿಗೆ ಮೀಸಲಾತಿ ಇದೆಯಲ್ಲದೆ, ಆ ದೇಶಗಳ ಸಂಸತ್ತಿನಲ್ಲಿ ಭಾರತಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರಿದ್ದಾರೆ. ರ್‍ವಾಂಡದಂತಹ ಆಫ್ರಿಕನ್ ದೇಶದಲ್ಲಿ ಎಲ್ಲಾ ದೇಶಗಳಿಗಿಂತಲೂ ಹೆಚ್ಚು ಪ್ರಮಾಣದಲ್ಲಿ ಮಹಿಳೆಯರಿಗೆ 48.8% ಮೀಸಲಾತಿ ನೀಡಲಾಗಿದೆ. ಆದರೆ ಇಲ್ಲಿ 33% ಕೊಡುವುದರ ಬಗ್ಗೆಯೇ hair splitting ನಡೆಯುತ್ತಿದ್ದು ಅದು ಜಾರಿಗೆ ಬರುವ ಲಕ್ಷಣಗಳೇ ಕಾಣಿಸುತ್ತಿಲ್ಲ.

ಭಾರತದ ಸಂಸತ್ತಿನಲ್ಲಿ ಮಹಿಳೆಯರಿಗೆ ಮೀಸಲಾತಿ ಇಲ್ಲದಿದ್ದರೂ ನಮ್ಮ ಸಂವಿಧಾನಕ್ಕೆ 1993 ರಲ್ಲಿ 73 ಮತ್ತು 74 ನೇ ತಿದ್ದುಪಡಿ ಮಾಡುವ ಮೂಲಕ ಪ್ರಜಾಪ್ರಭುತ್ವದ ಕೆಳಹಂತದ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಲಾಯಿತು. ಆಗ ಕರ್ನಾಟಕ ಸೇರಿದಂತೆ ಮಹಾರಾಷ್ಟ್ರ, ಕೇರಳ, ಪಶ್ಚಿಮ ಬಂಗಾಳದಂತಹ ರಾಜ್ಯಗಳ ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಲಾರಂಭಿಸಿದರು. ಮಹಿಳೆಯರ ಈ ರಾಜಕೀಯ ಪ್ರವೇಶಕ್ಕೆ ಹಲವಾರು ಅಡಚಣೆಗಳಿದ್ದರೂ ಅವರಲ್ಲಿ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ ಹೆಚ್ಚಾಗಿ ಅವರ ಕೊಡುಗೆಯೂ ಅಧಿಕವಾಯಿತು. ಈ ಅನುಭವವನ್ನು ಆಧರಿಸಿಯೇ ಸಂಸತ್ತಿನಲ್ಲೂ ಮಹಿಳೆಯರಿಗೆ 33% ಮೀಸಲಾತಿ ನೀಡಬೇಕೆಂಬ ಹೋರಾಟ 1996 ರಲ್ಲಿ ಪ್ರಾರಂಭವಾಯಿತು.

ಮೊನ್ನೆ ಶರದ್ ಯಾದವ್, ಮುಲಾಯಂ ಸಿಂಗ್ ಮತ್ತು ಲಾಲೂ ಪ್ರಸಾದ್ ಯಾದವ್ ತರಹದ ಒಬಿಸಿ ನಾಯಕರು "ಮಹಿಳಾ ಮೀಸಲಾತಿಯಲ್ಲಿ ಒಳ ಮೀಸಲಾತಿ ಇರಬೇಕು" ಎಂದಿದ್ದಾರಲ್ಲದೆ, ಶರದ್ ಯಾದವ್ "ಈ ತಿದ್ದುಪಡಿಯನ್ನು ತರದೆ ಹಾಗೆಯೇ ಜಾರಿಗೆ ತಂದರೆ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ" ಎಂದು ಬೆದರಿಸಿದ್ದಾರೆ. ಶರದ್ ಯಾದವ್ ಅವರಂತೂ ತಮ್ಮ ಹೇಳಿಕೆಯಿಂದಾಗಿ ಅಪಾರ ಟೀಕೆಗೆ ಗುರಿಯಾಗಿದ್ದಾರೆ.

ಆದರೆ ಮಹಿಳಾ ಮೀಸಲಾತಿ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಅವರು ಹೇಳುತ್ತಿರುವ ಒಳ ಮೀಸಲಾತಿ ಕೂಡ. ಇಲ್ಲವೆಂದರೆ ಮಹಿಳಾ ಮೀಸಲಾತಿಯನ್ನು ದುರುಪಯೋಗಪಡಿಸಿಕೊಂಡು ಮೇಲುಜಾತಿ ಮತ್ತು ಮೇಲುವರ್ಗಗಳೇ ಅಧಿಕ ಸಂಖ್ಯೆಯಲ್ಲಿ ಗೆದ್ದುಬರುವ ಅಪಾಯವಿದೆ.

ಇತ್ತೀಚೆಗೆ ನೇಪಾಳದಲ್ಲಿ ಜಾರಿಗೆ ತಂದಿರುವ ಸಮಾನ ಪ್ರತಿಪಾದನೆ ಪದ್ಧತಿ ಎಲ್ಲ ರೀತಿಯಲ್ಲೂ ಉತ್ತಮ ಎನಿಸುತ್ತದೆ. ಅಲ್ಲಿ ಮಹಿಳೆಯರಿಗೆ ಮಾತ್ರವಲ್ಲ ಎಲ್ಲ ಸಮುದಾಯಗಳಿಗೂ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ನೀಡಲಾಗಿದೆ. ಅಷ್ಟೇ ಅಲ್ಲ, ಎಲ್ಲಾ ಸಮುದಾಯಗಳಲ್ಲೂ ಅರ್ಧ ಜನ ಮಹಿಳೆಯರೇ ಆಗಿರುವುದರಿಂದ ಅವರಿಗೆ 50%



ಮೀಸಲಾತಿಯನ್ನು ನೀಡಲಾಗಿದೆ. ಅಂತಹ ವ್ಯವಸ್ಥೆಯನ್ನು ಇಲ್ಲಿ ಜಾರಿಗೆ ತಂದರೆ ಏನಾಗುತ್ತದೆಂದರೆ ಉದಾಹರಣೆಗೆ ನಮ್ಮ ರಾಜ್ಯದಲ್ಲಿ ಲಿಂಗಾಯತರ ಜನಸಂಖ್ಯೆ ಶೇ. 14 ಇದ್ದರೆ ಅದಕ್ಕೆ ಅನುಗುಣವಾಗಿ ಸೀಟ್ ಹಂಚಿಕೆಯಾಗುತ್ತದಲ್ಲದೆ, ಆದರಲ್ಲಿ ಅರ್ಧ ಸೀಟುಗಳನ್ನು ಲಿಂಗಾಯತ ಮಹಿಳೆಯರಿಗೆ ಮೀಸಲಿರುತ್ತದೆ. ಹಾಗೆಯೇ ದಲಿತರ ಜನಸಂಖ್ಯೆ ಶೇ. 30 ಇದ್ದರೆ, ಅವರಿಗೆ ನಿಗದಿಪಡಿಸಲಾದ ಸೀಟುಗಳ ಸಂಖ್ಯೆಯಲ್ಲಿ ಅರ್ಧವನ್ನು ದಲಿತ ಮಹಿಳೆಯರಿಗೆ ನೀಡಲಾಗುತ್ತದೆ. ಈ ವ್ಯವಸ್ಥೆಯಲ್ಲಿ ಕೆಲವರು ನೇರವಾಗಿ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿದರೆ ಇನ್ನು ಕೆಲವರನ್ನು ಪಕ್ಷವೇ ಆಯ್ಕೆ ಮಾಡುತ್ತದೆ. ಹಾಗಾಗಿ ಎಲ್ಲಾ ಸಮುದಾಯಗಳು ಸಂಸತ್ತಿನಲ್ಲಿ ಪ್ರಾತಿನಿಧ್ಯ ಪಡೆಯುತ್ತವೆ.

ನೇಪಾಳದಂತಹ ವ್ಯವಸ್ಥೆಯನ್ನು ಭಾರತದಲ್ಲಿ ಜಾರಿಗೆ ತರುವುದು ಸಾಧ್ಯವಿಲ್ಲ. ಯಾಕೆಂದರೆ ತಮ್ಮ ಸಂವಿಧಾನದಲ್ಲಿ ದಲಿತರಿಗೆ ಮೀಸಲಾತಿ ನೀಡಲಾಗಿದೆಯಾದರೂ ಧರ್ಮಾಧಾರಿತ ಮೀಸಲಾತಿಯನ್ನು ನಮ್ಮ ಸಂವಿಧಾನ ಒಪ್ಪುವುದಿಲ್ಲ. ಆದ್ದರಿಂದ ಅಂತಹ ವ್ಯವಸ್ಥೆಯನ್ನು ಇಲ್ಲಿ ಅಳವಡಿಸಬೇಕೆಂದರೆ ನಮ್ಮ ಸಂವಿಧಾನಕ್ಕೆ ಹಲವಾರು ತಿದ್ದುಪಡಿಗಳನ್ನು ಮಾಡಬೇಕಲ್ಲದೆ ಅವುಗಳನ್ನು ಸಂಸತ್ತಿನಲ್ಲಿ 2/3 ಬಹುಮತದೊಂದಿಗೆ ಅಂಗೀಕರಿಸಬೇಕು. ಮಾತ್ರವಲ್ಲ, ಅವುಗಳನ್ನು ದೇಶದ ಎಲ್ಲಾ ರಾಜ್ಯಗಳ ವಿಧಾನ ಮಂಡಲಗಳು 2/3 ಬಹುಮತದೊಂದಿಗೆ ಅನುಮೋದಿಸಬೇಕು. ಮಹಿಳೆಯರಿಗೆ ಕೇವಲ 33% ಮೀಸಲಾತಿ ನೀಡುವ ವಿಷಯವೇ ಇಷ್ಟು ಕಷ್ಟವಾಗಿರುವಾಗ ನಮ್ಮ ದೇಶದ ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬದಲಾಯಿಸುವ ಅಂತಹ ತಿದ್ದುಪಡಿಗಳನ್ನು ತರಲು ಹಲವಾರು ದಶಕಗಳೇ ಬೇಕಾಗಬಹುದು.


ನ್ಯಾಯಬದ್ಧವಾಗಿ ಮಹಿಳೆಯರಿಗೆ 33% ಮೀಸಲಾತಿಯಲ್ಲ, 50% ಮೀಸಲಾತಿಯನ್ನು ಕೊಡಲೇಬೇಕು. ಆದರೆ ಸದ್ಯಕ್ಕೆ 33% ರಷ್ಟನ್ನಾದರೂ ಕೊಡಿ ಮಾರಾಯರೆ ಎಂದು ಹೇಳುವ ಪರಿಸ್ಥಿತಿ ನಿರ್ಮಾಣವಾಗಿದೆ. ■

ಯುವ ಸಾಹಿತಿಗಳನ್ನು ಪರಿಚಯಿಸುವ ಹೊಸ ಅಂಕಣ

ಕನ್ನಡದ ಯುವ ಬರಹಗಾರರನ್ನು ಪರಿಚಯಿಸುವ ಹೊಸ ಅಂಕಣ ಇದು.

ವಿಭಿನ್ನ ಅನುಭವಗಳು, ಗ್ರಹಿಕೆ, ಶೈಲಿಗಳೊಂದಿಗೆ ಈ ನೆಲದ ಬದುಕನ್ನು ಸೃಜನಶೀಲವಾಗಿ ಅಭಿವ್ಯಕ್ತಿಸುತ್ತಿರುವ ಹಾಗು ಒಟ್ಟಾರೆ ಕರ್ನಾಟಕದ ಸಾಹಿತ್ಯವನ್ನು ಇನ್ನಷ್ಟು ಸಮೃದ್ಧಗೊಳಿಸಬಲ್ಲ ಸಾಮರ್ಥ್ಯವಿರುವ ಹೊಸ ಯುವ ಬರಹಗಾರರನ್ನು ಈ ಅಂಕಣದಲ್ಲಿ ಪರಿಚಯಿಸಲಾಗುವುದು.


ನಮ್ಮೆಲ್ಲರ ನಚ್ಚಿನ ಬರಹಗಾರ, ಚಿಂತಕ ಹಾಗೂ ವಿಮರ್ಶಕ ಡಾ. ರಹಮತ್ ತರೀಕೆರೆ ಈ ಅಂಕಣ ಬರೆಯಲಿದ್ದಾರೆ.



ಶೀಘ್ರದಲ್ಲೇ ಆರಂಭ....

ಈಗ ಶಿವಾಜಿಯ ಸರದಿ!

ಮಹಾರಾಷ್ಟ್ರ ಸರ್ಕಾರ ಇತ್ತೀಚೆಗೆ ಒಂದು ಪ್ರಮುಖ ತೀರ್ಮಾನವನ್ನು ತೆಗೆದುಕೊಂಡಿದೆ. ಅಮೆರಿಕದ **Statue of Liberty** ಮಾದರಿಯಲ್ಲೇ ಅರಬ್ಬೀ ಸಮುದ್ರದಲ್ಲಿ ಶಿವಾಜಿಯ ಬೃಹತ್ ಪ್ರತಿಮೆಯೊಂದನ್ನು ಪ್ರತಿಷ್ಠಾಪಿಸುತ್ತದಂತೆ. ಇದಕ್ಕೆ ಏನಿಲ್ಲವೆಂದರೂ ಸುಮಾರು ಮುನ್ನೂರು ಕೋಟಿ ರೂಪಾಯಿಗಳು ಖರ್ಚಾಗುತ್ತದಂತೆ. ಈಗ ಮಹಾರಾಷ್ಟ್ರದಾದ್ಯಂತ ಇದೇ ಪ್ರಮುಖ ಚರ್ಚಾ ವಿಷಯ. ದುರಂತ ಎಂದರೆ, ಶಿವಾಜಿ ಪ್ರತಿಮೆಯನ್ನು ಪ್ರತಿಷ್ಠಾಪಿಸುವ ಸಮಿತಿಯ ಜವಾಬ್ದಾರಿಯನ್ನು ಯಾರಿಗೆ ವಹಿಸಬೇಕು ಎಂಬುದಾಗಿದೆಯೇ ಹೊರತು ಯಾವೊಬ್ಬ ರಾಜಕೀಯ ನಾಯಕನಾಗಲೀ, ಸಂಘಸಂಸ್ಥೆಗಳಾಗಲೀ ಇಂತಹುದ್ದೊಂದು ಪ್ರತಿಮೆ ಸ್ಥಾಪಿಸುವ ಅವಶ್ಯಕತೆಯೇ ಇಲ್ಲ ಎಂದು ಹೇಳುತ್ತಿಲ್ಲ. ರಾಜ್ಯದ ಜನತೆ ತಮ್ಮ ದುಡಿಮೆಯಿಂದ ಸಂಪಾದಿಸಿ ಕಟ್ಟಿದ ತೆರಿಗೆ ಹಣವನ್ನು ಈ ರೀತಿ ಪ್ರತಿಮೆ ಸ್ಥಾಪಿಸುವುದಕ್ಕೆ ಪೋಲು ಮಾಡಬಾರದು ಎಂದು ಒತ್ತಾಯಿಸುತ್ತಿಲ್ಲ. ಅದೇ ಮುನ್ನೂರು ಕೋಟಿ ದುಡ್ಡಿನಲ್ಲಿ ಎಷ್ಟೊಂದು ಬಡಬಗ್ಗರನ್ನು ಸಾಲದ ಬಾಧೆಯಿಂದ ಮುಕ್ತಗೊಳಿಸಬಹುದು, ತಲೆ ಮೇಲೆ ಸೂರಿಲ್ಲದ ಎಷ್ಟು ಜನರಿಗೆ ಸೂರು ಕೊಡಬಹುದು ಎಂದು ವಾದಿಸುತ್ತಿಲ್ಲ.


ಪುರಂದರೆ

ಈ ಹಿಂದೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಮಾಯಾವತಿಯವರು ತಮ್ಮ ಬಹುಜನ ಸಮಾಜ ಪಕ್ಷದ ಪ್ರಚಾರದ ಉದ್ದೇಶದಿಂದ, ತಮ್ಮ ವೈಯಕ್ತಿಕ ಪ್ರಚಾರದ ಉದ್ದೇಶಕ್ಕಾಗಿ ಇಡೀ ಉತ್ತರ ಪ್ರದೇಶದಾದ್ಯಂತ ತಮ್ಮ ಪ್ರತಿಮೆಗಳನ್ನು, ತಮ್ಮ ಪಕ್ಷದ ಸಂಕೇತವಾಗಿರುವ 'ಆನೆ'ಗಳ ಪ್ರತಿಮೆಗಳನ್ನು, ಅಂಬೇಡ್ಕರ್ ಪ್ರತಿಮೆಗಳನ್ನು ನಿಲ್ಲಿಸಿದ್ದರು. ಲಕ್ನೋದಲ್ಲಿ 100 ಎಕರೆ ಜಾಗದಲ್ಲಿ 1200 ಕೋಟಿ ವೆಚ್ಚದಲ್ಲಿ ಒಂದು ಆನೆ ಪಾರ್ಕನ್ನೇ ನಿರ್ಮಿಸುವ ತೀರ್ಮಾನ ಮಾಡಿದ್ದರು. ಮಾಯಾವತಿ ಹೀಗೆ ತಮ್ಮ ವೈಯಕ್ತಿಕ ಪ್ರಚಾರಕ್ಕಾಗಿ ಜನರ ತೆರಿಗೆ ಹಣವನ್ನು ಪೋಲು ಮಾಡುತ್ತಿರುವುದರ ವಿರುದ್ಧ ಕೇವಲ ಉತ್ತರ ಪ್ರದೇಶದಲ್ಲಿ ಮಾತ್ರವಲ್ಲ ಇಡೀ ದೇಶದಾದ್ಯಂತ ಪ್ರಗತಿಪರರು ವಿರೋಧಿಸಿದ್ದರು. ಈಗ ಮಹಾರಾಷ್ಟ್ರದಲ್ಲಿ ಶಿವಾಜಿ ಪ್ರತಿಮೆಗಾಗಿ 300 ಕೋಟಿ ಖರ್ಚು ಮಾಡಲು ಹೊರಟಿರುವ ನಿರ್ಧಾರವನ್ನು ಯಾರೊಬ್ಬರೂ ವಿರೋಧಿಸದಿರುವುದು ಸೋಜಿಗ. ಮಹಾರಾಷ್ಟ್ರದಲ್ಲಿ ಶಿವಾಜಿ ಮರಾಠಿ ಸ್ವಾಭಿಮಾನ, ಶೌರ್ಯಗಳ ಸಂಕೇತವಾಗಿಬಿಟ್ಟಿದ್ದಾನೆ. ಪ್ರತಿಯೊಂದು ರಾಜಕೀಯ ಪಕ್ಷವೂ, ಸಂಘಸಂಸ್ಥೆಗಳೂ, ರಾಜಕೀಯ ನಾಯಕರೂ ಶಿವಾಜಿಯ ಹೆಸರು ಹೇಳಿಕೊಂಡೇ ರಾಜಕೀಯ ಮಾಡುತ್ತಿದ್ದಾರೆ. ತಾವೇ ಶಿವಾಜಿಯ ನಿಜವಾದ ವಾರಸುದಾರರೆಂದು ಬೊಬ್ಬೆ ಹೊಡೆಯುತ್ತಾರೆ. ಮಹಾರಾಷ್ಟ್ರದಲ್ಲಿ ಭಾಳಠಾಕ್ರೆ ಮತ್ತು ಆತನ ಶಿವಸೇನೆ ಬೆಳೆದು ಪ್ರವರ್ಧಮಾನಕ್ಕೆ ಬಂದಿದ್ದೂ ಶಿವಾಜಿಯ ಹೆಸರಿನಲ್ಲೆ. ಈ ಕಾರಣಕ್ಕಾಗಿಯೇ ಇಂದು ಶಿವಾಜಿ ನಮ್ಮ ಬಡಬಗ್ಗರ ಮುನ್ನೂರು ಕೋಟಿ ನುಂಗುತ್ತಿದ್ದರೂ ಅದನ್ನು ಪ್ರಶ್ನಿಸುವುದಕ್ಕೆ ವಿರೋಧಿಸುವುದಕ್ಕೆ ಯಾವೊಬ್ಬ ನಾಯಕನೂ ತುಟಿಪಿಟಕ್ಕೆನ್ನುತ್ತಿಲ್ಲ.

ಶಿವಾಜಿ ಪ್ರತಿಮೆಯ ಪ್ರತಿಷ್ಠಾಪನೆಗಾಗಿ ಒಂದು ಸಮಿತಿ ರಚಿಸಲಾಗಿದ್ದು ಅದರ ನೇತೃತ್ವವನ್ನು ಬಾಬಾಸಾಹೇಬ್ ಪುರಂದರೆ ಎಂಬ ಬ್ರಾಹ್ಮಣನಿಗೆ ವಹಿಸಲಾಗಿದೆ. ಈತ ಶಿವಾಜಿಯ ಬಗ್ಗೆ ಹತ್ತಾರು ಕೃತಿಗಳನ್ನು ಬರೆದಿರುವಾತ. ಮರಾಠ ಮಹಾಸಂಘದ ಮುಖ್ಯಸ್ಥ ಪುರುಷೋತ್ತಮ್ ಖೇಡ್ಕರ್ ಎಂಬುವವರು ಶಿವಾಜಿಯಂಥ ಮರಾಠ ನಾಯಕನೊಬ್ಬನ ಪ್ರತಿಮೆ ನಿರ್ಮಾಣದ ಉಸ್ತುವಾರಿಯನ್ನು ಬಾಬಾಸಾಹೇಬ್ ಪುರಂದರೆ ಎಂಬ ಬ್ರಾಹ್ಮಣನಿಗೆ ವಹಿಸುವುದು ಸರಿಯಲ್ಲ, ಸರ್ಕಾರ ತನ್ನ ತೀರ್ಮಾನ ಬದಲಿಸದಿದ್ದರೆ ಹಿಂಸಾತ್ಮಕ ಹೋರಾಟ ಪ್ರಾರಂಭಿಸುವುದಾಗಿ ಎಚ್ಚರಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಶಿವಸೇನೆಯಿಂದ ಹೊರನಡೆದು ಮಹಾರಾಷ್ಟ್ರ ನವ ನಿರ್ಮಾಣ ಸೇನೆ ಕಟ್ಟಿಕೊಂಡಿರುವ ರಾಜ್ ಠಾಕ್ರೆ ಬಾಬಾಸಾಹೇಬ್ ಪುರಂದರೆಯವರೇ ಆ ಸಮಿತಿಯ ನೇತೃತ್ವ ವಹಿಸಿಕೊಳ್ಳಬೇಕು, ಸರ್ಕಾರವೇನಾದರೂ ತನ್ನ ತೀರ್ಮಾನ ಬದಲಿಸಿದರೆ ತಾವೂ ಹಿಂಸಾತ್ಮಕ ಚಳವಳಿ ನಡೆಸುತ್ತೇವೆ ಎಂದು ಪ್ರತಿ-ಎಚ್ಚರಿಕೆ ಕೊಟ್ಟಿದ್ದಾರೆ. ಹೀಗೆ, ಇದೊಂದು ಜಾತಿ ವಿಷಯವಾಗಿ ತಿರುವು ತೆಗೆದುಕೊಂಡು ಶಿವಾಜಿ ಪ್ರತಿಮೆ ಸ್ಥಾಪಿಸುವುದಕ್ಕೆ ಅಷ್ಟೊಂದು ದೊಡ್ಡ ಮಟ್ಟದ ಸಾರ್ವಜನಿಕ ಹಣ ಪೋಲು ಮಾಡಬೇಕೆ ಅಥವ ಬೇಡವೇ ಎಂಬುದರ ಬಗ್ಗೆ ಚರ್ಚೆಯಾಗುವುದರ ಬದಲು ಅದನ್ನು ಯಾರು ನಿರ್ಮಿಸಬೇಕು ಎಂಬುದರ ಸುತ್ತವೇ ಚರ್ಚೆ ನಡೆಯುತ್ತಿದೆ.


ಶಿವಾಜಿ

ಇಲ್ಲಿ ಬಾಬಾಸಾಹೇಬ್ ಪುರಂದರೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲೇಬೇಕು. ಈತ ಶಿವಾಜಿಯ ಬಗ್ಗೆ ಬರೆದ ಎಲ್ಲಾ ಪುಸ್ತಕ, ಲೇಖನ, ನಾಟಕಗಳಲ್ಲೂ ಶಿವಾಜಿಯನ್ನು ಒಬ್ಬ ಮುಸ್ಲಿಮ್ ವಿರೋಧಿಯಾಗಿದ್ದ ಇಸ್ಲಾಮ್ ವಿರೋಧಿಯಾಗಿದ್ದ ಹಿಂದೂ ರಾಷ್ಟ್ರ ನಿರ್ಮಾಣವೇ ಅವನ ಗುರಿಯಾಗಿತ್ತು ಎಂದೆಲ್ಲಾ ಚಿತ್ರಿಸಿದ್ದಾರೆ. ವಾಸ್ತವದಲ್ಲಿ ಶಿವಾಜಿ ಇದ್ದುದರಲ್ಲಿ ಜಾತ್ಯತೀತ ಮನಸ್ಸುಳ್ಳ ರಾಜನಾಗಿದ್ದ ಎಂಬು ದನ್ನು ಎಲ್ಲಾ ಚರಿತ್ರಕಾರರೂ ದಾಖಲೆ ಸಮೇತ ಸಾಬೀತುಮಾಡಿದ್ದಾರೆ. ಶಿವಾಜಿ ಹಿಂದೂ, ಮುಸ್ಲಿಮರೆನ್ನದೇ ಎಲ್ಲಾ ಬಡ ರೈತರ ಮೇಲಿನ ತೆರಿಗೆಯನ್ನು ಗಣನೀಯವಾಗಿ ಕಡಿಮೆ ಮಾಡಿದ್ದ. ತನ್ನ ಸೇನೆಗೆ ಸೇರಿಸಿಕೊಳ್ಳುವಾಗಲೂ ಧರ್ಮ ಅವನಿಗೊಂದು ಮಾನದಂಡವೇ ಆಗಿರಲಿಲ್ಲ. ಶಿವಾಜಿ ಸೇನೆಯ ಮೂರನೇ ಒಂದು ಭಾಗದಷ್ಟು ಸೈನಿಕರು ಮುಸ್ಲಿಮರೇ ಆಗಿದ್ದರು ಎಂಬ ಸತ್ಯ ಇದನ್ನು ಮತ್ತಷ್ಟು ಪುಷ್ಟೀಕರಿಸುತ್ತದೆ. ಸಿದ್ಧಿ ಸಂಬಾಲ್ ಎಂಬ ಮುಸ್ಲಿಮನೇ ಶಿವಾಜಿಯ ನೌಕಾಪಡೆಯ ಮುಖ್ಯಸ್ಥನಾಗಿದ್ದ. ಔರಂಗಜೇಬನ ಸೈನ್ಯ ಶಿವಾಜಿಯನ್ನು ಬಂಧಿಸಿ ಆಗ್ರಾ ಕೋಟೆಯಲ್ಲಿ ಕೂಡಿಟ್ಟಾಗ ಅಲ್ಲಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಆತ ಬಹಳ ನಂಬಿಕೆಯಿಂದ ಇಬ್ಬರು ವ್ಯಕ್ತಿಗಳ ಸಹಾಯ ಪಡೆದುಕೊಂಡಿದ್ದ. ಅವರಲ್ಲಿ ಒಬ್ಬನಾಗಿದ್ದ ಮದರಿ ಮೆಹ್ತಾರ್ ಎಂಬುವವನು ಒಬ್ಬ ಮುಸ್ಲಿಮನೇ ಆಗಿದ್ದ. ಶಿವಾಜಿ ಆಡಳಿತದಲ್ಲಿ ತನ್ನ ಬಹುನಂಬುಗೆಯ ಕಾರ್ಯದರ್ಶಿಯಾಗಿ ಮೌಲಾನಾ ಅಲಿ ಎಂಬ ಮುಸ್ಲಿಮನನ್ನು ನೇಮಿಸಿಕೊಂಡಿದ್ದ. ಶಿವಾಜಿಯ ಸೇನೆಯ ಫಿರಂಗಿ ಪಡೆಯ ಮುಖ್ಯಸ್ಥನಾಗಿದ್ದ ಇಬ್ರಾಹಿಂ ಗರ್ದಿ ಕೂಡ ಒಬ್ಬ ಮುಸ್ಲಿಮನೆ. ತನ್ನ ರಾಜಧಾನಿಯಾಗಿದ್ದ ರಾಯಘಡದಲ್ಲಿ ತನ್ನ ಅರಮನೆಯ ಮುಂದೆಯೇ ಮುಸ್ಲಿಮರ ಪ್ರಾರ್ಥನೆಗಾಗಿಯೇ ಒಂದು ವಿಶೇಷ ಮಸೀದಿಯನ್ನು ಕಟ್ಟಿಸಿಕೊಟ್ಟಿದ್ದ. ಶಿವಾಜಿ ಯಾವುದಾದರೂ ಮುಸ್ಲಿಮ್ ರಾಜನೆದುರು ಯುದ್ಧಕ್ಕೆ ಹೋಗುವ ಮುನ್ನ ತನ್ನ ಸೈನಿಕರಿಗೆ ವಿಶೇಷ ನಿರ್ದೇಶನಗಳನ್ನು ಕೊಡುವಾಗ "ನಿಮಗೆ ಎಲ್ಲಾದರೂ ಖುರಾನ್ ಸಿಕ್ಕಿದರೆ ಅದಕ್ಕೆ ಅವಮಾನ ಮಾಡಬೇಡಿ. ಅದನ್ನು ಗೌರವದಿಂದಿಟ್ಟುಕೊಳ್ಳಿ. ಯಾವುದೇ ಒಬ್ಬ ಮುಸ್ಲಿಮ್ ವ್ಯಕ್ತಿ ಸಿಕ್ಕರೆ ಅದನ್ನು ಅವನಿಗೆ ಕೊಡಿ" ಎಂದು ಕಡ್ಡಾಯವಾಗಿ ಹೇಳುತ್ತಿದ್ದ. ಶಿವಾಜಿಯ ಸೈನಿಕರು ಬಸ್ಸೇಯಿನ್ಸ್‌ನ ನವಾಬನ ಸೈನಿಕರನ್ನು ಸೋಲಿಸಿ ಅವನ ಸೊಸೆಯನ್ನು ಸೆರೆಯಾಳಾಗಿ ಹಿಡಿದುಕೊಂಡು ಶಿವಾಜಿಗೆ ಒಪ್ಪಿಸಿದಾಗ ಆತ ಆಕೆಯ ಎದುರು ಶಿರಬಾಗಿ ನಿಂತು ಸಕಲ ಗೌರವಗಳೊಂದಿಗೆ ಆಕೆಯನ್ನು ವಾಪಸ್ಸು ಬಿಟ್ಟು ಬರುವಂತೆ ತನ್ನ ಸೈನಿಕರಿಗೆ ಆದೇಶಿಸಿದ ಕತೆ ಎಲ್ಲರಿಗೂ ಗೊತ್ತಿದೆ. ಗುಜರಾತ್‌ನಲ್ಲಿ ಒಂದು ಚರ್ಚ್‌ನ ಮೇಲೆ ದಾಳಿ ನಡೆದಾಗ ಅದರ ಪಾದ್ರಿಯಾಗಿದ್ದ ಅಂಬ್ರೋಸ್‌ಗೆ ಶಿವಾಜಿ ಪರಿಹಾರ ಕೊಟ್ಟಿದ್ದ. ಈ ಎಲ್ಲಾ ಚಾರಿತ್ರಿಕ ಸತ್ಯಗಳು ಹೇಗೆ ಶಿವಾಜಿ ಒಬ್ಬ ಜಾತ್ಯತೀತ ಮನಸ್ಸಿನ ರಾಜನಾಗಿದ್ದ ಎಂಬುದನ್ನು ರುಜುವಾತು ಮಾಡುತ್ತವೆ. ಆದರೆ, ಚರಿತ್ರೆಯನ್ನು ತಿರುಚಿ ಅವನನ್ನು ಮುಸ್ಲಿಮ್ ವಿರೋಧಿಯಂತೆ ಬಣ್ಣಿಸಿದ ಬಾಬಾಸಾಹೇಬ್ ಪುರಂದರೆಯನ್ನು ಶಿವಾಜಿ ಪ್ರತಿಮೆಯ ಉಸ್ತುವಾರಿ ವಹಿಸುತ್ತಾನೆಂದರೆ ಅದಕ್ಕೆ ವಿರೋಧ ವ್ಯಕ್ತವಾಗುತ್ತಿರುವುದು ಒಳ್ಳೆಯದೆ. ಆದರೆ, ಅದಕ್ಕೂ ಮೀರಿ ಜನ ಕಷ್ಟಪಟ್ಟು ದುಡಿದು ಕಟ್ಟಿದ ಟ್ಯಾಕ್ಸ್ ಹಣವನ್ನು ಈ ಪ್ರತಿಮೆ ನಿರ್ಮಾಣದಂತಹ ಅನವಶ್ಯಕ ಕೆಲಸಗಳಿಗೆ ಬಳಸುವುದರ ವಿರುದ್ಧ ನಿಜವಾದ ಪ್ರತಿಭಟನೆ ನಡೆಯಬೇಕಾಗಿತ್ತು. ಹಾಗಾಗದಿರುವುದು ನಮ್ಮ ದುರಂತ.



ಸುತ್ತ ಮುತ್ತ
▶ಕುಮಾರ್ ಬುರಡಿಕಟ್ಟಿ

ಇದು ಕಾರ್ಪೊರೇಟ್ ಆಡಳಿತ


ನಗರಗಳ ಟ್ರಾಫಿಕ್ ಜಾಮ್‌ನಿಂದ ಹಿಡಿದು ಏಡ್ಸ್ ನಿವಾರಣೆಯ ತನಕ ಸಮಾಜದ ಎಲ್ಲಾ ಸಮಸ್ಯೆಗಳಿಗೂ ಕಾರ್ಪೊರೇಟ್ ಮಾದರಿಯ ಆಡಳಿತವೊಂದೇ ಮಾರ್ಗ ಎಂದು ಹಲವು ಕಾರ್ಪೊರೇಟ್ ದೊರೆಗಳು ವಾದಿಸುತ್ತಾರೆ. ಬೆಂಗಳೂರಿನ ಆಡಳಿತವನ್ನು ನಮಗೆ ವಹಿಸಿಕೊಡಿ ಕೇವಲ ಐದು ವರ್ಷಗಳಲ್ಲಿ ಎಷ್ಟೊಂದು ದಕ್ಷ ಆಡಳಿತ ಕೊಟ್ಟು ಅಮೋಘ ಅಭಿವೃದ್ಧಿ ಮಾಡಿ ತೋರಿಸುತ್ತೇವೆ ಎಂದು ಕೆಲವು ಕಾರ್ಪೊರೇಟ್ ಧಣಿಗಳು ಈ ಹಿಂದೆ ಸವಾಲು ಹಾಕಿದ್ದೂ ಉಂಟು. ಇನ್ನೊಂದಿಷ್ಟು ದಿನ ಕಳೆದರೆ ಇಡೀ ದೇಶದ ಆಡಳಿತವನ್ನು ನಡೆಸುವುದಕ್ಕೆ ಚುನಾವಣೆಯ ಮೂಲಕ ಜನಪ್ರತಿನಿಧಿಗಳನ್ನು, ಸರ್ಕಾರಗಳನ್ನು ಆರಿಸುವ ದೀರ್ಘ ಪ್ರಕ್ರಿಯೆಯ ಅವಶ್ಯಕತೆಯೇ ಇಲ್ಲ, ನಮಗೆ ವಹಿಸಿಕೊಡಿ ನಾವೇ ನೋಡಿಕೊಳ್ಳುತ್ತೇವೆ ಎನ್ನುವ ಹಂತಕ್ಕೆ ಬಂದರೂ ಆಶ್ಚರ್ಯವಿಲ್ಲ. ಈ ದೇಶವನ್ನು ಒಂದು ಕಂಪೆನಿಯೆಂತಲೂ, ಅದರ ಸಮಸ್ಯೆಗಳನ್ನು ಕಂಪೆನಿಯೊಂದು ಎದುರಿಸುವ ಸಮಸ್ಯೆ ಎಂತಲೂ ಈ ಕಾರ್ಪೊರೇಟ್ ಧಣಿಗಳು ತಿಳಿದುಕೊಂಡಂತಿದೆ. ಇವರ ಕೈಗೆ ಆಡಳಿತ ಕೊಟ್ಟರೆ ಏನಾಗಬಹುದು ಎಂಬುದಕ್ಕೆ ಇಲ್ಲೊಂದು ಚಿಕ್ಕ ಉದಾಹರಣೆಯಿದೆ.

ಜಗತ್ತಿನ ಅತಿದೊಡ್ಡ ಶ್ರೀಮಂತನಾಗಿದ್ದ ಸಾಫ್ಟ್‌ವೇರ್ ಕುಳ ಬಿಲ್ ಗೇಟ್ಸ್ ಭಾರತದಲ್ಲಿ ಏಡ್ಸ್ ನಿವಾರಣೆಗಾಗಿ ತನ್ನ **Bill & Melinda Gates Foundation** ಮೂಲಕ 100 ಮಿಲಿಯನ್ ಡಾಲರ್ (ಸುಮಾರು 400 ಕೋಟಿ ರೂಪಾಯಿ) ಕೊಡುವುದಾಗಿ 2002ರಲ್ಲಿ ಘೋಷಿಸಿದ್ದ. ಆಮೇಲೆ ಭಾರತದಲ್ಲಿ ಅತೀ ವೇಗವಾಗಿ ಹರಡುತ್ತಿರುವ ಏಡ್ಸ್ ರೋಗದಿಂದ ಲಕ್ಷಾಂತರ ಜನರು ಸಾಯುತ್ತಿರುವುದನ್ನು ಕಂಡು ಬಿಲ್ ಗೇಟ್ಸ್ ಈ ಮೊತ್ತವನ್ನು 558 ಮಿಲಿಯನ್ ಡಾಲರ್‌ಗೆ ಏರಿಸಿದ. ಅಂದರೆ, ಸುಮಾರು ಎರಡೂವರೆ ಸಾವಿರ ಕೋಟಿ ರೂಪಾಯಿಗಳು. ವಾಸ್ತವದಲ್ಲಿ **Bill & Melinda Gates Foundation** ಒಂದು ಉದ್ದೇಶಕ್ಕಾಗಿ ಕೊಟ್ಟ ಅತಿದೊಡ್ಡ ಮೊತ್ತ ಇದಾಗಿತ್ತು.

ಗೇಟ್ಸ್ ಫೌಂಡೇಶನ್ ಭಾರತದಲ್ಲಿ ಏಡ್ಸ್ ನಿವಾರಣೆಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿಭಾಯಿಸುವುದಕ್ಕಾಗಿ ಅತ್ಯುತ್ತಮ ವ್ಯಕ್ತಿಗಳನ್ನು ಹುಡುಕಿಕೊಡುವಂತೆ **McKinsey** ಎಂಬ ಕನ್ಸಲ್ಟೆನ್ಸಿ ಏಜೆನ್ಸಿಯನ್ನು ಸಂಪರ್ಕಿಸಿತು. ಈ ಏಜೆನ್ಸಿಗೆ ಬೇರೆ ಬೇರೆ ಕಂಪೆನಿಗಳನ್ನು ಯಶಸ್ವಿಯಾಗಿ ಮುನ್ನಡೆಸಬಲ್ಲ ಬಿಸಿನೆಸ್‌ಮೆನ್‌ಗಳನ್ನು ಹುಡುಕಿಕೊಡುವುದರಲ್ಲಿ ಅನುಭವಿತ್ತೇ ಹೊರತು ಏಡ್ಸ್‌ನಂತಹ ಸಮಸ್ಯೆಯೊಂದನ್ನು ನಿಭಾಯಿಸ ಬಲ್ಲವರನ್ನು ಹುಡುಕಿದ ಅನುಭವವಿರಲಿಲ್ಲ ಎಂಬುದನ್ನಿಲ್ಲಿ ನೆನಪಿಡಬೇಕು. ಅದರೂ ಏಡ್ಸ್ ನಿವಾರಣೆಯ ಕೆಲಸ ಕೂಡ ಒಂದು ಕಂಪೆನಿಯನ್ನು ಮುನ್ನಡೆಸಿದಂತೆಯೇ ಎಂದುಕೊಂಡು ಅಶೋಕ್ ಅಲೆಕ್ಸಾಂಡರ್ ಎಂಬ ಯಶಸ್ವಿ ವ್ಯಕ್ತಿಯನ್ನು ಆಯ್ದುಕೊಂಡರು. ಆತನಿಗೂ ಏನಾದರೊಂದು ಹೊಸತನ್ನು ಸಾಧಿಸಿ ತೋರಿಸಬೇಕು ಎಂಬ ಹಠವಿತ್ತು. ಈ ಕೆಲಸವನ್ನು ಖುಷಿಯಿಂದಲೇ ಒಪ್ಪಿಕೊಂಡ. ಕೆಲವೇ ಸಮಯದಲ್ಲಿ ಆತನ ನೇತೃತ್ವದಲ್ಲಿ ಆಹ್ವಾನ್ ಎಂಬ ಸಂಘಟನೆ ಮತ್ತು ಅದರ ನೇತೃತ್ವ ವಹಿಸಲು 15 ಜನರ ತಂಡವೊಂದು ರೂಪುಗೊಂಡಿತು. ಇವರೆಲ್ಲಾ ಮ್ಯಾನೇಜ್‌ಮೆಂಟ್ ಕೋರ್ಸಿನಲ್ಲಿ ಉನ್ನತ ಪದವಿ ಪಡೆದವರಾಗಿದ್ದರು. ಕಾರ್ಪೊರೇಟ್ ಕಂಪೆನಿಗಳಲ್ಲಿ ಕೆಲಸ ಮಾಡಿದ ಅನುಭವುಳ್ಳವರಾಗಿದ್ದರು. ಅವರ ಓದು, ಅನುಭವ, ಆಲೋಚನೆ ಎಲ್ಲವೂ ಒಂದು ಕಾರ್ಪೊರೇಟ್ ಕಂಪೆನಿಯನ್ನು ಯಶಸ್ವಿಯಾಗಿ ಮುನ್ನಡೆಸುವುದು, ಉದ್ಯಮದಲ್ಲಿ ಲಾಭಗಳಿಸುವುದು ಇವುಗಳ ಸುತ್ತಲೇ ಇತ್ತು. ಅಂತಹ ಒಂದು ತಂಡ ಭಾರತದಲ್ಲಿ ಏಡ್ಸ್ ನಿವಾರಣೆಯ ಕೆಲಸಕ್ಕೆ ಕೈಹಾಕಿತ್ತು! ಈ ತಂಡ ಮೊದಲು ಏಡ್ಸ್ ಸಂಬಂಧಿಸಿದ ಅಂಕಿಅಂಶಗಳನ್ನು ಕಲೆ ಹಾಕಿ ಅಧ್ಯಯನ ಮಾಡಿತು. ನಂತರ ತಮ್ಮ ಮ್ಯಾನೇಜ್‌ಮೆಂಟ್ ಕೋರ್ಸಿನಲ್ಲಿ ಓದಿರುವುದನ್ನು ಈ ನಿರ್ದಿಷ್ಟ ವಿಚಾರಕ್ಕೆ ಅನ್ವಯಿಸಿ ಆಹ್ವಾನ್ ಸಂಘಟನೆಯನ್ನು ಒಂದು **'venture'** (ಕಂಪೆನಿ) ಎಂತಲೂ, ಏಡ್ಸ್ ತಡೆ ಕಾರ್ಯಕ್ರಮವನ್ನು **'franchise'** (ಗುತ್ತಿಗೆದಾರ) ಎಂತಲೂ, ವೇಶ್ಯೆಯರನ್ನು **'consumer'** (ಗ್ರಾಹಕ) ಎಂತಲೂ ವ್ಯಾಖ್ಯಾನಿಸಿ ಕಾರ್ಯೋನ್ಮುಖರಾದರು.


ಬಿಲ್‌ಗೇಟ್ಸ್

ಒಂದು **typical** ಕಾರ್ಪೊರೇಟ್ ಸಂಸ್ಥೆಯನ್ನು ಪ್ರಾರಂಭಿಸುವ ರೀತಿಯಲ್ಲೇ ದೊಡ್ಡ ಪ್ರಮಾಣದಲ್ಲಿ ಆರು ರಾಜ್ಯಗಳಲ್ಲಿ ಒಂದೇ ಬಾರಿಗೆ ಆಹ್ವಾನ್ ಸಂಘಟನೆಯನ್ನು ಪ್ರಾರಂಭಿಸಲಾಯಿತು. ಇದರ ರಚನೆ ಒಂದು ಪಿರಮಿಡ್ ಆಕಾರದಲ್ಲಿದ್ದು ತುದಿಯಲ್ಲಿ ಆಹ್ವಾನ್ ಸಂಸ್ಥೆ ಮತ್ತದರ ನಾಯಕ ಅಶೋಕ್ ಅಲೆಕ್ಸಾಂಡರ್, ಅದರ ಕೆಳಗೆ 100 ಸರ್ಕಾರೇತರ ಸಂಘಟನೆಗಳು (ಎನ್‌ಜಿಓ) ಕಾರ್ಯನಿರ್ವಹಿಸುತ್ತಿದ್ದವು. ಆಹ್ವಾನ್ 2003ರಲ್ಲಿ ಮೂರು ಗುರಿಗಳನ್ನು ಹಾಕಿಕೊಂಡಿತ್ತು: ಒಂದು, ಏಡ್ಸ್ ರೋಗ ಹರಡುವಿಕೆಯನ್ನು ತಡೆಯುವುದು. ಎರಡು, ಆರಂಭದಲ್ಲಿ ಆರು ರಾಜ್ಯಗಳಲ್ಲಿ ಏಡ್ಸ್ ತಡೆ ಕಾರ್ಯಕ್ರಮವನ್ನು ಪ್ರಾರಂಭಿಸಿ ನಂತರ ಅದನ್ನು ಇಡೀ ದೇಶವ್ಯಾಪಿಯಾಗಿ ವಿಸ್ತರಿಸುವುದು. ಮೂರು, ತಾನೇ ಒಂದು ಮಾದರಿ ಕಾರ್ಯಕ್ರಮವನ್ನು ರೂಪಿಸಿ ತೋರಿಸುವ ಮೂಲಕ ಸರ್ಕಾರ ಆ ಕಾರ್ಯಕ್ರಮವನ್ನು ಮುಂದುವರೆಸುವಂತೆ ಮಾಡುವುದು. ಆದರೆ, ಕೇವಲ ಆರು ವರ್ಷಗಳಲ್ಲಿ ಆಹ್ವಾನ್ ಈ ಮೂರು ಗುರಿಗಳಲ್ಲಿ ಒಂದನ್ನೂ ಮುಟ್ಟಲಾಗದೇ ಸಂಪೂರ್ಣವಾಗಿ ವಿಫಲಗೊಂಡಿತು. ಆದರೆ, ಎರಡೂವರೆ ಸಾವಿರ ಕೋಟಿ ರೂಪಾಯಿ ಮಾತ್ರ ಪೂರ್ಣವಾಗಿ ಖರ್ಚಾಗಿತ್ತು!


ಅಶೋಕ್ ಅಲೆಗ್ಸಾಂಡರ್

ಆಹ್ವಾನ್ ಸಂಸ್ಥೆಯ ಆಂಬುಲೆನ್ಸ್‌ಗಳು ವೇಶ್ಯಾವಾಟಿಕೆಯ ಏರಿಯಾಗಳಿಗೆ ಹೋದರೆ ಅವು ಪೊಲೀಸ್ ವ್ಯಾನುಗಳೆಂದೇ ಪರಿಗಣಿಸಿ ವೇಶ್ಯೆಯರ್‍ಯಾರೂ ಅದರ ಬಳಿ ಹೋಗುತ್ತಿರಲಿಲ್ಲ. ವೇಶ್ಯಾವೃತ್ತಿಯಲ್ಲಿರುವವರಲ್ಲಿ ಬಹುತೇಕರು ಅನಕ್ಷರಸ್ಥರು ಇಲ್ಲವೇ ತಮ್ಮ ಮಾತೃಭಾಷೆಯಲ್ಲಿ ಕನಿಷ್ಠ ಓದುವುದಕ್ಕೆ ಬರೆಯುವುದಕ್ಕೆ ತಿಳಿದುಕೊಂಡವರು. ಆದರೆ, ಆಹ್ವಾನ್‌ನ ಸಂಸ್ಥೆಯು ಏಡ್ಸ್ ಜಾಗೃತಿಗಾಗಿ ಹೊರತಂದಿದ್ದ ಪುಸ್ತಕ, ಕರಪತ್ರ, ಪೋಸ್ಟರ್ ಎಲ್ಲವೂ ಇಂಗ್ಲಿಷಿನಲ್ಲಿರುತ್ತಿದ್ದವು.

ಎರಡೂವರೆ ಸಾವಿರ ದುಡ್ಡೆಲ್ಲಿ ಹೋಯಿತು? ಆಹ್ವಾನ್ ಸಂಸ್ಥೆಯ ಮತ್ತು ಅದರ ಕೆಳಗೆ ಕಾರ್ಯನಿರ್ವಹಿಸುತ್ತಿದ್ದ ಎಲ್ಲಾ ಎನ್‌ಜಿಓಗಳ ಆಫೀಸುಗಳು ಸಂಪೂರ್ಣವಾಗಿ ಹವಾನಿಯಂತ್ರಿತವಾಗಿದ್ದವು. ಅಶೋಕ್ ಅಲೆಕ್ಸಾಂಡರ್ ಪ್ರತಿ ತಿಂಗಳು 14 ಲಕ್ಷ ರೂಪಾಯಿಗಳನ್ನು ಸಂಬಳವಾಗಿ ತೆಗೆದುಕೊಳ್ಳುತ್ತಿದ್ದ. ಇದು ಬಿಲ್ ಗೇಟ್ಸ್ ಫೌಂಡೇಶನ್‌ನಲ್ಲೇ ಎರಡನೇ ಅತಿಹೆಚ್ಚಿನ ಸಂಬಳವಾಗಿತ್ತು. ಜಾಂಟಿ ರಾಜಗೋಪಾಲನ್ ಎಂಬ ಇನ್ನೊಬ್ಬ ವ್ಯಕ್ತಿಗೆ ಆಂಧ್ರ ಪ್ರದೇಶ ಮತ್ತು ತಮಿಳುನಾಡುಗಳ ಕೆಲವು ನಿರ್ದಿಷ್ಟ ಪ್ರದೇಶಗಳನ್ನು ವಹಿಸಲಾಗಿತ್ತು. ಆದರೆ, ಅವರು ತಮ್ಮ ಕಾರ್ಯಕ್ಷೇತ್ರದಲ್ಲಿದ್ದುಕೊಂಡು ಕೆಲಸ ಮಾಡದೇ ಹೈದರಾಬಾದಿನಲ್ಲಿದ್ದುಕೊಂಡು ಪ್ರತೀ ತಿಂಗಳು ಎರಡು ಬಾರಿ ವಿಮಾನದಲ್ಲಿ ಆ ಪ್ರದೇಶಗಳಿಗೆ ಹೋಗಿಬರುತ್ತಿದ್ದರು. ಇದು ಒಬ್ಬ ವ್ಯಕ್ತಿಯ ಕತೆಯಲ್ಲ, ಇಡೀ ಸಂಸ್ಥೆಯ ಉನ್ನತ ಅಧಿಕಾರಿಗಳೆಲ್ಲರೂ ಇದೇ ರೀತಿಯಲ್ಲಿ ಆಡಂಬರದ ಜೀವನ ನಡೆಸುತ್ತಿದ್ದರು. ಏಡ್ಸ್ ಬಗ್ಗೆ ಅರಿವು ಮೂಡಿಸುವುದಕ್ಕಾಗಿ ಈ ಸಂಸ್ಥೆ ಕೋಟಿ ಕೋಟಿ ಖರ್ಚು ಮಾಡಿ ಉತ್ಕೃಷ್ಟ ದರ್ಜೆಯ ಪೇಪರ್ ಬಳಸಿ ಫ್ಯಾನ್ಸಿಯಾಗಿರುವ ಪುಸ್ತಕಗಳನ್ನು ಹೊರತರುತ್ತಿದ್ದರು. ಅದೂ ವೇಶ್ಯಾವಾಟಿಕೆಯಲ್ಲಿ ತೊಡಗಿರುವ ಜನರಿಗೆ ಅರ್ಥವಾಗದ ಇಂಗ್ಲಿಷಿನಲ್ಲಿಯೇ.

ಈಗ ಆರು ವರ್ಷ ಮುಗಿದ ಮೇಲೆ ಕೈಯಲ್ಲಿದ್ದ ದುಡ್ಡೆಲ್ಲಾ ಖಾಲಿಯಾಗಿದೆ. ಆರು ವರ್ಷಗಳ ಹಿಂದೆ ಹಾಕಿಕೊಂಡಿದ್ದ ಮೂರು ಗುರಿಗಳಲ್ಲಿ ಒಂದನ್ನೂ ಮುಟ್ಟಲಾಗಿಲ್ಲ. ಇದರ ಸಹವಾಸವೇ ಬೇಡ ಎಂದುಕೊಂಡು ಇಡೀ ಸಂಸ್ಥೆ ನಡೆಸುತ್ತಿದ್ದ ಕಾರ್ಯಕ್ರಮವನ್ನೆಲ್ಲಾ ಸರ್ಕಾರಕ್ಕೆ ವಹಿಸಲು ಸಿದ್ಧರಾಗಿದ್ದಾರೆ. ಆದರೆ, ಸರ್ಕಾರ ಈ ಹೊರೆಯನ್ನು ಹೊತ್ತುಕೊಳ್ಳಲು ಸಿದ್ಧವಿಲ್ಲ. ಆಹ್ವಾನ್ ಎಂಬ ಈ 'ಕಂಪೆನಿ' ಮುಚ್ಚುತ್ತಿರುವುದು ಖಾತ್ರಿಯಾಗುತ್ತಿದ್ದಂತೆಯೇ ಲಕ್ಷಾಂತರ ರೂಪಾಯಿ ಸಂಬಳ ಪಡೆಯುತ್ತಿದ್ದ ಅದರ ಎಂಬಿಎ ನೌಕರರೆಲ್ಲಾ ಅಲ್ಲಿಂದ ಕಾಲ್ತೆಗೆಯಲಾರಂಭಿಸಿದ್ದಾರೆ.

ಇದು ಕಾರ್ಪೊರೇಟ್ ಆಡಳಿತದ ಮಾದರಿ. ಕೇವಲ ಒಂದು ಏಡ್ಸ್ ನಿಯಂತ್ರಣಾ ಕಾರ್ಯಕ್ರಮವನ್ನು ನಡೆಸಲಾಗದವರ ಕೈಗೆ ಇಡೀ ದೇಶದ ಆಡಳಿತವನ್ನು ಕೊಟ್ಟರೆ ಇನ್ನೇನಾಗಬಹುದು? ■

ಜ್ಯೋತಿಷಿಗಳ ಮಾತುಕೇಳಿ ಯಡ್ಡಿ ಮತ್ತೆ ಮದುವೆಯಾಗುತ್ತಾರಾ?

ಮುಖ್ಯಮಂತ್ರಿ ಯಡಿಯೂರಪ್ಪನವರ ಆಪ್ತ ವಲಯದ ...ರ ಬಿಜೆಪಿಯಲ್ಲಿ ಭಿನ್ನಮತ ಭುಗಿಲೇಳಲು ಕಾರಣ ... ಗೊತ್ತೇ? ಯಡ್ಡಿಯ ಜಾತಕ!

ಹೌದು, ಯಡ್ಡಿಯ ಜಾತಕ ನೋಡಿದ್ದ ಜ್ಯೋತಿಷಿಗಳೆಲ್ಲಾ ...ಗೇ ಆಗುತ್ತೆ'' ಎಂದು ಹೇಳಿದ್ದರಂತೆ. ಅದಕ್ಕೆ ಪರಿಹಾರ ...ವ ಸೂಚಿಸಿದ್ದಾರಂತೆ. ಆದರೆ ಜ್ಯೋತಿಷಿಗಳು ಸೂಚಿಸಿ... ಪರಿಹಾರ ಕಷ್ಟಸಾಧ್ಯವಾಗಿರುವುದು ಯಡ್ಡಿಯ ... ಹೆಚ್ಚಿಸಿದೆ ಎನ್ನುತ್ತಿವೆ ಈ ಮೂಲಗಳು.

ಜ್ಯೋತಿಷಿಗಳ ಪ್ರಕಾರ ಯಡ್ಡಿ ಜಾತಕದಲ್ಲಿ ಅವರಿಗೀಗ ...ಬಲವಿಲ್ಲವಂತೆ. ಹೀಗಾಗಿ ಮುಖ್ಯಮಂತ್ರಿಯಾಗಿ ...ಮು ಮುಂದುವರೆಯುವುದು ಕಷ್ಟವಂತೆ. ಆದರೆ ...ಕಾರದಲ್ಲಿ ಅವರು ಮುಂದುವರೆಯಬೇಕಾದರೆ ವಿಶೇಷ ...ವ ಶಕ್ತಿ' ಬೇಕೇ ಬೇಕಂತೆ. ಅದನ್ನು ಪಡೆಯಲು ...ಡ್ಡಿಯ ಆಪ್ತ ಜ್ಯೋತಿಷ್ಯ ಬಳಗ ಹೋಮ-ಹವನಗಳನ್ನು ...ಳದಲ್ಲಿ ಮಾಡಿಸಿದ್ದೂ ಆಗಿದೆಯಂತೆ.

ನೆನಪಿದೆಯೇ? ಚುನಾವಣೆ ಮುಗಿದನಂತರ ಯಡ್ಡಿ ...ಪಾಲ್ ಆಸ್ಪತ್ರೆಯಲ್ಲಿ ರೆಸ್ಟ್ ತೆಗೆದುಕೊಂಡರಲ್ಲ? ಆಗ ಹೋಮ-ಹವನಗಳು ಕೇರಳದಲ್ಲಿ ನಡೆಯುತ್ತಿದ್ದವಂತೆ. ಹೋಮಗಳಿಗೆ ಸಂಕಲ್ಪ ಮಾಡಿದ್ದ ಯಡ್ಡಿ ಬೇರೆಯವ...ದಿಗೆ ಮಾತನಾಡುವಂತಿರಲಿಲ್ಲವಂತೆ. ಹೀಗಾಗಿ ರೆಸ್ಟ್ ...ದುಕೊಳ್ಳುವ ನೆಪದಲ್ಲಿ ಆಸ್ಪತ್ರೆ ಸೇರಿದ್ದರಂತೆ. ಆದರೆ ... ಹೋಮ-ಹವನದಿಂದ ಹೆಚ್ಚಿನ ಪ್ರಯೋಜನವಾಗ...ವಂತೆ. ಅವುಗಳಿಂದ ಕೆಲವು ತೊಂದರೆಗಳು ನಿವಾರಣೆ ...ಗಬಹುದು; ಆದರೆ ಅಧಿಕಾರದಲ್ಲಿ ಉಳಿಯಲು ...ರುಬಲ' ಬೇಕೇ ಬೇಕು ಎಂದು ಜ್ಯೋತಿಷಿಗಳು ...ನುತ್ತಿದ್ದಾರಂತೆ.

ಈ ಗುರುಬಲ ಪಡೆಯಲು ಇರುವ ದಾರಿ ಎಂದರೆ ಒಳ್ಳೆಯ ಜಾತಕವನ್ನು ಹೊಂದಿರುವ ಮಹಿಳೆಯನ್ನು ಮದುವೆಯಾಗುವುದಂತೆ. ಆಗ ಪತ್ನಿಯ ಜಾತಕದ ಫಲದಿಂದ ನೀವು ಅಧಿಕಾರದಲ್ಲಿ ಮುಂದುವರೆಯಬಹುದು ಎಂದೆಲ್ಲಾ ಈ ಜ್ಯೋತಿಷಿಗಳು ಯಡ್ಡಿಯ ತಲೆ ತಿಂದಿದ್ದಾರಂತೆ.

ಪಾಪ, ಪತ್ನಿಯನ್ನು ಬೇಕೆಂತಲೇ ಕಳೆದುಕೊಂಡಿರುವ ಯಡ್ಡಿ ಈಗ ಎಲ್ಲಿಂದ ತಾನೇ ಹೊಸ ಪತ್ನಿಯನ್ನು ತರುತ್ತಾರೆ?



ಆದರೂ ಯಡ್ಡಿಯ ಪಟಾಲಂ ಸುಮ್ಮನಿಲ್ಲವಂತೆ. ಯಡ್ಡಿಯ ಆಪ್ತ ವಲಯದಲ್ಲಿರುವ ಮಹಿಳೆಯರ ಜಾತಕಗಳನ್ನೆಲ್ಲಾ ಜ್ಯೋತಿಷಿಗಳ ಮುಂದೆ ಹಿಡಿದು, ಇದು ಹೊಂದಿಕೆಯಾಗುತ್ತಾ ನೋಡಿ ಎಂದು ಜ್ಯೋತಿಷಿಗಳ ಮುಖ ನೋಡಿದರಂತೆ. ಯಡ್ಡಿಯ ಹೆಸರಿನೊಂದಿಗೆ ಸದಾ ಕೇಳಿ ಬರುವ, ಆಕೆಯನ್ನು ತಮ್ಮ ಪಕ್ಕದಲ್ಲೇ ಸದಾ ಇರಿಸಿಕೊಂಡಿರುವ ಮಹಿಳಾ ರಾಜಕಾರಣಿಯೊಬ್ಬರ ಜಾತಕದ ಬಗ್ಗೆ ಅವರಲ್ಲಿ ಕೆಲವರಿಗೆ ತುಂಬಾ ನಂಬಿಕೆ ಇತ್ತಂತೆ. ಆದರೆ ಅದನ್ನು ನೋಡಿದ ಜ್ಯೋತಿಷಿಗಳು "ಇಲ್ಲ, ಯಡಿಯೂರಪ್ಪನವರ ಜಾತಕದೊಂದಿಗೆ ಈಕೆಯ ಜಾತಕ ಹೊಂದಾಣಿಕೆಯಾಗುವುದಿಲ್ಲ'' ಎಂದರಂತೆ.

ಇದನ್ನು ಕೇಳಿ ಆ ರಾಜಕಾರಣಿ ಕೆಂಡಮಂಡಲವಾದರಂತೆ. ಆಗ ಅದ್ಯಾರೋ ಪುಣ್ಯಾತ್ಮ ಸುಮ್ಮನಿರದೆ "ಅಲ್ಲಾ, ನೀವೇ ಹೇಳಿದ್ದೀರಿ, ನಿಮ್ಮ ಮತ್ತು ಯಡಿಯೂರಪ್ಪ ನಡುವಿನ ಸಂಬಂಧ ತಂದೆ-ಮಗಳ ಸಂಬಂಧ ತರಹ ಅಂತ. ಈಗ ಅವರನ್ನೇ ಮದುವೆಯಾಗೋದು ಅಂದ್ರೆ ಹೇಗೆ?'' ಎಂದರಂತೆ. ಸದ್ಯ ಆಕೆ "ನಮ್ಮದು ಬ್ರಹ್ಮ-ಸರಸ್ವತಿ ಸಂಬಂಧ ಕಣ್ರೀ. ದೇವರೇ ತಮ್ಮ ಮಗಳನ್ನು ಮದುವೆ ಆಗೋದಾದ್ರೆ ಅವರ್‍ಯಾಕ್ರೀ ನನ್ನನ್ನ ಮದುವೆ ಆಗಬಾರದು?'' ಎಂದು ಹೇಳಲಿಲ್ಲವಂತೆ!

ಯಡ್ಡಿಯ ಮನೆಮಂದಿಗೆ ಜ್ಯೋತಿಷಿಗಳ ಈ ಮಾತಿನಿಂದ ಸಂತೋಷವಾಗಿದ್ದರೂ ಪಾಪ ಯಡ್ಡಿಗೆ ತುಂಬಾ ಬೇಸರವಾಯಿತಂತೆ, ಚಿಂತೆ ಹೆಚ್ಚಾಯಿತಂತೆ.

ಆದರೆ ಖ್ಯಾತ ನಟಿಮಣಿಯೊಬ್ಬಳ ಜಾತಕ ಯಡ್ಡಿಯ ಜಾತಕದೊಂದಿಗೆ ಚೆನ್ನಾಗಿ ಹೊಂದಾಣಿಕೆಯಾಗುತ್ತಿದ್ದು, ಆಕೆಯನ್ನು ಯಡ್ಡಿ ಮದುವೆಯಾದಲ್ಲಿ ಆತನಿಗೆ 'ಗುರುಬಲ' ದೊರೆತು ಆತ ಅಧಿಕಾರದಲ್ಲಿ ಮುಂದುವರೆಯಬಹುದು ಎಂದು ಜ್ಯೋತಿಷಿಗಳು ಹೇಳಿದಾಗ ಯಡ್ಡಿಗೆ ಸಂತೋಷವೋ ಸಂತೋಷವಂತೆ!

ಜ್ಯೋತಿಷಿಗಳ ಈ ಮಾತುಗಳನ್ನು ಕೇಳಿ ಕಾರ್ಯಪ್ರವೃತ್ತ ರಾದ ಯಡ್ಡಿಯ ಪಟಾಲಂ ಆಕೆಯೊಂದಿಗೆ ಗೋಪ್ಯವಾಗಿ ಯಡ್ಡಿಯ ಮದುವೆ ಶಾಸ್ತ್ರ ಮುಗಿಸಲು ಸಿದ್ಧತೆ ನಡೆಸಿದೆಯಂತೆ. ಈ ಹಿಂದೆಯೇ ಮೂಡುಬಿದರೆಯಲ್ಲಿ ಆ ಮದುವೆ ಮಾಡಿಸಲು ತಯಾರಿ ನಡೆಸಲಾಗಿತ್ತಂತೆ. ಆದರೆ ಕೊನೆ ಕ್ಷಣದಲ್ಲಿ ಅದು ರದ್ದಾಯಿತಂತೆ. ಕಾರಣ ಯಡ್ಡಿ ತನ್ನ ಈ ಇಳಿ ವಯಸ್ಸಿನಲ್ಲಿ ಮತ್ತೆ ಮದುವೆಯಾಗುವ ಬಗ್ಗೆ ಹಿಂದೆ-ಮುಂದೆ ನೋಡುತ್ತಿರುವುದಂತೆ.

ಒಂದೆಡೆ ಆ ನಟನಾಮಣಿಯನ್ನು ಮದುವೆಯಾದರೆ ಜ್ಯೋತಿಷಿಗಳ ಭವಿಷ್ಯವಾಣಿ ನಿಜವಾಗಿ ತಾವು ಭಿನ್ನ ಮತೀಯರ ಕಾಟದಿಂದ ಬಚಾವಾಗಬಹುದೆಂಬ ಆಸೆ. ಅದಕ್ಕೆ ಸರಿಯಾಗಿ ಜ್ಯೋತಿಷಿಗಳು "ನೋಡಿ, ಆಕೆಯನ್ನು ಮದುವೆಯಾದರೆ ನೀವು ಅಧಿಕಾರದಲ್ಲಿ ಯಾವ ಚಿಂತೆಯೂ ಇರದೆ ಇನ್ನು ನಾಲ್ಕು ವರ್ಷ ಮುಂದುವರೆಯಬಹುದು. ನೀವು ಹೇಳಿದ ಹಾಗೆ ಎಲ್ಲರೂ ಕೇಳುತ್ತಾರೆ'' ಎಂದು ಅವರ ತಲೆ ತಿನ್ನುತ್ತಿದ್ದಾರಂತೆ.

ಆದರೆ ಇನ್ನೊಂದೆಡೆ, ಅಕಸ್ಮಾತ್ ಈ ಮರು ಮದುವೆಯ ವಿಚಾರ ತನ್ನ ಸಂಗಾತಿಗೆ ಗೊತ್ತಾದರೆ, ಬಹಿರಂಗಗೊಂಡರೆ ಎಂತಹ ಅವಮಾನ ಎದುರಿಸ ಬೇಕಾಗುತ್ತದೆ ಎಂಬ ದಿಗಿಲು ಯಡ್ಡಿಯನ್ನು ಕಾಡುತ್ತಿದೆ ಯಂತೆ.

ನೀವೀಗಾಗಲೇ ಗಮನಿಸಿರಬಹುದು, ಈ ವರದಿಯು ಸಂಪೂರ್ಣವಾಗಿ 'ಅಂತೆಗಳ ಕಂತೆ' ಆಗಿದೆ ಎಂಬುದನ್ನು!

ಆದರೆ ಯಾರಿಗೆ ಗೊತ್ತು? ಅಧಿಕಾರ ಹಿಡಿಯಲು ಜ್ಯೋತಿಷಿಗಳ ಮಾತು ಕೇಳಿ ತನ್ನ ಹೆಸರನ್ನೇ ಮಾರ್ಪಾಡು ಮಾಡಿಕೊಂಡಿದ್ದ ಯಡ್ಡಿ ಇದೀಗ ಅಧಿಕಾರದಲ್ಲಿ ಮುಂದುವರೆಯಲು ಕದ್ದು ಇನ್ನೊಂದು ಮದುವೆಯಾಗ ದಿರುತ್ತಾರೆಯೇ?

ಇದೇ ಕುತೂಹಲದ ಪ್ರಶ್ನೆ!!


● ವರದಿಗಾರ

ಉಪನ್ಯಾಸಕರ ನೇಮಕಾತಿ

ನಕಲಿ ವಿ.ವಿ.ಗಳ ಎಂ.ಫಿಲ್ ವಿವಾದ

ಕರ್ನಾಟಕ ಲೋಕಸೇವಾ ಆಯೋಗ ನಡೆಸುತ್ತಿರುವ ...50 ಡಿಗ್ರಿ ಕಾಲೇಜು ಲೆಕ್ಚರರ್‌ಗಳ ನೇಮಕಾತಿ ...ರ ಈಗ ಹಾದಿರಂಪ ಬೀದಿರಂಪವಾಗಿ ಹೋಗಿದೆ. ...ಪಕ್ಕದ ತಮಿಳುನಾಡಿನ ಕೆಲ ಖಾಸಗಿ ...ನಿವರ್ಸಿಟಿಗಳಿಂದ ಮಾನ್ಯತೆ ಇರದ ಎಂ.ಫಿಲ್ ...ದಿಸಿರುವ ಅಭ್ಯರ್ಥಿಗಳೂ ಈಗಿನ ನೇಮಕಾತಿಗೆ ...ರ್ಹರಾಗಿರುವುದನ್ನು ಇನ್ನಿತರರು ವಿರೋಧಿಸುತ್ತಿದ್ದಾರೆ. ...ಂದ್ರ ಎಂಬಾತ ಇದೇ ತರ್ಕ ಹೂಡಿ ಕರ್ನಾಟಕ ...ಡಳಿತಾತ್ಮಕ ನ್ಯಾಯಮಂಡಳಿಗೆ ಅಪೀಲು ಹೋಗಿ ಈಗ ... ಆರ್ಡರ್ ತಂದಿದ್ದಾನೆ. ಈ ಮಧ್ಯೆ ಉನ್ನತ ಶಿಕ್ಷಣ ...ವ ಅರವಿಂದ ಲಿಂಬಾವಳಿಗೆ ...ಡಬೇಕು ಅಂತ ಹೇಳಿಕೊಂಡು ...ಲಿವೀರರ ಒಂದು ಗುಂಪು ...ರ್ಥಿಗಳಿಂದ ತಲಾ ಮೂವತ್ತು ...ರ ಕೀಳುತ್ತಿದೆ.

...ಲಿಂಬಾವಳಿಯ ಪಿಎ ರವಿ ...ೂ ಪ್ರಕಾಶನೆಂಬ ಇನ್ನೊಬ್ಬ ಮೇಷ್ಟ್ರು ... ವಸೂಲಿ ದಂಧೆಯ ...್ಪಿನ್‌ಗಳಾಗಿರುವುದು ಸ್ವತಃ ...ಬಾವಳಿ ಗಮನಕ್ಕೆ ಬಂದಿದ್ದರೂ ...ರು ಸೈಲೆಂಟಾಗಿರುವುದು ...ಕೆಂಬ ಅನುಮಾನ ಬರುತ್ತಿದೆ.



ಅರವಿಂದ ಲಿಂಬಾವಳಿ

...ಅಂದಹಾಗೆ ಈ ಪ್ರಕಾಶನು ...ಟಕ ಗೌರ್ನಮೆಂಟ್ ಕಾಲೇಜ್ ...ರರ್ಸ್ ಅಸೋಸಿಯೇಷನ್ ಎಂಬ ...ಕ್ಕೆ ಸಾಕ್ಷಾತ್ ಅಧ್ಯಕ್ಷನಾಗಿದ್ದಾನೆ.

ಅಕ್ರಮ ಎಂ.ಫಿಲ್ ದಂಧೆ

...ಪಾನ್ ಪರಾಗು, ಸಿಗರೇಟು, ಗುಟ್ಕಾಗಳಷ್ಟೇ ಸಲೀಸಾಗಿ ...ದಿಗಾದರೂ ಎಂ.ಫಿಲ್ ಪದವಿ ಬೇಕೆಂದರೆ ಅಂತವರು ...ದ ತಮಿಳುನಾಡಿಗೆ ಹೋಗಬೇಕು. ಇಲ್ಲ ಇಲ್ಲ ಸಾರಿ ... ದೂರ ಹೋಗಬೇಕಿಲ್ಲ, ಈಗ ಬೆಂಗಳೂರಿನಲ್ಲೇ ...ವ ಶಾಖೆಗಳಿವೆ.

...ತಮಿಳುನಾಡಿನ ಮದ್ರಾಸ್ ವಿ.ವಿ. ಒಂದು ...ಸದಾದರೆ ಅಣ್ಣಾಮಲೈ ವಿ.ವಿ.ಯ ಅರ್ಭಟ ಕಳೆದೈದು ...ಗಳಿಂದ ಹೆಚ್ಚಾಗಿದೆ. ಇದು ಖಾಸಗಿ ವಿವಿಗಳ ...ಗವಾದ್ದರಿಂದ ಬೆಂಗಳೂರಿನ ಹಾದಿಬೀದಿಗಳಲ್ಲೆಲ್ಲಾ ... ಅಳಗಪ್ಪ ಯೂನಿವರ್ಸಿಟಿ, ವಿನಾಯಕ ಮಿಷನ್ ... ಅವಿನಾಶಲಿಂಗಂ ವಿ.ವಿ. ಭಾರತೀದಾಸ ವಿ.ವಿ.... ...ಗೆ ಶಾಸಿಗೊಂಡು, ಕೊಸರಿಗೊಂಡರಂತೆ ...ವರ್ಸಿಟಿಗಳು ಹುಟ್ಟಿಕೊಂಡು ಬಿಟ್ಟಿವೆ. ಇವರ ...ದಿಟ್ಟ ಏನೆಂದರೆ ದೂರ ಶಿಕ್ಷಣದ (distance education) ಮೂಲಕ ಯಾವ ಪದವಿ ಬೇಕಾದರೂ ಕೊಡುವುದು.

ಈಗಿನ ಕಾಲೇಜು ಲೆಕ್ಚರರ್ ನೇಮಕಾತಿಗೆ ಅರ್ಜಿ ಹಾಕಿರುವವರ ಪೈಕಿ ಸಾವಿರಾರು ಜನ ಈ ಅಳಗಪ್ಪ ವಿನಾಯಕ ಮಿಷನ್ ವಿ.ವಿ.ಗಳಿಂದ ಎಂ.ಫಿಲ್ ಹಾಗೂ ಪಿಎಚ್‌ಡಿ ಪದವಿ ಪಡೆದವರಿದ್ದಾರೆ. ಇದರ ಅಸಲಿ ವಿವಾದ ಏನೆಂದರೆ ಅಳಗಪ್ಪ, ವಿನಾಯಕ ಎಂಬ ಖಾಸಗಿ ಸಂಸ್ಥೆಗಳು ದೂರಶಿಕ್ಷಣದ ಮೂಲಕ ಈ ಕೋರ್ಸ್ ನಡೆಸಲು ಇತ್ತೀಚಿನವರೆಗೂ ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್‌ನ ಅನುಮತಿ ಪಡೆದಿರಲಿಲ್ಲ. ಈಗ ಅನುಮತಿ ಸಿಕ್ಕಿದೆಯಾದರೂ ಅನುಮತಿ ಇಲ್ಲದಾಗ ಅಲ್ಲಿ ಎಂ.ಫಿಲ್ ಪದವಿ ಪಡೆದಿರುವ ಕರ್ನಾಟಕದ ಅಭ್ಯರ್ಥಿಗಳನ್ನು ನೇಮಕಾತಿಗೆ ಅರ್ಹರೆಂದು ಪರಿಗಣಿಸುವುದು ಎಷ್ಟು ಸರಿ?

ಈಗಿನ ಜಗಳದ ಮೂಲ ಇದೇನೆ?

ವಾಸ್ತವದಲ್ಲಿ ಈ ವಿವಾದಕ್ಕೆ ಮೊದಲು ಚಾಲನೆ ಕೊಟ್ಟಿದ್ದೇ ಸಚಿವ ಲಿಂಬಾವಳಿ. ಅವರೇ ಮೊದಲಿಗೆ ಈ ವಿಚಾರ ಪ್ರಸ್ತಾಪಿಸಿ 'ಅಕ್ರಮ ಎಂ.ಫಿಲ್ ಪಡೆದವರನ್ನು ನೇಮಕಾತಿಗೆ ಪರಿಗಣಿಸಲಾಗದು' ಎಂಬಿತ್ಯಾದಿ ಡೈಲಾಗ್ ಹೊಡೆದರು. ನಂತರ ಸರ್ಕಾರ ದೆಹಲಿಯ ಯುಜಿಸಿಗೆ ಪತ್ರ ಬರೆದು ಅಳಗಪ್ಪ, ವಿನಾಯಕ ವಿವಿಗಳ ಜಾತಕ ತರಿಸಿಕೊಂಡು ಈಗ 'ಎಲ್ಲಾ ಓಕೆ' ಎಂದು ತಿಪ್ಪೆ ಸಾರಿಸುತ್ತಿದೆ. ಆದರೆ ಅಷ್ಟರಲ್ಲಿ ನೇಮಕಾತಿ ನಿರೀಕ್ಷೆಯಲ್ಲಿದ್ದ ಅಭ್ಯರ್ಥಿಗಳೆಲ್ಲಾ ಗಾಬರಿಯಾಗಿದ್ದರು. ಆಗ ತಕ್ಷಣ ಲಿಂಬಾವಳಿಯ ಆಪ್ತರಾಗಿರುವ ಪಿಎ ರವಿ ಹಾಗೂ ಪ್ರಕಾಶ್ ಕರ್ನಾಟಕ ಟೂರ್ ಹೊರಟರು. ಈ ರವಿ ಕೆಲಕಾಲ ಚಿಂತಾಮಣಿಯಲ್ಲಿ ಇಂಗ್ಲಿಷ್ ಲೆಕ್ಚರರ್ ಆಗಿದ್ದ. ಪ್ರಕಾಶ್ ಅಧ್ಯಾಪಕರ ಸಂಘದ ಲೀಡರ್ ಆಗಿ ಲಿಂಬಾವಳಿ ಹತ್ತಿರ ಹೋಗಿ ಬರುತ್ತಾ ವರ್ಗಾ ದಂಧೆ ಮಾಡುತ್ತಿದ್ದ.

ಇವರಿಬ್ಬರೂ ಸೇರಿ ಕಳೆದ ವಾರ ತುಮಕೂರಿಗೆ ಹೋಗಿ ಅಲ್ಲಿ ಕೆಲ ಅಭ್ಯರ್ಥಿಗಳನ್ನು ಸೇರಿಸಿ ತಲಾ ಮೂವತ್ತು ಸಾವಿರ ಕೊಡುವಂತೆ ಪೀಡಿಸಿದ್ದಾರೆ. ಇದರಿಂದ ಸಿಟ್ಟಿಗೆದ್ದ ಕೆಲ ಬಡ ಅಭ್ಯರ್ಥಿಗಳು ಸೀದಾ ಸಿದ್ಧಗಂಗಾ ಮಠದ ಕಿರಿಯ ಸ್ವಾಮೀಜಿಗೆ ದೂರು ಹೇಳಿಬಿಟ್ಟರು. ನಂತರ ಸ್ವಾಮಿ ಯಡ್ಡಿಗೆ ಫೋನ್ ಮಾಡಿ ಆಮೇಲೆ ಯಡ್ಡಿಯೇ ಲಿಂಬಾವಳಿಗೆ ಹೇಳಿ ಇದರಿಂದ ಮರ್ಯಾದೆ ಹೋಗುತ್ತೆ ಅಂದಿದ್ದಾರೆ.

ಹಾಗಾಗಿ ರವಿ-ಪ್ರಕಾಶ್‌ರೆಂಬ ಕಳ್ಳ-ಮಳ್ಳ ಜೋಡಿ ಹ್ಯಾಪುಮೋರೆ ಹಾಕಿಕೊಂಡು ವಾಪಸ್ ಬಂದಿದೆ.

ಈ ನಡುವೆ ಶಿಕ್ಷಣ ಇಲಾಖೆಯ ಕೆಲವರು ಹಾಗೂ ಬಿಜೆಪಿಯ ಹಿರಿಯ ನಾಯಕರು ಈ ಹಣ ಲಿಂಬಾವಳಿಗಾಗಿ ಎತ್ತುವಳಿ ಮಾಡಿದ್ದಲ್ಲ ಎಂದು ವಾದಿಸುತ್ತಿದ್ದಾರೆ. ಯಾಕಂತ ಕೇಳಿದರೆ 'ನಂ ಸಾಹೇಬ್ರು ಸಣ್ಣಪುಟ್ಟದಕ್ಕೆ ಕೈಹಾಕಿ ಹೆಸರು ಕೆಡಿಸಿಕೊಳ್ಳಲ್ಲ' ಅಂತಿದ್ದಾರೆ. ಅಂದಹಾಗೆ ಅರವಿಂದ ಲಿಂಬಾವಳಿ ಕಳೆದ ವರ್ಷವೊಂದರಲ್ಲೇ 800 ಕ್ಕೂ ಜಾಸ್ತಿ ಲೆಕ್ಚರರ್‌ಗಳ ವರ್ಗಾ ಮಾಡಿದ್ದಾರೆ. ಹಾಗೆ ಎಂಟು ಲೀಸ್ಟ್‌ಗಳಲ್ಲಿ ವರ್ಗಾ ಆದ ಅನೇಕರು ತಲಾ 50 ಸಾವಿರದಷ್ಟು ಹಣವನ್ನು ದಕ್ಷಿಣೆಯಾಗಿ ಕೊಟ್ಟಿದ್ದಾರೆ. ಅಂದರೆ ಇದೇ ಬರೋಬ್ಬರಿ ನಾಲ್ಕು ಕೋಟಿ ರೂಪಾಯಿಗಳಾಯಿತು. ಇದು ಲೆಕ್ಚರರ್‌ಗಳ ಮಾತಾಯಿತು. ಇನ್ನು ಶಿಕ್ಷಣ ಇಲಾಖೆಯ ಜಾಯಿಂಟ್ ಡೈರೆಕ್ಟರ್ ಲೆವೆಲ್ ಆಫೀಸರ್‌ಗಳ ವರ್ಗಾ ಡೀಲ್‌ಗಳಲ್ಲಿ ಕನಿಷ್ಠ 2 ರಿಂದ 3 ಲಕ್ಷದವರೆಗೆ ಲಿಂಬಾವಳಿ ಸಿಬ್ಬಂದಿ ಡಿಮ್ಯಾಂಡ್ ಮಾಡುತ್ತಾರೆ. ಹೀಗೆ ಇಷ್ಟೆಲ್ಲಾ ಹಣದ ರುಚಿ ನೋಡಿರುವ ಆಸಾಮಿಗಳು ಈಗ ಡಿಗ್ರಿ ಕಾಲೇಜು ಲೆಕ್ಚರರ್ ನೇಮಕದಲ್ಲಿ ಹಣ ಕೀಳದೆ ಬಿಟ್ಟಾರೆಯೇ?

ಹತ್ತಾರು ವರ್ಷಗಳಿಂದ ಡಿಗ್ರಿ ಕಾಲೇಜು ಲೆಕ್ಚರರ್‌ಗಳಾಗಿ ಕಾಯಂ ಉದ್ಯೋಗ ಪಡೆದುಕೊಳ್ಳಲು ಕರ್ನಾಟಕದ ಉದ್ದಗಲಕ್ಕೂ ಒಂದು ಲಕ್ಷ ಮಂದಿ ಕಾಯುತ್ತಿದ್ದಾರೆ. ಇವರಲ್ಲಿ ಅನೇಕರು ಸರ್ಕಾರಿ-ಖಾಸಗಿ ಕಾಲೇಜುಗಳಲ್ಲಿ ಟೆಂಪರರಿ, ಗುತ್ತಿಗೆ ಎಂದು ಅತೀ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದಾರೆ. ಈಗ ಅಪರೂಪಕ್ಕೊಂಬಂತೆ ಸರ್ಕಾರಿ ನೇಮಕಾತಿ ಚಾಲೂ ಆಗಿರುವಾಗ ಲಿಂಬಾವಳಿ ಟೀಂ ತನ್ನ ಕೈವಾಡ ತೋರಿಸುತ್ತಿದೆ. ಈ ನೇಮಕಾತಿ ವಿಚಾರದಲ್ಲಿ ಮೊದಲಿಂದಲೂ ಹಗರಣಗಳಾಗಿವೆ.

2007 ರ ಡಿಸೆಂಬರ್‌ನಲ್ಲಿ ನೇಮಕಾತಿ ಪ್ರಕ್ರಿಯೆ ಆರಂಭಿಸಿ ಅರ್ಜಿ ಸಲ್ಲಿಕೆಗೆ 2008 ರ ಜನವರಿ 31 ಕೊನೆದಿನ ಎನ್ನಲಾಗಿತ್ತು. ಆಮೇಲೆ ತಮಿಳುನಾಡಿನ ಖಾಸಗಿ ವಿ.ವಿ.ಗಳಿಂದ ಲಂಚ ತಿಂದು ಅಂತಿಮ ದಿನವನ್ನು ಫೆಬ್ರವರಿ 20 ಕ್ಕೆ ವಿಸ್ತರಿಸಲಾಯಿತು. ತಮಾಷೆ ಏನೆಂದರೆ ಈ ಆದೇಶವನ್ನು ಜನವರಿ 31 ಕ್ಕೆ ಮೊದಲೇ ನೀಡಬೇಕಿತ್ತು. ಆದರೆ ಅದರ ಬದಲಿಗೆ ಅಂತಿಮ ದಿನ ಮುಗಿದ 5 ದಿನಗಳ ನಂತರ ಅಂದರೆ ಫೆಬ್ರವರಿ 5 ರಂದು ಹೊರಡಿಸಲಾಗಿದೆ.

ಈ ನೇಮಕಾತಿ ಹಗರಣದ ನೈಜ ತನಿಖೆ ಈ ಅಂತಿಮ ದಿನಾಂಕ ವಿಸ್ತರಣೆಯಿಂದಲೇ ಶುರುವಾಗಬೇಕಿದೆ. ಜೊತೆಗೆ ಅಸಲಿ ಎಂ.ಫಿಲ್ ನಕಲಿ ಎಂ.ಫಿಲ್ ಬಗ್ಗೆ ಖಚಿತವಾದ ತೀರ್ಮಾನ ಮಾಡುವುದು ನಿಜಕ್ಕೂ ಕಷ್ಟವಲ್ಲ. ಆದರೆ ಅರವಿಂದ ಲಿಂಬಾವಳಿ ಮತ್ತವರ ಪಟಾಲಂ ಮನಸ್ಸಿನಲ್ಲಿರುವುದೇ ಬೇರೆ. ಅದು ಹಣ ಮಾಡುವುದು ಹೇಳಿಕೇಳಿ ಇದು.


ಒಟ್ಟು 2550 ಕಾಲೇಜು ಲೆಕ್ಚರರ್‌ಗಳ ನೇಮಕಾತಿ.

ಅಭ್ಯರ್ಥಿಗಳ ಪೈಕಿ 1700 ಮಂದಿ ಎಂ.ಫಿಲ್‌ನವರು. ಅವರ ಪೈಕಿ ಒಂದು ಸಾವಿರ ಜನ ದೂರ ಶಿಕ್ಷಣದ ಎಂ.ಫಿಲ್ ಪಡೆದವರೇ ಇದ್ದಾರೆ. ಈಗ ವಿವಾದ ಇರುವುದೇ ಇವರ ಬಗ್ಗೆ. ಮಾನ್ಯತೆ ಇರದಿದ್ದಾಗಲೇ ಇವರಿಗೆಲ್ಲಾ ಎಂ.ಫಿಲ್ ಮಾರಿಕೊಂಡಿರುವ ವಿನಾಯಕ ಮಿಷನ್, ಅಳಗಪ್ಪ ವಿ.ವಿ.ಯ ಲಾಬಿಗಳು ಈಗ ನೇಮಕದಲ್ಲೂ ಕೈವಾಡ ನಡೆಸಲು ಮುಂದಾಗಿವೆ.

ಅಭ್ಯರ್ಥಿಗಳಿಂದ ಕೋಟಿಗಟ್ಟಲೆ ಹಣ ಸಂಗ್ರಹಿಸಿ ಸಂಬಂಧಿಸಿದವರಿಗೆ ಕೊಟ್ಟು, ಇಲ್ಲೂ ವ್ಯವಹಾರ ಕುದುರಿಸಲು ಹೊರಟಿವೆ. ಬಿಜೆಪಿ ಸರ್ಕಾರದಲ್ಲಿ ಹಣ-ಲಂಚವಿರದೆ ಯಾವ ಕೆಲಸವೂ ಆಗದು ಎನ್ನಲು ಈ ನೇಮಕಾತಿ ಹಗರಣವೇ ಸಾಕ್ಷಿ.

■ ಈಶ

ಗಣೇಶನಿಗೆ 63 ಲಕ್ಷ ಟೋಪಿ!



ಕೇವಲ ಹಣದ ಬೆನ್ನೇರಿ ಹೊರಟ ನಾಯಕನಟನಿಗೆ ಏನೆಲ್ಲಾ ಅಡ್ಡಿ ಆತಂಕಗಳು ಬರುತ್ತವೆ ಎನ್ನುವುದಕ್ಕೆ ಗೋಲ್ಡನ್ ಸ್ಟಾರ್ ಗಣೇಶ್ ಇಂದು ನಿದರ್ಶನವಾಗಿ ನಿಂತಿದ್ದಾನೆ.

'ಉಲ್ಲಾಸ ಉತ್ಸಾಹ' ಚಿತ್ರದ ನಿರ್ಮಾಪಕ ತ್ಯಾಗರಾಜ್ ಮತ್ತು ಗಣೇಶ್ ನಡುವೆ ಹಣಕಾಸಿನ ವ್ಯವಹಾರ ಹಳಸಿಕೊಂಡಿದ್ದು, ಅದು ಛೇಂಬರ್ ಮೆಟ್ಟಿಲೇರುವ ತನಕ ಬೆಳೆದು ನಿಂತಿದೆ.

ಜನವರಿ ತಿಂಗಳಲ್ಲಿ ಆರಂಭವಾದ 'ಉಲ್ಲಾಸ ಉತ್ಸಾಹ' ಏಪ್ರಿಲ್ ಹೊತ್ತಿಗೆ ಬಿಡುಗಡೆಯಾಗಬೇಕಿತ್ತು. ಆದರೆ ಚಿತ್ರೀಕರಣ ನಿಂತುಹೋಗೀ ಸರಿಸುಮಾರು ಮೂರು ತಿಂಗಳಾಗಿರುವುದರಿಂದ ಬಿಡುಗಡೆಗೊಳ್ಳುವುದೆಲ್ಲಿ, ಬಾಕಿಯಿರುವ ಎರಡು ಹಾಡುಗಳನ್ನೂ ಚಿತ್ರೀಕರಿಸಲು ಸಾಧ್ಯವಾಗಿಲ್ಲ.


ಉಲ್ಲಾಸ ಉತ್ಸಾಹದೊಂದಿಗೆ ಹತಾಶೆ

ಮೂಲತಃ ಬೆಂಗಳೂರಿನವರೇ ಆದ ನಿರ್ಮಾಪಕ ಸೋಮು ಮತ್ತು ಅವರ ಸಹೋದರ ತ್ಯಾಗರಾಜ್ ತಮ್ಮ ಮಗ ಯಶೋಸಾಗರ್‌ಗಾಗಿ ಕನ್ನಡ ಚಿತ್ರವೊಂದನ್ನು ನಿರ್ಮಿಸಬೇಕೆಂಬ ಆಲೋಚನೆಯಲ್ಲಿದ್ದವರು. ಇದಕ್ಕಾಗಿ ಅವರು ನಿರ್ದೇಶಕ ಪ್ರೇಮ್‌ನನ್ನೂ ಒಪ್ಪಿಸಿದ್ದರು. 'ಜೋಗಿ' ಪ್ರೇಮ್ 'ಈಗ ಮಾಡ್ತೀನಿ, ಆಗ ಮಾಡ್ತೀನಿ' ಎಂದು ಮರ ಹತ್ತಿಸುತ್ತಿದ್ದರೇ ವಿನಃ ಎಷ್ಟೇ ಕಾಡಿಬೇಡಿದರೂ ಯಶೋಸಾಗರ್‌ನನ್ನು ಹೀರೋ ಮಾಡಲೇ ಇಲ್ಲ. ಇದರಿಂದ ಬೇಸತ್ತ ನಿರ್ಮಾಪಕರು ತೆಲುಗಿನ ಖ್ಯಾತ ನಿರ್ದೇಶಕ ಕರುಣಾಕರನ್‌ರನ್ನು ಹಿಡಿದು 'ಉಲ್ಲಾಸಂಗಾ ಉತ್ಸಾಹಂಗಾ' ಎಂಬ ಚಿತ್ರವನ್ನು ನಿರ್ಮಿಸಿ ಯಶೋಸಾಗರ್‌ನನ್ನು ನಾಯಕನಟನನ್ನಾಗಿಸಿದರು.

ಅದೃಷ್ಟವಶಾತ್ ಸೋಮು ಮತ್ತು ತ್ಯಾಗರಾಜ್ ಎಂಟು ಕೋಟಿ ಖರ್ಚು ಮಾಡಿ ನಿರ್ಮಿಸಿದ್ದ ಸಿನಿಮಾ ಆಂಧ್ರದಲ್ಲಿ ಹೊಸ ಬಿರುಗಾಳಿಯನ್ನೇ ಎಬ್ಬಿಸಿ ಸರಿಸುಮಾರು ಮೂವತ್ತು ಕೋಟಿಗಳ ದೊಡ್ಡ ಲಾಭವನ್ನೇ ಇವರ ಮಡಿಲಿಗೆ ತಂದುಕೊಟ್ಟಿತ್ತು.


ಹೇಗೂ ತೆಲುಗಿನಲ್ಲಿ ಸೂಪರ್ ಹಿಟ್ ಆಗಿರುವುದರಿಂದ ತಕ್ಷಣ ಕನ್ನಡದಲ್ಲೂ ಅದನ್ನೇ ರಿಮೇಕ್ ಮಾಡಿ, ಓಡುವ ಕುದುರೆಯಂತಿರುವ ಗಣೇಶನನ್ನು ಹೀರೋ ಮಾಡಿದರೆ ಕರ್ನಾಟಕದಲ್ಲೂ ದುಡ್ಡು ಬಾಚಬಹುದು ಎಂಬ ಮಾಸ್ಟರ್ ಪ್ಲಾನ್ ಮಾಡಿದರು ತ್ಯಾಗರಾಜ್. ಆದರೆ ಗಣೇಶ ಒಂದೂ ಕಾಲು ಕೋಟಿಯ ಮೊತ್ತವನ್ನು ಅಪೇಕ್ಷಿಸಿದರೂ 'ಓಕೆ ಓಕೆ' ಎಂದು ತಲೆಯಲ್ಲಾಡಿಸಿದರು. ಕನ್ನಡದಲ್ಲಿ ಸುಮಾರು ಹದಿನೆಂಟು ಇಪ್ಪತ್ತು ಚಿತ್ರಗಳಿಗೆ ಸಹಾಯಕನಾಗಿ ದುಡಿದಿದ್ದ ದೇವರಾಜ್‌ಪಾಲನ್ ಎಂಬ ಅಸೋಸಿಯೇಟ್ ಡೈರೆಕ್ಟರನನ್ನೇ ನಿರ್ದೇಶಕನನ್ನಾಗಿಸಿ ಶೂಟಿಂಗೂ ಶುರುಮಾಡಿಬಿಟ್ಟರು.

ನಿರ್ಮಾಪಕರ ಖ್ಯಾತೆ



ಚಿತ್ರ ಆರಂಭವಾಗುವುದಕ್ಕೆ ಮುನ್ನ ಗಣೇಶ್ ಕಾಲ್‌ಶೀಟ್‌ಗೆ ಸಹಿ ಹಾಕುವಾಗ ಆತನಿಗೆ ನೀಡಬೇಕಿರುವ ಸಂಭಾವನೆಯ ವಿಚಾರದಲ್ಲಿ ಚೌಕಾಸಿ ಮಾಡದ ನಿರ್ಮಾಪಕ ತ್ಯಾಗರಾಜ್‌ರ ನಿಲುವು ದಿನದಿಂದ ದಿನಕ್ಕೆ ಬದಲಾಗುತ್ತಾ ಹೋಯಿತು. ಜೊತೆಗೆ ಜನವರಿಯಿಂದೀಚೆಗೆ ಗಣೇಶನ ಬಗೆಗಿನ ಕ್ರೇಜ್ ಕೂಡಾ ಪಾತಾಳ ಮುಟ್ಟಿತು. ಆತ ನಟಿಸಿದ 'ಅರಮನೆ', 'ಸಂಗಮ', 'ಬೊಂಬಾಟ್' ಮತ್ತು 'ಸರ್ಕಸ್' ಚಿತ್ರಗಳು ಯಾರೂ ನಿರೀಕ್ಷಿಸದ ರೀತಿಯಲ್ಲಿ ತೋಪಾಗಿದ್ದರಿಂದ ನಿರ್ಮಾಪಕ ಮತ್ತು ಗಣೇಶ್ ನಡುವಿನ ಸಂಬಂಧ ಈಗ ಕುಲಗೆಟ್ಟು ಹೋಗಿದೆ. "ನಾಲ್ಕು ಫ್ಲಾಪ್ ಚಿತ್ರಗಳನ್ನು ನೀಡಿರುವ ನಿನಗೆ ಒಂದೂಕಾಲು ಕೋಟಿ ಸಂಭಾವನೆಯೇಕೆ ಕೊಡಬೇಕು'' ಎಂದು ತ್ಯಾಗರಾಜ್ ರಾಗ ತೆಗೆದಿದ್ದಾರೆ.





ಮೊದಲೆಲ್ಲಾ ಗಣೇಶನ ಚಿತ್ರವೊಂದು ಸೆಟ್ಟೇರಿದಾಗಲೇ ವಿತರಕರು 'ನನಗೆ ನಿನಗೆ' ಎಂದು ಏರಿಯಾಗಳ ಹಂಚಿಕೆಗಾಗಿ ಕಿತ್ತಾಡುತ್ತಿದ್ದರು. ಯಾವಾಗ ಗಣೇಶನ ವರ್ಚಸ್ಸು ಕಳೆಗುಂದಿತೋ ಗಾಂಧಿನಗರದ ವಿತರಕರು 'ಉಲ್ಲಾಸ ಉತ್ಸಾಹ'ದ ಕಡೆ ತಿರುಗಿಯೂ ನೋಡಿಲ್ಲ.

ತನ್ನ ಮಾರ್ಕೆಟ್ ಕುಸಿದಿದೆ ಎಂಬುದು ಗಣೇಶನಿಗೆ ಗೊತ್ತಿದ್ದರೂ ಈತ ಸಂಭಾವನೆಯ ವಿಚಾರದಲ್ಲಿ ಮಾತ್ರ ಎಳ್ಳಷ್ಟೂ ರಾಜಿಯಾಗದೆ "ಒಂದು ನಯಾಪೈಸೆಯನ್ನೂ ಕಡಿಮೆ ಮಾಡಲ್ಲ. ನೀವು ಒಪ್ಪಿದ್ದಂತೆ ಒಂದೂ ಕಾಲು ಕೋಟಿ ಮಡಗಿ'' ಎಂದು ಹಠ ಹಿಡಿದಿದ್ದಾನೆ. ಈಗಾಗಲೇ ಎರಡು ಮೂರು ಇನ್‌ಸ್ಟಾಲ್‌ಮೆಂಟನಲ್ಲಿ ಅರವತ್ತ ಮೂರು ಲಕ್ಷ ರೂಪಾಯಿಗಳ ಬಾಬ್ತು ಗಣೇಶನ ಕೈಸೇರಿದೆ. ಇನ್ನುಳಿದ ಫಿಫ್ಟಿ ಪರ್ಸೆಂಟ್ ಹಣ ತಲುಪದಿದ್ದರೆ ತಾನು ಶೂಟಿಂಗ್‌ಗೆ ಹಾಜರಾಗುವುದಿಲ್ಲ ಎನ್ನುವುದು ಗಣೇಶನ ನಿರ್ಣಯ.


ಚಿತ್ರದ ಮಾತಿನ ಭಾಗದ ಅಷ್ಟೂ ಚಿತ್ರೀಕರಣವನ್ನು ಮುಗಿಸಿರುವ 'ಉಲ್ಲಾಸ ಉತ್ಸಾಹ' ತಂಡ ಈಗ ಉಳಿದಿರುವ ಎರಡು ಹಾಡುಗಳನ್ನು ಮಲೇಷಿಯಾದಲ್ಲಿ ಚಿತ್ರೀಕರಿಸಬೇಕಿದೆ. ಆದರೆ ಇದೇ ತಿಂಗಳ ಹದಿನೆಂಟರಿಂದ ಗಣೇಶ ತನ್ನ ಸ್ವಂತ ಬ್ಯಾನರಿನಲ್ಲಿ, ಪ್ರೀತಂ ಗುಬ್ಬಿ ನಿರ್ದೇಶನದ 'ಮಳೆಯಿರಲಿ ಜೊತೆಯಲಿ' ಚಿತ್ರದ ಚಿತ್ರೀಕರಣವನ್ನು ಆರಂಭಿಸುತ್ತಿದ್ದಾನೆ. ಅಲ್ಲದೆ 'ಉಲ್ಲಾಸ ಉತ್ಸಾಹ' ಚಿತ್ರದ ನಿರ್ದೇಶಕ ದೇವರಾಜ್ ಪಾಲನ್ ಸಹ ಇನ್ನೊಂದು ಚಿತ್ರವನ್ನು ಆರಂಭಿಸುತ್ತಿದ್ದಾರೆ. ಹೀಗಿರುವಾಗ, ಒಂದು ವೇಳೆ ಛೇಂಬರ್‌ನ ಕಟಕಟೆಯಲ್ಲಿರುವ ಈ ವಿವಾದ ಬಗೆಬಹರಿದರೂ ಸಹ 'ಉಲ್ಲಾಸ...'ದ ಚಿತ್ರೀಕರಣ ನಡೆಯುವ ಲಕ್ಷಣಗಳು ಕಾಣುತ್ತಿಲ್ಲ.

ಇದನ್ನೆಲ್ಲ ಮನಗಂಡ ನಿರ್ಮಾಪಕ ತ್ಯಾಗರಾಜ್ ಉಳಿದಿರುವ ಇನ್ನೆರಡು ಹಾಡುಗಳನ್ನು ಆದಷ್ಟು ಬೇಗ ಮುಗಿಸಿಕೊಡಬೇಕೆಂದು ಗಣೇಶ್ ಮೇಲೆ ಒತ್ತಡ ಹೇರಿದ್ದಾರೆ. "ಬೇಕಾದರೆ ಇನ್ನೂ ಇಪ್ಪತ್ತು ಲಕ್ಷ ಕೊಡ್ತೀವಿ, ಶೂಟಿಂಗ್ ಮುಗಿಸಿಕೊಡು'' ಎಂದು ಕೇಳಿಕೊಂಡಿದ್ದಾರೆ. ಆದರೆ ಗಣೇಶ ತನ್ನ ಪಟ್ಟು ಬದಲಿಸದೇ "ಉಳಿದ ಅರವತ್ತೂರು ಲಕ್ಷಗಳನ್ನು ಕೊಟ್ಟರೆ ಮಾತ್ರ ಬರ್ತೀನಿ'' ಎಂದಿದ್ದಾನೆ. ಅಷ್ಟೇ ಅಲ್ಲ, ತನಗೆ ಕೊಡಬೇಕಾದ ಹಣವನ್ನು ಕೊಟ್ಟಿಲ್ಲ ಎಂದು ಛೇಂಬರ್‌ಗೆ ದೂರನ್ನೂ ನೀಡಿದ್ದಾನೆ.

ಒಂದು ಕಡೆ ಅತಿಯಾಸೆಯ ನಾಯಕ, ಮತ್ತೊಂದು ಕಡೆ ಮಾತಿಗೆ ತಪ್ಪಿರುವ ನಿರ್ಮಾಪಕ. ಕಾಸಿಗಾಗಿ ಕಚ್ಚಾಡುತ್ತಿರುವ ಇವರಿಬ್ಬರ ಜಗಳ ತೋಪೆದ್ದು ಕೂತಿರುವ ಗಾಂಧಿನಗರದ ಮಂದಿಗೆ ಉಚಿತ ಮನರಂಜನೆ ನೀಡುತ್ತಿದೆ.


● ಅರುಣ್ ಕುಮಾರ್.ಜಿ

ಹೀರೋಗಳ ಹಾರಾಟ ಅಂತ್ಯ?



ಒಂದೆಡೆ ನಟ ಗಣೇಶ್ ಮತ್ತು ನಿರ್ಮಾಪಕ ತ್ಯಾಗರಾಜ್ ದುಡ್ಡಿಗಾಗಿ ಗುದ್ದಾಟ ನಡೆಸುತ್ತಿದ್ದರೆ ನಿರ್ಮಾಪಕರ ಸಂಘ 'ಹೀರೋಗಳ ಹಾರಾಟ'ವನ್ನು ಮಣಿಸಲು ಸಜ್ಜಾಗುತ್ತಿವೆ.

ಕೆ.ಸಿ.ಎನ್. ಚಂದ್ರಶೇಖರ್ ನೇತೃತ್ವದ ನಿರ್ಮಾಪಕರ ಸಂಘ ಒಬ್ಬೊಬ್ಬ ನಾಯಕನಟನಿಗೂ ಇಷ್ಟಿಷ್ಟು ಸಂಭಾವನೆಯನ್ನು ಮಾತ್ರ ಕೊಡಬೇಕೆಂದು ನಿಗದಿಗೊಳಿಸಲು ಮತ್ತು ಅವರು ಕೇಳಿದಷ್ಟು ಹಣವನ್ನು ಯಾರೂ ನೀಡದಂತೆ ನಿಗ್ರಹಿಸುವುದು ಹೇಗೆಂಬ ಚರ್ಚೆಯಲ್ಲಿ ತೊಡಗಿದೆ.



ಗಣೇಶ ಒಂದೂಕಾಲು ಕೋಟಿ, ಪುನೀತ್‌ಗೆ ಎರಡು ಕೋಟಿ, ಉಪೇಂದ್ರನಿಗೆ ಒಂದು ಕೋಟಿ, ದರ್ಶನ್‌ಗೆ ತೊಂಭತ್ತು ಲಕ್ಷ.... ಹೀಗೆ ಒಬ್ಬೊಬ್ಬರೂ ಕೋಟಿಯ ಲೆಕ್ಕಾಚಾರದಲ್ಲಿದ್ದರೆ ನರಪೇತಲ ಹೀರೋ ಲೂಸ್ ಮಾದ ಅಲಿಯಾಸ್ ಯೋಗೀಶ್ ಕೂಡಾ ಈಗ ಒಂದು ಚಿತ್ರಕ್ಕೆ ಎಂಭತ್ತು ಲಕ್ಷ ರೂಪಾಯಿಗಳ ಸಂಭಾವನೆ ಕೇಳುತ್ತಿದ್ದಾನಂತೆ. ಚಿತ್ರನಿರ್ಮಾಣದ ಅರ್ಧ ದುಡ್ಡು ಹೀಗೆ ನಾಯಕನಟರ ಜೇಬನ್ನು ಸೇರಿದರೆ ಚಿತ್ರರಂಗ ಉದ್ಧಾರವಾಗುವುದಾದರೂ ಹೇಗೆ ಎನ್ನುವ ಲೆಕ್ಕಾಚಾರ ನಿರ್ಮಾಪಕರ ಸಂಘದ್ದು. ■

ಖೈರ್ಲಾಂಜಿ


ದಲಿತ ಭಾರತದ ಕಥನ

2006 ರ ಸೆಪ್ಟೆಂಬರ್ 29 ರಂದು ಮಹಾರಾಷ್ಟ್ರದ ಖೈರ್ಲಾಂಜಿ. ಗ್ರಾಮದ ಬೈಯಾಲಾಲ್ ಭೋತ್‌ಮಾಂಗೆ ಕುಟುಂಬದ ಮೇಲೆ ದಾಳಿ ಮಾಡಿದ ಉನ್ಮತ್ತ ಸವರ್ಣೀಯರ ಗುಂಪು, ಭೀಕರ ಅತ್ಯಾಚಾರ ನಡೆಸಿ ಭೋತ್‌ಮಾಂಗೆ ಕುಟುಂಬದ ನಾಲ್ವರನ್ನು ಕೊಂದು ಹಾಕಿತು. ಸುರೇಖಾ ಮತ್ತು ಪ್ರಿಯಾಂಕ ಭೋತ್‌ಮಾಂಗೆಯವರ ಮೇಲೆ ಸಾಯುವತನಕ ಅತ್ಯಾಚಾರ ನಡೆಸಲಾಗಿದ್ದರೆ ರೋಷನ್ ಮತ್ತು ಸುಧೀರ್ ಭೋತ್‌ಮಾಂಗೆಯವರನ್ನು ಚಚ್ಚಿ ಕೊಲ್ಲಲಾಗಿದೆ.

ಇಷ್ಟೆಲ್ಲಾ ದೌರ್ಜನ್ಯಗಳಿಗೆ ಕಾರಣವಾದದ್ದು ಈ ಸ್ವಾಭಿಮಾನಿ ದಲಿತ ಕುಟುಂಬ ಸವರ್ಣೀಯ ಹಿಂದೂಗಳ ಜಾತಿ ಅಧಿಕಾರವನ್ನು ಒಪ್ಪಿಕೊಳ್ಳದಿದ್ದದ್ದು. ಡಾ. ಆನಂದ್ ತೇಲ್‌ತುಂಬ್ಡೆಯವರು 'ಖೈರ್ಲಾಂಜಿ' ಪುಸ್ತಕದಲ್ಲಿ ಸ್ವಾತಂತ್ರೋತ್ತರ ಭಾರತದಲ್ಲಿ ಈ ಭೀಕರ ದೌರ್ಜನ್ಯ ನಡೆದ ರೀತಿಯನ್ನು ಮಾತ್ರವಲ್ಲದೆ ಅದು ಸಂಭವಿಸಿದ ಭಾರತದ ಸಾಮಾಜಿಕ ಸಂದರ್ಭವನ್ನು ವಿಶ್ಲೇಷಣೆ ಮಾಡುತ್ತಾರೆ. ಹೀಗಾಗಿ ಖೈರ್ಲಾಂಜಿ ಒಂದು ಹಳ್ಳಿಯ ಕಥೆಯಲ್ಲ 'ಖೈರ್ಲಾಂಜಿ' ಭಾರತ ದೇಶದ ದಲಿತ ಬದುಕಿನ ಕಥನ. ಈ ದೇಶದ ಸ್ವಾತಂತ್ರ್ಯ ಕೇವಲ 'ಸವರ್ಣೀಯರ ಸ್ವಾತಂತ್ರ್ಯ' ಮಾತ್ರವಾದ ರೀತಿಯನ್ನು ವಿಶ್ಲೇಷಿಸುವ ಕೃತಿ.

ಖೈರ್ಲಾಂಜಿಯನ್ನು ನಿಮಿತ್ತವಾಗಿಟ್ಟುಕೊಂಡು ಡಾ. ತೇಲ್ ತುಂಬ್ಡೆಯವರು ಈ ದೇಶದ ಜಾತಿವ್ಯವಸ್ಥೆ ಬದಲಾಗಿರುವ ರೀತಿ, ಪ್ರಭುತ್ವ ಮತ್ತು ನಾಗರಿಕ ಸಮಾಜ ಹಾಗೂ ಮಾಧ್ಯಮಗಳಿಗೆ ಹತ್ತಿರುವ ಜಾತಿ ಗೆದ್ದಲುಗಳನ್ನು ಬಯಲಿಗೆಳೆಯುತ್ತಾರೆ. ಮಾತ್ರವಲ್ಲ, ಜಾತಿ ವಿನಾಶದೆಡೆಗೆ ಹೆಜ್ಜೆ ಹಾಕಲಾರದ ದಲಿತ ಮತ್ತು ಪ್ರಗತಿಪರ ಚಳವಳಿಗಳ ಆತ್ಮವಂಚನೆಯನ್ನು ವಿಶ್ಲೇಷಿಸಿ, ನಿಜವಾದ ಜಾತಿವಿನಾಶ ಚಳವಳಿಯ ಭೂಮಿಕೆ ಏನಿರಬೇಕೆಂದು ಸ್ಥೂಲ ಚೌಕಟ್ಟು ಒದಗಿಸುತ್ತಾರೆ.

ಹೀಗಾಗಿ ಖೈರ್ಲಾಂಜಿ ಇತ್ತೀಚಿನ ದಿನಗಳಲ್ಲಿ ಕನ್ನಡದಲ್ಲಿ ಪ್ರಕಟವಾಗಿರುವ ಮಹತ್ವದ ಕೃತಿಗಳಲ್ಲಿ ಒಂದಾಗಿದೆ.



...ಸೈಷುಗರ್ ಪುನಶ್ಚೇತನ ಸಾಧ್ಯವಾ?

...ವೈಭವದ ಇತಿಹಾಸ ಮತ್ತು ಮಹತ್ವ

ಭಾಗ 2



ಮೈಷುಗರ್ ಕಂಪನಿ....

...ಮಂಡ್ಯದ ಮೈಷುಗರ್ ಅನ್ನುವ ಕಂಪನಿಗೆ ಯಾಕಿಷ್ಟು ...ತ್ವ ಕೊಡಬೇಕು? ಅದು ಮುಳುಗಿಹೋದರೆ ಅಂತಹ ...ದ್ಯ ಪರಿಣಾಮ ಏನಾಗುತ್ತದೆ ಎಂಬುದು ಅರ್ಥವಾಗ ...ಾದರೆ, ಮೈಷುಗರ್ ಕಂಪೆನಿಯ ಇತಿಹಾಸವನ್ನು ...ೂ ಅದರ ವೈಭವದ ದಿನಗಳನ್ನು ನೋಡಬೇಕು; ...ತೆಜೊತೆಗೇ ಸರ್ಕಾರೀ ಸ್ವಾಮ್ಯದ ಕಂಪೆನಿಯೊಂದು ...ಕ್ಷಿಯಾಗಿ ನಡೆದರೆ ಅದರ ಲಾಭ ಹೇಗೆ ಹಂಚಿಕೆ ...ಗುತ್ತದೆ ಎನ್ನುವುದನ್ನೂ ಅರ್ಥ ಮಾಡಿಕೊಳ್ಳಬೇಕು. ...ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ, ...ಷುಗರ್ ಎನ್ನುವ ಕರೆಯುವ ಹಸುವಿನ ಕೆಚ್ಚಲು ...ದ್ದು ಹಲವು ಭ್ರಷ್ಟ ಅಧಿಕಾರಿಗಳು ಹಾಗೂ ...ಕಾರಣಿಗಳು ಅದರ ಇವತ್ತಿನ ಸ್ಥಿತಿಗೆ ಕಾರಣರಾಗಿದ್ದಾರೆ. ...ಮು ಈ ಕಂಪೆನಿಯನ್ನು ಉಳಿಸಿಕೊಳ್ಳಬೇಕೆನ್ನುವವರೂ ...ಅದರ ಮಹತ್ವ ಹಾಗೂ ಅದು ...ಕೆ ಮುಳುಗುತ್ತಿದೆ ಎನ್ನುವುದರ ...ತು ಒಂದು ಸಮಗ್ರ ಚಿತ್ರಣ ಮುಂದಿಡ ...ದವರಾಗಿದ್ದಾರೆ.




ಸರ್.ಎಂ.ವಿ

...ಕೆಆರ್‌ಎಸ್‌ಅನ್ನು ಕಟ್ಟಿ ಮುಗಿಸಿದ್ದು ...31ರಲ್ಲಿ. ಅದರ ಮೂಲ ಉದ್ದೇಶ ...ಫ಼್‌ನ ಚಿನ್ನದ ಗಣಿಯನ್ನು ಬಗೆಯಲು ...ಗ್ಲೆಂಡ್‌ನ ಜಾನ್ ಟೇಲರ್ ಕಂಪೆನಿಗೆ ...ದ್ಯುತ್ ಒದಗಿಸುವುದಾಗಿತ್ತು. ಅಂತಹ ...ದ್ಯುತ್ ಕೇಂದ್ರ ಶಿವನಸಮುದ್ರದಲ್ಲಿದ್ದು ...ಕ್ಕೆ ವರ್ಷಪೂರ್ತಿ ನೀರುಣಿಸಲು ಡ್ಯಾಂ ...ಾಗಿತ್ತು. ಆದರೆ ಇದೇ ಡ್ಯಾಂನಿಂದ ನೀರಾವರಿ ...ಡಿಕೊಂಡು ಈ ಭಾಗದ ರೈತರಿಗೆ ಅನುಕೂಲವೂ ...ಯಿತು. ಮೈಸೂರು ಸರ್ಕಾರದ ವ್ಯವಸಾಯ ಇಲಾಖೆ ...ಶಕ ಡಾ.ಲೆಸ್ಲಿ ಕೋಲ್‌ಮನ್ ಅವರು ಇಲ್ಲಿ ರೈತರಿಗೆ ...ಬ್ಬು ಬೆಳೆ ಬೆಳೆಯಲು ಪ್ರೋತ್ಸಾಹ ನೀಡಿ, ಸಕ್ಕರೆ ...ರ್ಖಾನೆಯೊಂದನ್ನು ಸ್ಥಾಪಿಸಿದರೆ ಒಳಿತು ಎಂಬ ...ಹೆಯನ್ನು ನೀಡಿದರು. ಅದರಂತೆ 1933ರಲ್ಲಿ ಮೈ ...ಗರ್ ಸ್ಥಾಪನೆಯಾಯಿತು. ಶೇ.60ರಷ್ಟು ಷೇರುಗಳನ್ನು ...ಪ್ರಾರಂಭಿಸಿದ ಈ ಕಂಪೆನಿಯ ಷೇರುಗಳಲ್ಲಿ ಇಂದು ...89.39ರಷ್ಟು ಕರ್ನಾಟಕ ಸರ್ಕಾರದ ಸ್ವಾಮ್ಯದಲ್ಲಿದೆ. ...ರೀತಿಯಾಗಿ ಇದೊಂದು ಸಾರ್ವಜನಿಕ (ಸರ್ಕಾರೀ) ...ಮ್ಯದ ಉದ್ದಿಮೆಯಾಗಿ ಅಸ್ತಿತ್ವದಲ್ಲಿದೆ.

...ಇಲ್ಲಿ ಕಬ್ಬು ಬೆಳೆ ಬೆಳೆದದ್ದು, ಕಾರ್ಖಾನೆಯ ಮಿಲ್‌ಗಳ ...ಮರ್ಥ್ಯ ಇತ್ಯಾದಿ ವಿವರಗಳು ಈ ಲೇಖನದ ಉದ್ದೇಶಕ್ಕೆ ...ಗತ್ಯ. ಆದರೆ ಗಮನಿಸಬೇಕಾದ ಅಂಶವೆಂದರೆ, ಈ ...ರ್ಖಾನೆಯು ಮಂಡ್ಯದ ಅದುವರೆಗಿನ ಆರ್ಥಿಕ ...ಾವನ್ನು ಸಂಪೂರ್ಣವಾಗಿ ಬದಲಾಯಿಸಿತು. ಈ ...ರ್ಖಾನೆಯ ಯಶಸ್ಸಿ● (ಮೊದಲನೇ ವರ್ಷದಲ್ಲೇ 3 ಏಳೂವರೆ ಸಾವಿರ ನಿವ್ವಳ ಲಾಭ) ಆಧಾರದ ...ಲೆ 1955ರಲ್ಲಿ ಪಾಂಡವಪುರದಲ್ಲಿ ಸಹಕಾರ ಸಕ್ಕರೆ ...ರ್ಖಾನೆಯೂ, 1974ರಲ್ಲಿ ಕೆ.ಎಂ.ದೊಡ್ಡಿಯಲ್ಲಿ ...ಮುಂಡೇಶ್ವರಿ ಸಕ್ಕರೆ ಕಾರ್ಖಾನೆಯೂ ಸ್ಥಾಪನೆಯಾದವು. ...ಮರ್ಥ್ಯದಲ್ಲಿ ಮತ್ತು ಆಸ್ತಿಯಲ್ಲಿ ಮೈಷುಗರ್ ಈ ...ರ್ಖಾನೆಗಳಿಗಿಂತ ಉತ್ತಮ ಸ್ಥಿತಿಯಲ್ಲಿತ್ತು. ಸಾರ್ವಜನಿಕ ...ಮ್ಯದ ಉದ್ದಿಮೆಯಾದ್ದರಿಂದ ಇಲ್ಲಿ ರೈತರ ಕಬ್ಬಿಗೆ ...ದಲು ಬೆಲೆ ನಿಗದಿ ಮಾಡಿಸಿ ನಂತರ ಇದೇ ...ಯನ್ನು ಬೇರೆ ಕಡೆಯೂ ಕೊಡಬೇಕೆಂದು ರೈತರು ...ತ್ತಿದ್ದುದು ಇದುವರೆಗಿನ ವಾಡಿಕೆಯಾಗಿದೆ.

...ಸಾಕಷ್ಟು ಲಾಭ ಮಾಡಲಾರಂಭಿಸಿದ ಮೈಷುಗರ್ ...ರ್ಖಾನೆಗೆ ಡಿಸ್ಟಿಲ್ಲರಿಯೂ ಸೇರ್ಪಡೆಯಾಯಿತು. ...ಷ್ಟು ಕಾಲ ಇದೇ ಕಾರ್ಖಾನೆಯಲ್ಲಿ ದೊರೆಯುತ್ತಿದ್ದ ...ರ್‌ನಿಂದ ಇಲ್ಲೇ ಉತ್ತಮ ಗುಣಮಟ್ಟದ ಮದ್ಯ ...ರಿಕೆಯೂ ಆರಂಭವಾಯಿತು. ಮೈ ಸ್ವೀಟ್ಸ್ ಹೆಸರಿನಲ್ಲಿ ...ಾಕೊಲೇಟ್ ತಯಾರಿಕೆ ನಡೆಯಿತು. ಇದಲ್ಲದೆ ಜೇನು ...ದ ರೀತಿಯ 'ಗೋಲ್ಡನ್ ಸಿರಪ್'ಅನ್ನೂ ತಯಾರಿಸ ...ಗುತ್ತಿತ್ತು. ಈ ಕಾರ್ಖಾನೆಯಲ್ಲಿ ದೊರೆಯುತ್ತಿದ್ದ ...ಉಪಉತ್ಪನ್ನಗಳನ್ನೇ ಆಧರಿಸಿ ಮಂಡ್ಯದಲ್ಲೇ ಮೈಸೂರು ...ಲೇಟ್ ಕೆಮಿಕಲ್ಸ್, ಫ್ಯಾಕ್ಟರಿ ಮತ್ತು ಬೆಳಗೊಳ ಕಾಗದದ ...ರ್ಖಾನೆಗಳು ಆರಂಭವಾದುವು. ಆಗ ಸ್ವಂತ ಫಾರಂಅನ್ನೂ ...ಂದಿದ್ದ ಮೈಷುಗರ್‌ನಲ್ಲಿ ಒಟ್ಟು 4,000 ಜನ ...ಮ್ಯಗಿಗಳು ಕೆಲಸ ಮಾಡುತ್ತಿದ್ದರು.


...ಮೈಷುಗರ್ ಕಾರ್ಖಾನೆಯು ತನ್ನ ಸಿಬ್ಬಂದಿಗಾಗಿಯೇ ಆಸ್ಪತ್ರೆಯನ್ನೂ ಹೊಂದಿದೆ. ಅದರ ಜೊತೆಗೆ ಷೇರುದಾರರು ಹಾಗೂ ಸಾರ್ವಜನಿಕರ ಉಪಯೋಗಕ್ಕೆಂದು ಶಾಲೆ, ಪಿಯುಸಿ ಕಾಲೇಜು, ಐಟಿಐ, ಕಲ್ಯಾಣ ಮಂಟಪ, ಈಜು ಕೊಳ, ಆಟದ ಮೈದಾನ ಇವೆಲ್ಲವೂ ರೂಪುಗೊಂಡವು. ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿರುವ ಉದ್ದಿಮೆಯೊಂದಿದ್ದರೆ ಅದರ ಸುತ್ತ ಏನೆಲ್ಲಾ ರೂಪುಗೊಳ್ಳಬಹುದೆಂಬುದಕ್ಕೆ ಮೈಷುಗರ್ ಸಾಕ್ಷಿಯಾಗಿದೆ. ಮಂಡ್ಯ ನಗರದಲ್ಲಿ ಕನ್ನಡ ಧ್ವಜಸ್ತಂಭಗಳನ್ನು ನಿರ್ಮಿಸಲು ಇಲ್ಲಿನ ಯುವಕಸಂಘಗಳು ಬಯಸಿದಾಗ, ನೂರಾರು ಧ್ವಜಸ್ತಂಭಗಳನ್ನು ಕಂಪೆನಿಯು ನೀಡಿತು. ಈ ನಗರದ ಹಲವಾರು ಸರ್ಕಾರೀ ಕಾಲೇಜುಗಳಿಗೆ ಕಟ್ಟಡ ನಿರ್ಮಾಣ ಇತ್ಯಾದಿಗಳಿಗೆ ಮೈಷುಗರ್ ಸಹಾಯ ಮಾಡಿತು. ಪಿಇಎಸ್ ಶಿಕ್ಷಣ ಸಂಸ್ಥೆಗೆ, ಎಸ್.ಎಂ. ಕೃಷ್ಣರ ಅಪ್ಪನ ಹೆಸರಿನ ಶಿಕ್ಷಣ ಸಂಸ್ಥೆಗೂ ಹಣ ನೀಡಲಾಯಿತು.



ಎಸ್.ಎಂ.ಕೃಷ್ಣ

ಇಂದಿಗೂ ಸಹಕಾರಿ ಕ್ಷೇತ್ರದಲ್ಲಿ ಉಳಿದುಕೊಂಡಿರುವ ಹಾಲು ಉತ್ಪಾದನೆ ಮತ್ತು ಮಾರಾಟ ಕ್ಷೇತ್ರವೂ ಈ ನಾಡಿನ ಗ್ರಾಮಾಂತರ ಪ್ರದೇಶದಲ್ಲಿ ಇಂತಹ ಹಲವು ಕಲ್ಯಾಣ ಕಾರ್ಯಕ್ರಮಗಳಿಗೆ ಸಹಾಯ ಮಾಡುತ್ತಿದೆ. ಆಯಾ ಹಳ್ಳಿಗಳ ಹಾಲು ಉತ್ಪಾದಕರ ಸಹಕಾರ ಸಂಘಗಳು ಸ್ಥಳೀಯವಾಗಿ ಶಾಲೆಗಳಿಗೆ, ಊರಿನ ಕಾರ್ಯಕ್ರಮಗಳಿಗೆ ಕೆಲವು ಸಂದರ್ಭಗಳಲ್ಲಿ ಪುಸ್ತಕ ಪ್ರಕಟಣೆಗಳಿಗೂ ಸಹಾಯ ಮಾಡಿದ ಉದಾಹರಣೆಗಳಿವೆ. ಸಾರ್ವಜನಿಕ ಕ್ಷೇತ್ರದಲ್ಲೇ ಉದ್ದಿಮೆಗಳಿರದೆ, ಖಾಸಗಿಯವರ ಕೈಯಲ್ಲಿ ಅವು ಸಿಕ್ಕು, ಅವರೂ ಲಾಭ ಗಳಿಸಿದಾಗ ಇಂತಹ 'ಕಲ್ಯಾಣ' ಕಾರ್ಯಕ್ರಮಗಳಿಗೆ ಹಣ ನೀಡಬಹುದು. ಆದರೆ ಆಗ ಅಂತಹ ವ್ಯಕ್ತಿಗಳ ಮರ್ಜಿಗೆ ಸಿಲುಕಬೇಕಾಗುತ್ತದೆ. ಮೈಷುಗರ್‌ನಂತಹ ಕಂಪೆನಿಗಳಲ್ಲಾದರೆ, ಅದು ಗಳಿಸುತ್ತಿರುವ ಲಾಭ ರೈತರ ಮತ್ತು ಕಂಪೆನಿಯ ಕಾರ್ಮಿಕರ ಬೆವರಿನಿಂದ ಗಳಿಸಿದ ಲಾಭ ಇದೇ ಸಮುದಾಯಕ್ಕೆ ಬಳಕೆಯಾಗುತ್ತಿದೆ ಎಂದು ನಾವು ಭಾವಿಸಬಹುದು. ಇಲ್ಲವಾದರೆ ರೈತ-ಕಾರ್ಮಿಕರ ಶ್ರಮದ ಲಾಭ ಯಾವುದೋ ಖಾಸಗಿ ಕಂಪೆನಿಗೆ ಮಾತ್ರ ಆಗುತ್ತದೆ. ಆ ಹಣವನ್ನು ಕಲ್ಯಾಣ ಕಾರ್ಯಕ್ರಮಗಳಿಗೆ ನೀಡುವ ಬದಲು ರಾಜಕಾರಣಿಗಳಿಗೆ ಚುನಾವಣಾ ಖರ್ಚಿಗೆ ಖಾಸಗಿಯವರು ನೀಡುತ್ತಾರೆ.


ಒಟ್ಟಿನಲ್ಲಿ ಮೇಲೆ ಹೇಳಿದ ಸಂಗತಿಗಳು ಮೈಷುಗರ್ ಯಾವ ರೀತಿಯಲ್ಲಿ ಲಾಭ ಗಳಿಸುತ್ತಿತ್ತು ಎಂಬುದನ್ನು ನಮಗೆ ತೋರಿಸುತ್ತವೆ. ಇಂತಹ ಮೈಷುಗರ್ ನಷ್ಟಕ್ಕೆ ಈಡಾಗಿದ್ದು ಯಾವಾಗ? ಏಕಾಗಿ? ಯಾರಿಂದ ಎಂಬುದನ್ನು ನೋಡಬೇಕು. ಮುಂದಿನ ವಾರದ ಕಂತುಗಳಲ್ಲಿ ಈ ಕಾರ್ಖಾನೆಯ ಕಾರ್ಮಿಕರ ಪಾತ್ರವೇನು? ಇಂದಿನ ಸಕ್ಕರೆ ಉದ್ದಿಮೆಯ ಸ್ಥಿತಿ-ಗತಿ ಮತ್ತು ಕಬ್ಬು ಬೆಳೆಯ ಸ್ಥಿತಿ ಇವುಗಳ ಕುರಿತಾಗಿ ಮತ್ತು ಕೊನೆಯದಾಗಿ ಮೈಷುಗರ್ ಪುನಶ್ಚೇತನ ಸಾಧ್ಯವೇ ಎಂಬುದನ್ನು ನೋಡಬಹುದು.



ನಾಗರಾಜಪ್ಪ

ಸಣ್ಣಪುಟ್ಟ ಏರುಪೇರುಗಳಿದ್ದರೂ, 2000ರವರೆಗೆ ಮೈಷುಗರ್ ನಷ್ಟ ಅನುಭವಿಸಿದ್ದು ಎಂಬುದು ಇಲ್ಲ. 1997-98ರಲ್ಲಿ ಒಮ್ಮೆ ಕಬ್ಬು ಬೆಳೆಯಲ್ಲಿ ತೀವ್ರ ಕೊರತೆ ಉಂಟಾದಾಗ ಮಾತ್ರ ಸುಮಾರು 1.7 ಕೋಟಿ ರೂ.ಗಳಷ್ಟು ನಷ್ಟವಾಗಿತ್ತು. ವಿ.ಸಿ.ನಾಲೆ ಆಧುನೀಕರಣಕ್ಕಾಗಿ ಒಂದು ವರ್ಷ ನೀರು ನಿಲ್ಲಿಸಿದ್ದರಿಂದ ಆಗ ಕಬ್ಬು ಬೆಳೆಯಲ್ಲಿ ಕುಸಿತವಿತ್ತು. ಆದರೆ ಮರುವರ್ಷವೇ ಮತ್ತೆ ಒಂದು ಕೋಟಿಗೂ ಹೆಚ್ಚು ಲಾಭ ಬಂದಿತು. ಆ ನಂತರದಲ್ಲಿ 2000ರಿಂದ ಶುರುವಾದ ನಷ್ಟದ ಸರಪಳಿಯ ಕೊಂಡಿ ಇದುವರೆಗೂ ಕಳಚಿಲ್ಲ. ಹಾಲಿ ಕಾರ್ಖಾನೆಯು ಸುಮಾರು 450 ಕೋಟಿಗೂ ಹೆಚ್ಚು ನಷ್ಟದಲ್ಲಿ ನಡೆಯುತ್ತಿದೆ.

ಈ ನಷ್ಟಕ್ಕೆ ಕಾರಣವೇನು ಎಂಬುದರ ಬಗ್ಗೆ ಮಂಡ್ಯದ ಹಲವು ಅನುಭವಸ್ಥರನ್ನು ಕೇಳಿದರೆ ಹಲವಾರು ರೀತಿಯ ಉತ್ತರಗಳು ಬರುತ್ತವೆ. ಕೆಲವರು 2003ರಲ್ಲಿ ಎಂಡಿಯಾಗಿದ್ದು ಸಕ್ಕರೆ ಖರೀದಿ ಅವ್ಯವಹಾರ ನಡೆಸಿದ್ದ ಅಮರನಾರಾಯಣರತ್ತ ಬೊಟ್ಟು ಮಾಡಿ ತೋರಿಸುತ್ತಾರೆ. ತಾಂತ್ರಿಕ ಜ್ಞಾನವಿಲ್ಲದ ಐಎಎಸ್/ಐಪಿಎಸ್ ಅಧಿಕಾರಿಗಳನ್ನು ಎಂಡಿ/ಅಧ್ಯಕ್ಷರನ್ನಾಗಿ ಮಾಡಿದ್ದೇ ಸಮಸ್ಯೆ ಎಂದು ಕೆಲವರು ಹೇಳುತ್ತಾರೆ. ಅಧಿಕೃತವಾಗಿ ಕಾರ್ಖಾನೆಯ ಕಡೆಯಿಂದ ಮಂಡಿಸುವ ವರದಿಗಳಲ್ಲಿ 2002-03 ವರ್ಷಗಳಲ್ಲಿ ಸತತವಾಗಿ ಎರಡು ವರ್ಷ ಬಂದ ಬರಗಾಲವೇ ಇದಕ್ಕೆ ಕಾರಣ ಎನ್ನಲಾಗಿದೆ. ಸಾರಾಯಿ ತಯಾರಿಕೆ ಮಾಡುತ್ತಿದ್ದಾಗ ತೆರಿಗೆ ಹಾಕದೆ, ನಂತರ ಇದ್ದಕ್ಕಿದ್ದಂತೆ ಕೋಟ್ಯಾಂತರ ರೂ. ತೆರಿಗೆ ಹೇರಿದ್ದು ಮತ್ತು ಕೋಜನರೇಷನ್ (ಕಬ್ಬಿನ ಸಿಪ್ಪೆಯನ್ನು ಇಂಧನವಾಗಿ ಬಳಸಿ ವಿದ್ಯುತ್ ತಯಾರಿಕೆ) ಮಾಡಲು ಸುಮಾರು 100 ಕೋಟಿ ರೂ.ಗಳಷ್ಟು ಸಾಲ ತಂದಿದ್ದು ಅದನ್ನು ಇದುವರೆಗೂ ಕಾರ್ಯ ನಿರ್ವಹಿಸುವಂತೆ ಮಾಡಲಾಗದ್ದೇ ಪ್ರಮುಖ ಕಾರಣಗಳು ಎಂದು ಇನ್ನೂ ಕೆಲವರು ಹೇಳುತ್ತಾರೆ.



ಕೋಲ್‌ಮನ್

ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ತಮ್ಮ ತಂದೆಯ ಹೆಸರಿನಲ್ಲಿ ಮದ್ದೂರು ತಾಲೂಕಿನಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಹೋಗಿ ಮೈಷುಗರ್ ವ್ಯಾಪ್ತಿಯ ಬೆಳೆಗಾರರನ್ನು ತಮ್ಮ ವ್ಯಾಪ್ತಿಗೆ ತೆಗೆದುಕೊಂಡಿದ್ದು ಮತ್ತು ಬೇಕೆಂತಲೇ ಮೈಷುಗರ್‌ಅನ್ನು ನಷ್ಟಕ್ಕೀಡು ಮಾಡಿದ್ದೇ ಕಾರಣ ಎನ್ನುವವರೂ ಇದ್ದಾರೆ. ಒಟ್ಟಾರೆ ಸಕ್ಕರೆ ಉದ್ದಿಮೆ ನಷ್ಟ ಅನುಭವಿಸುತ್ತಿರುವುದರಿಂದ ಅದರ ಭಾಗವಾಗಿ ಮೈಷುಗರ್ ಕೂಡಾ ನಷ್ಟದಲ್ಲಿದೆ ಎಂಬುದು ಕೆಲವರು ನೀಡುವ ಕಾರಣ. ಮಂಡ್ಯದಲ್ಲಿ ವ್ಯಾಪಕವಾಗಿ ಕೇಳಿ ಬರುವ ಮತ್ತೊಂದು ಮುಖ್ಯ ಕಾರಣವೆಂದರೆ, ರಾಜಕಾರಣಿಗಳು ಅಧಿಕಾರದಲ್ಲಿದ್ದಾಗ ತಮಗೆ ಬೇಕಾದವರನ್ನೆಲ್ಲಾ ಕಾರ್ಖಾನೆಯಲ್ಲಿ ಸೇರಿಸುತ್ತಾ ಹೋದರು. ಇದರಿಂದ ಅಗತ್ಯಕ್ಕಿಂತಲೂ ಹೆಚ್ಚು ಕಾರ್ಮಿಕರು ಅಲ್ಲಿ ಸೇರಿದ್ದರಿಂದಲೇ ಕಾರ್ಖಾನೆ ನಷ್ಟಕ್ಕೀಡಾಯಿತು ಎಂಬುದು ಈ ವಲಯದ ಮಾತು.

ಹಾಗಾದರೆ ಅಸಲೀ ಕಾರಣಗಳೇನು? ತನ್ನನ್ನೂ ಸಾಕಿಕೊಳ್ಳುತ್ತಾ, ಲಾಭ ಮಾಡುತ್ತಾ ಮಂಡ್ಯ ಜಿಲ್ಲೆಯಾದ್ಯಂತ ಕಲ್ಯಾಣ ಕಾರ್ಯಕ್ರಮಗಳನ್ನು ನಡೆಸುತ್ತಿದ್ದ ಕಂಪನಿ ಇದ್ದಕ್ಕಿದ್ದ ಹಾಗೆ ಇಷ್ಟೊಂದು ನಷ್ಟಕ್ಕೆ ಬಿದ್ದು ಬಿಟ್ಟಿದ್ದು ಹೇಗೆ? 2003-03ರ ಸಂದರ್ಭದಲ್ಲಿ ಇಡೀ ದೇಶದಲ್ಲಿ ಬರ ಪರಿಸ್ಥಿತಿ ಇದ್ದು, ರಾಷ್ಟ್ರಮಟ್ಟದಲ್ಲೇ ಕಬ್ಬು ಬೆಳೆ- ಮತ್ತು ಸಕ್ಕರೆ ಉತ್ಪಾದನೆಯಲ್ಲಿ ಕುಸಿತವಿತ್ತು. ಮಿಕ್ಕ ಸಕ್ಕರೆ ಕಾರ್ಖಾನೆಗಳು ಇದನ್ನು ತಡೆದುಕೊಳ್ಳಲು ಸಾಧ್ಯವಾಯಿತಾದರೆ, ನಮ್ಮ ಮಂಡ್ಯದ ಕಾರ್ಖಾನೆಗೆ ಮಾತ್ರ ಏನು ಸಮಸ್ಯೆ ಉಂಟಾಗಿತ್ತು? ಸಕ್ಕರೆ ಉದ್ದಿಮೆಗೆ ಹಲವು ತೊಂದರೆಗಳು ಇರುವುದು ನಿಜವಾದರೂ, ಮೈಷುಗರ್‌ನಷ್ಟು ಆಸ್ತಿ ಮತ್ತು ಅನುಕೂಲತೆಗಳಿಲ್ಲದ ಕಾರ್ಖಾನೆಗಳು ಅದನ್ನು ತಡೆದುಕೊಳ್ಳುತ್ತಿವೆಯಲ್ಲಾ? ಈಗ 50ರಷ್ಟು ಸಂಖ್ಯೆಯಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಅರ್ಜಿಗಳು ಸರ್ಕಾರದ ಮುಂದೆ ಇದೆ. ಸಕ್ಕರೆ ಉದ್ದಿಮೆಯೇ ನಷ್ಟದಲ್ಲಿರುವುದಾದರೆ, ಇಷ್ಟೊಂದು ಅರ್ಜಿಗಳು ಏಕೆ ಬರುತ್ತಿದ್ದವು ಈ ಎಲ್ಲಾ ಪ್ರಶ್ನೆಗಳಿಗೂ ನಾವು ಉತ್ತರಿಸಬೇಕಿದೆ.

ಈ ಪ್ರಶ್ನೆಗಳಿಗೆ ಉತ್ತರವಿದೆ. ಕಳೆದ 10 ವರ್ಷಗಳಲ್ಲಿ ಮಂಡ್ಯದ ರೈತರ ಓಟನಿಂದ ಗೆದ್ದು ಬಂದ ರಾಜಕಾರಣಿಗಳಲ್ಲಿ ಬಹುತೇಕರು ಒಂದಲ್ಲಾ ಒಂದು ರೀತಿಯಲ್ಲಿ ಕಾರಣರಾಗಿದ್ದಾರೆ. ಕೆಲವರು ತಮ್ಮ ಸಕ್ರಿಯ ಮಧ್ಯಪ್ರವೇಶದಿಂದ ಇದನ್ನು ಹಾಳುಗೆಡವಿದ್ದರೆ ಕೆಲವರು ತಮ್ಮ ನಿರ್ಲಕ್ಷ್ಯದಿಂದ ನಾಶಕ್ಕೆ ಕಾರಣರಾಗಿದ್ದಾರೆ. ಇಲ್ಲಿಗೆ ಬಂದ ಅಮರನಾರಾಯಣರಂತಹ ಅಧಿಕಾರಿಗಳು ತಮ್ಮ ಅಖಂಡ ಭ್ರಷ್ಟತೆಯಿಂದಲೂ ಮತ್ತು ಕೋಜನರೇಷನ್, ಮದ್ಯ ತಯಾರಿಕೆ ಇತ್ಯಾದಿ ವಿಚಾರಗಳಲ್ಲಿ ದೂರದೃಷ್ಟಿ ಮತ್ತು ತಾಂತ್ರಿಕ ಜ್ಞಾನದ ಕೊರತೆಯಿಂದಲೂ ಕಾರಣರಾಗಿದ್ದಾರೆ. ಇದರ ಜೊತೆಗೆ ಸರ್ಕಾರದ ನೀತಿಯೇ ಈ ಕಾರ್ಖಾನೆಯು ಮುಚ್ಚಿ ಹೋಗಲು ಪೂರಕವಾಗಿರುವ ಪ್ರಮುಖ ಕಾರಣವಾಗಿದೆ. ಇವುಗಳ ಬಗ್ಗೆ ಮುಂದಿನ ಕಂತು ಬೆಳಕು ಚೆಲ್ಲಲಿದೆ.

● ಲಕ್ಷ್ಮಣ್ ಚೀರನಹಳ್ಳಿ

ಅಧ್ಯಕ್ಷ ನಾಗರಾಜಪ್ಪನ ಮುಂದುವರೆದ ಅಧ್ವಾನ

ಕಳೆದ ಸಂಚಿಕೆಯಲ್ಲಿ ಹಾಲಿ ಮೈಷುಗರ್ ಅಧ್ಯಕ್ಷ ನಾಗರಾಜಪ್ಪ ಮಾಡುತ್ತಿರುವ ಅಧ್ವಾನಗಳ ಕುರಿತು ಬರೆಯಲಾಗಿತ್ತು. ಮಹತ್ವದ ಕಂಪೆನಿಯೊಂದಕ್ಕೆ ಮುಖಹೀನ ರಾಜಕಾರಣಿಗಳು ಅಧ್ಯಕ್ಷರಾದರೆ ಏನಾಗಬೇಕೋ ಅದೇ ಆಗುತ್ತಿದೆ. ಮೈಷುಗರ್ ಕಚೇರಿಯನ್ನು ತನ್ನ ಸ್ವಂತ ಕಚೇರಿಯನ್ನಾಗಿಯೂ, ಬಿಜೆಪಿ ಕಚೇರಿಯನ್ನಾಗಿಯೂ ಈತ ಮಾರ್ಪಡಿಸಿದ್ದಾನೆ. ಅಧ್ಯಕ್ಷರ ಕಚೇರಿಯ ಮುಂದಿದ್ದ ಕಾವೇರಿ ಪ್ರತಿಮೆಯನ್ನು ನವೀಕರಣ ಮಾಡುವ ನೆಪದಲ್ಲಿ ಬಿಜೆಪಿಯ ಕಮಲದ ಮೇಲೆ ಕಾವೇರಿ ನಿಂತಿರುವಂತೆ ಬದಲಾಯಿಸಲಾಗಿದೆ. 3 ಕಿ.ಮೀ ದೂರದ ಮನೆಯಿಂದ ಕಚೇರಿಗೆ ಬರಲು 20 ಲೀಟರ್ ಪೆಟ್ರೋಲ್ ಲೆಕ್ಕ ತೋರಿಸಲಾಗುತ್ತಿದೆ. ತನ್ನ ಮೇಲೆ ಬರುತ್ತಿರುವ ಆರೋಪಗಳನ್ನು ಎದುರಿಸಲು ಕಾರ್ಖಾನೆಯ ಖರ್ಚಿನಲ್ಲಿ ವಕೀಲರನ್ನಿಟ್ಟು 29,500 ರೂಪಾಯಿ ಡ್ರಾ ಮಾಡಲಾಗಿದೆ ಎಂದು ಕಾರ್ಖಾನೆಯ ಮೂಲಗಳೇ ಹೇಳುತ್ತಿವೆ. ತನ್ನ ಕುಟುಂಬದ ಖಂಡಸಾರಿ ಕಾರ್ಖಾನೆಯನ್ನೇ ಸರಿಯಾಗಿ ನಡೆಸಲಾಗದೆ ಮುಚ್ಚಿ ಬಿಟ್ಟಿರುವ ನಾಗರಾಜಪ್ಪ ಈಗ ಬಿಐಎಫ್‌ಆರ್‌ಗೆ ಹೋಗಿರುವ ಮೈಷುಗರ್‌ನಂತಹ ದೊಡ್ಡ ಕಾರ್ಖಾನೆಯನ್ನು ಉಳಿಸುವುದುಂಟೇ?


ಮೈಷುಗರ್‌ನ ಬೆಂಗಳೂರು ಬಿಲ್ಡಿಂಗ್ ಬಾಡಿಗೆಯಲ್ಲಿ ಅವ್ಯವಹಾರ ಮಾಡಿ ಶಿವರಾಜು ಎಂಬ ಸಿಬ್ಬಂದಿ ಸಿಕ್ಕಿಹಾಕಿಕೊಂಡಿದ್ದ. ಬಿಲ್ಡಿಂಗ್‌ನ ಅಳತೆಯನ್ನೇ ತಪ್ಪು ತೋರಿಸಿ ಕಡಿಮೆ ಬಾಡಿಗೆ ವಸೂಲಾಗುವಂತೆ ಮಾಡಿದ ಶಿವರಾಜು ತನ್ನ ಜೇಬಿಗೆ ಎಷ್ಟು ಇಳಿಸಿಕೊಂಡಿದ್ದನೋ ಗೊತ್ತಿಲ್ಲ. ಲಕ್ಷಕ್ಕೂ ಹೆಚ್ಚು ನಷ್ಟ ಉಂಟಾದ ಈ ಕರ್ತವ್ಯಲೋಪದ ಕುರಿತು ಜನವರಿ 2008ರಲ್ಲೇ ಈತನಿಗೆ ನೋಟೀಸ್ ನೀಡಲಾಗಿತ್ತು. ಆದರೆ ಲಿಂಗವಂತ ನಾಗರಾಜಪ್ಪ ಅಧಿಕಾರಕ್ಕೆ ಬಂದ ಮೇಲೆ ಎಲ್ಲವೂ ಮಾಫ್ ಆಗಿಬಿಟ್ಟಿತು. ಮಾರ್ಚ್ 2009ರಲ್ಲಿ ಕೇವಲ ಎಚ್ಚರಿಕೆ ಪತ್ರವೊಂದನ್ನು ರವಾನಿಸಿ ಸುಮ್ಮನಾಗಿಬಿಡಲಾಯಿತು. ಈಗ ಇದೇ ಶಿವರಾಜನನ್ನು ನಾಗರಾಜಪ್ಪ ತನ್ನ ಪಿಎಯಂತೆ ತಿರುಗಾಡಿಸಿಕೊಂಡಿರುವುದನ್ನು ನೋಡಿ ಪ್ರಾಮಾಣಿಕ ಸಿಬ್ಬಂದಿಯು ಬೆಚ್ಚಿಬಿದ್ದಿದ್ದಾರೆ. ಈ ಅಧ್ಯಕ್ಷನೇ ಹಿಂದೆ ಪಸ್ತಿಂಡಾಗಬೇಕಿದ್ದ ಮೈಷುಗರ್‌ನ ಸಿಬ್ಬಂದಿ ತಾನೇ? ಹೇಗೆ ಅಧ್ಯಕ್ಷನೋ, ಹಾಗೆ ಸಿಬ್ಬಂದಿ ಅಂತ ಹೊಸ ಗಾದೆ ಮೈಷುಗರ್‌ನಲ್ಲಿ ಚಾಲ್ತಿಗೆ ಬಂದಿದೆ. ತನ್ನ ವಿರುದ್ಧ ಬರೆಯುವ ಪತ್ರಕರ್ತರಿಗೆ ನೋಟೀಸ್ ಕೊಟ್ಟಿದ್ದು ಮಾತ್ರವಲ್ಲದೆ, ಆತನ ಕಡೆಯ ಕೆಲವರು ಧಮಕಿ ಹಾಕುತ್ತಿರುವುದೂ ನಡೆಯುತ್ತಿದೆ.

ಹಾಗಂತ ಮಂಡ್ಯದ ಲಿಂಗಾಯತರೆಲ್ಲಾ ನಾಗರಾಜಪ್ಪನನ್ನು ಸಮರ್ಥಿಸುತ್ತಾರೆಂದು ಅರ್ಥವಲ್ಲ. ಮಂಡ್ಯ ಜಿಲ್ಲೆಯಲ್ಲಿ ನಾಗರಾಜಪ್ಪ ತಮ್ಮ ಮರ್ಯಾದೆ ಕಳೆಯುತ್ತಿದ್ದಾನೆ ಎಂದು ಅವರೆಲ್ಲರೂ ಒಟ್ಟಾಗುತ್ತಿದ್ದಾರೆ. ಬಿಜೆಪಿ ಜಿಲ್ಲಾ ಸಮಿತಿಯಲ್ಲೇ ಈತ ನಡೆಸಿದ ಎಲ್ಲಾ ಅಕ್ರಮಗಳನ್ನೂ ಬಯಲಿಗೆಳೆಯುತ್ತೇವೆಂದು ಹೇಳುತ್ತಿದ್ದಾರೆ. ಮೈಷುಗರ್‌ಗೆ ಅಧ್ಯಕ್ಷನಾಗಲು ಹೋಗಿ ಬಿಜೆಪಿ ಸಮಿತಿ ಅಧ್ಯಕ್ಷಗಿರಿಗೂ ಸಂಚಕಾರ ಬಂತಲ್ಲ ನಾಗರಾಜಪ್ಪನವರೇ?

ಯಡ್ಡಿ ವಿರುದ್ಧವೇ ಆಪರೇಷನ್ ಕಮಲ!

ರಾಜ್ಯ ಬಿಜೆಪಿಯೊಳಗಿನ ಭಿನ್ನಮತೀಯರು ಯಡ್ಡಿಯನ್ನು ಸುಮ್ಮನೆ ಬಿಡುವಂತೆ ಕಾಣುತ್ತಿಲ್ಲ.

ಈಗ್ಗೆ ಒಂದು ವರ್ಷದ ಹಿಂದೆ ನೂರಾ ಹತ್ತು ಸ್ಥಾನ ಗೆದ್ದು ಸರ್ಕಾರ ರಚಿಸಿ ಮುಖ್ಯಮಂತ್ರಿಯಾಗಿದ್ದರು ಯಡ್ಡಿ. ನಂತರ ಕಾಂಗ್ರೆ-ದಳದಿಂದ ಕೆಲ ಶಾಸಕರನ್ನು ಸೆಳೆದು ಆಗ ನಡೆದ ಉಪಚುನಾವಣೆಗಳಲ್ಲೂ ಗೆದ್ದರು. ಆಮೇಲೆ ಮೊನ್ನೆಯ ಸಂಸತ್ ಚುನಾವಣೆಯಲ್ಲಿ ಬಿಜೆಪಿಗೆ 19 ಸ್ಥಾನ ಗೆಲ್ಲಿಸಿಕೊಟ್ಟರೂ ಮೀಸೆ ತಿರುಗಿಸಿಕೊಂಡು ಮೆರೆಯಲಾಗದ ಸ್ಥಿತಿಯಲ್ಲಿದ್ದಾರೆ ಯಡ್ಡಿ. ಹೀಗೆ ಒಂದರ ಹಿಂದೆ ಒಂದರಂತೆ ಯಶಸ್ಸು ಸಾಧಿಸಿದರೂ ತನ್ನ ನಾಯಕತ್ವದ ಕುರ್ಚಿಯೇ ಅಲ್ಲಾಡುವಂತ ಕೆಟ್ಟ ಸ್ಥಿತಿ ತಂದುಕೊಂಡಿರುವುದೇ ಯಡ್ಡಿಯ ಇನ್ನೊಂದು ಸಾಧನೆಯಾಗಿದೆ.



ಈಗಿನ ಭಿನ್ನಮತೀಯರಾದ ರೆಡ್ಡಿ ಬ್ರದರ್ಸ್, ಈಶ್ವರಪ್ಪ ಯತ್ನಾಳ್, ರೇಣುಕಾಚಾರ್ಯನ ಒಟ್ಟು ಶಕ್ತಿ ಸಾಮರ್ಥ್ಯಗಳನ್ನು ಸೇರಿಸಿ ಲೆಕ್ಕಾ ಹಾಕಿದರೂ ಸದ್ಯಕ್ಕಂತೂ ಯಡ್ಡಿ ಕುರ್ಚಿಗೆ ತೊಂದರೆಯಾಗುವಂತೆ ಕಾಣುತ್ತಿಲ್ಲ. ಆದರೇನೂ ಈ ಭಿನ್ನರ ಗುಂಪು ಯಡ್ಡಿ ವಿರುದ್ಧ ಬೇರೊಂದು ರೀತಿಯ ಗೆಲುವನ್ನು ಸಾಧಿಸುವಲ್ಲಿ ಯಶಸ್ವಿಯಾಗಿದೆ.

ಲೋಕಸಭಾ ಚುನಾವಣೆಯಲ್ಲಿ 19 ಸೀಟು ಗೆದ್ದು ಖುಷಿಯಾಗಿದ್ದ ಯಡ್ಡಿಗೆ ಮೊದಲು ಏಟು ಕೊಟ್ಟಿದ್ದೇ ಈಶ್ವರಪ್ಪ 'ಹಣ-ಹೆಂಡ ಹಂಚಿ ಎಲೆಕ್ಷನ್ ಗೆದ್ದಿದ್ದಾರೆ' ಎಂದು ಈಶ್ವರಪ್ಪ ಯಡ್ಡಿ ಮುಖಕ್ಕೆ ಮಂಗಳಾರತಿ ಎತ್ತಿದ್ದರು. ಅವತ್ತು ಹಾಗೆ ಶುರುವಾದ ಮುಸುಕಿನ ಗುದ್ದಾಟ ವಿಕೋಪಕ್ಕೆ ಹೋದಾಗ ಇದೇ ಈಶ್ವರಪ್ಪ 'ಸಿಎಂ ಅಂದರೆ ದೇವರೇನಲ್ಲ' ಅಂತ ಇನ್ನೊಮ್ಮೆ ಕತ್ತಿ ಬೀಸಿದ್ದರು.

ಆಮೇಲೇನಾಯಿತು ನೋಡಿ ಈಶ್ವರಪ್ಪಗೆ ಷೋಕಾಸ್ ನೋಟೀಸ್ ಕೊಡುವುದಾಗಿ ರಾಜ್ಯ ಬಿಜೆಪಿ ಅಧ್ಯಕ್ಷ ಸದಾನಂದಗೌಡ ಬೆದರಿಸಿದರು. ಆದರೆ ಆಮೇಲೂ ಈಶ್ವರಪ್ಪ ಸುಮ್ಮನಾಗದೇ ಯಡ್ಡಿಯನ್ನು ಟೀಕಿಸುತ್ತಲೇ ಇದ್ದಾರೆ. ಆದರೆ ಸದಾನಂದಗೌಡರು ಈಶ್ವರಪ್ಪಗೆ ನೋಟಿಸು ಕೊಡುವುದಿರಲಿ 'ಸ್ವಲ್ಪ ದಿನ ಸುಮ್ಮನಿರಿ ಮಾರಾಯ್ರೆ' ಅನ್ನಲೂ ಆಗಿಲ್ಲ.

ಅಂದರೆ ಯಡ್ಡಿ-ಸದಾನಂದರ ವಿರುದ್ಧ ಈಶ್ವರಪ್ಪನ ಕೈಯೇ ಮೇಲೂ ಎಂದಾಗಲಿಲ್ಲವೆ?

ಇನ್ನೊಂದೆಡೆ ರೆಡ್ಡಿ ಬ್ರದರ್ಸ್ ಯಡ್ಡಿ ಕರ್ನಾಟಕ ರಾಜ್ಯದ ಸಿಎಂ ಎಂಬುದನ್ನು ಲೆಕ್ಕಿಸದೆ ಗುಮಾಸ್ತನೊಬ್ಬನಿಗೆ ಹೇಳುವಂತೆ 'ಆರು ಮಂತ್ರಿಗಳನ್ನು ಆಚೆ ಕಳಿಸು', ಐಎಎಸ್ ಅಧಿಕಾರಿ ಬಳೀಗಾರ್‌ನ ಓಡಿಸು, ಅದು ಮಾಡು, ಇದು ಮಾಡು' ಎಂದು ಆದೇಶ ಕೊಡುವಂತೆ ಪರತ್ತು ಹಾಕಿ ಕೊನೆಗೆ ಅದಕ್ಕೊಂದು ಡೆಡ್‌ಲೈನ್ ಅನ್ನು ವಿಧಿಸಿದ್ದಾರೆ.

ಮಜಾ ಏನೆಂದರೆ ಬಹಳ ಶಿಸ್ತಿನ ಪಕ್ಷ ಎಂದು ಬಡಾಯಿ ಕೊಚ್ಚುವ ಬಿಜೆಪಿಯಾಗಲೀ, ಅಧ್ಯಕ್ಷ ಸದಾ ಆನಂದದಲ್ಲಿರುವ ಗೌಡರಾಗಲಿ ರೆಡ್ಡಿಗಳಿಗೆ ಷೋಕಾಸ್ ನೋಟೀಸ್ ಕೊಡ್ತೀವಿ ಅನ್ನುವ ಧೈರ್ಯ ತೋರುತ್ತಿಲ್ಲ.

ಇಷ್ಟೆಲ್ಲಾ ಯಾಕೆ ನರ್ಸ್ ರೇಣುಕನಂತಹ ಒಬ್ಬ ಮಾಮೂಲಿ ಶಾಸಕನೂ ಇವತ್ತು ಯಡ್ಡಿ ವಿರುದ್ಧ ದಿನಬೆಳಗಾದರೆ ಮಾತಿನ ದಾಳಿ ಮಾಡುತ್ತಿದ್ದಾನಲ್ಲ, ಆತನಿಗೂ ನೋಟೀಸ್ ಕೊಡುವಷ್ಟು ತಾಕತ್ತು ಯಡ್ಡಿ ಗ್ಯಾಂಗಿಗೆ ಇಲ್ಲದಂತಾಗಿ ಹೋಗಿದೆ. ಬೇಳೂರು ಗೋಪಾಲಕೃಷ್ಣನೂ ಯಡ್ಡಿ ಸರ್ಕಾರದ ಮಂತ್ರಿ ಹರತಾಳು ಹಾಲಪ್ಪನ ವಿರುದ್ಧ ಟೀಕಾಸ್ತ್ರ ಪ್ರಯೋಗಿಸಿ ಆರಾಮಾಗೆ ಓಡಾಡಿಕೊಂಡಿದ್ದಾರೆ.


ಹೀಗೆ ಪಕ್ಷದೊಳಗಿನವರ ಬೌನ್ಸರ್‌ಗಳಿಗೆ ಸಿಕ್ಕು ತಲೆಗೆ ಏಟು ತಿಂದ ಯಡ್ಡಿಯೇ ಗಾಯಗೊಂಡಿದ್ದಾರೆಯೇ ವಿನಃ ಪಕ್ಷದ ಶಿಸ್ತು, ಷೋಕಾಸ್ ನೋಟಿಸ್‌ಗಳೆಂಬ ಬೌನ್ಸರ್‌ಗಳು ಭಿನ್ನಮತೀಯರಿಗೆ ಯಾವ ಪೆಟ್ಟನ್ನು ಕೊಡುತ್ತಿಲ್ಲ.

ಇದೆಲ್ಲದರ ಸಾರಾಂಶವನ್ನು ಒಂದೆಡೆ ಇಟ್ಟು ನೋಡಿದರೆ ಯಡ್ಡಿ ವಿರುದ್ಧದ ಈಗಿನ ಗಲಾಟೆಗಳಿಗೆ ಕೇವಲ ರೆಡ್ಡಿಗಳು, ನರ್ಸ್ ರೇಣುಕನ ಭಿನ್ನಮತ ಮಾತ್ರವಲ್ಲ, ರಾಜ್ಯ ಆರ್‌ಎಸ್‌ಎಸ್ ನಾಯಕರು ಹಾಗೂ ದೆಹಲಿಯ ಬಿಜೆಪಿಗಳ ಕೈವಾಡವೂ ಇರುವುದು ಕಾಣುತ್ತಿವೆ.

ಇವರೆಲ್ಲಾ ಒಟ್ಟು ಸೇರಿಯೇ ಯಡ್ಡಿ ವಿರುದ್ಧ 'ಆಪರೇಷನ್ ಕಮಲ' ಕಾರ್ಯಾಚರಣೆ ನಡೆಸುತ್ತಿರುವುದು ಈಗ ಗ್ಯಾರಂಟಿಯಾಗಿದೆ. ಭಿನ್ನಮತೀಯರ ವಿರುದ್ಧ ಯಡ್ಡಿ ಗ್ಯಾಂಗ್ ಮೇಲುಗೈ ಸಾಧಿಸಲು ಅಸಾಧ್ಯ ಎಂಬುದಕ್ಕೆ ಈಗ ಇನ್ನೊಂದು ಪುರಾವೆ ಸಿಕ್ಕಿದೆ.

ಸಂಧಾನಕ್ಕೆ ಅರುಣ್ ಜೈಟ್ಲಿ ಬೆಂಗಳೂರಿಗೆ ಬರುವ ಅಗತ್ಯವೇನಿಲ್ಲ ಎಂದು ಯಡ್ಡಿ ಗ್ಯಾಂಗ್ ಏನೇ ಹೇಳಿದರೂ ಅದನ್ನು ಲೆಕ್ಕಿಸದೆ ಜೈಟ್ಲಿ ಗುರುವಾರ ಸಂಜೆ ಬೆಂಗಳೂರಿಗೆ ಬಂದಿಳಿದಿದ್ದಾರೆ.

ಒಂದರ್ಥದಲ್ಲಿ ಯಡ್ಡಿ ಬಣಕ್ಕೆ ಇದು ಇನ್ನೊಂದು ಸೋಲು. ■




ಟ್ರಬಲ್ ಶೂಟರ್ ಸೋಮಣ್ಣನ ವ್ಯಥೆ

ಅತ್ತ ಈಶ್ವರಪ್ಪ ಇತ್ತ ಗಣಿರೆಡ್ಡಿಗಳ ಹಾವಳಿಯಿಂದಾಗಿ ಯಾರಿಗೇನಾಯಿತೋ; ಆದರೆ ಲುಕ್ಸಾನು ಅಂತ ಆಗಿದ್ದು ಮಾತ್ರ ಸೋಮಣ್ಣನಿಗೆ. ಎಲ್ಲವೂ ನೆಟ್ಟಗಿದ್ದಿದ್ದರೆ ಈ ಹೊತ್ತಿಗಾಗಲೇ ಸೋಮಣ್ಣ ನಗರಾಭಿವೃದ್ಧಿ ಮಂತ್ರಿಯಾಗಿ ಮಿಂಚುತ್ತಿದ್ದ. ಸೋಮಣ್ಣನಂಥ ಕಾರ್ಯಸಮರ್ಥ ಟ್ರಬಲ್ ಶೂಟರ್ ಒಬ್ಬನ ಅನಿವಾರ್ಯತೆಯೂ ಯಡ್ಡಿಗಿತ್ತು. ಲೋಕಸಭೆಯ ಫಲಿತಾಂಶ ಹೊರಬಿದ್ದ ಒಂದೆರಡು ವಾರಕ್ಕೆ ಸೋಮಣ್ಣನ ಪಟ್ಟಾಭಿಷೇಕ ನೆರವೇರಿಸುವ ಉಮೇದಿಯೂ ಯಡ್ಡಿಗಿತ್ತು.

ಯಾವತ್ತು ಈಶ್ವರಪ್ಪ ಮತ್ತು ಗಣಿರೆಡ್ಡಿಗಳ ಕ್ಯಾತೆ ಶುರುವಾಗಿ ಹೈಕಮಾಂಡ್ ಎಂಟ್ರಿಯಾಯಿತೋ ಸೋಮಣ್ಣನ ಮಂತ್ರಿಗಿರಿಗೆ ವಾತಾವರಣ ತಿಳಿಯಾಗುವತನಕ ಅಂದರೆ ಇನ್ನು ಮೂರು ತಿಂಗಳ ಕಾಲ ಸಂಪುಟ ಪುನರ್ರಚನೆಯೇ ಬೇಡ ಎಂದು ಬಿಜೆಪಿ ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್ ಯಡ್ಡಿಗೆ ತಾಕೀತು ಮಾಡಿದ್ದು ಸೋಮಣ್ಣನ ಆಶಾಗೋಪುರವನ್ನೇ ನೆಲಕಚ್ಚಿಸಿಬಿಟ್ಟಿತ್ತು. ಬಿಜೆಪಿಯೊಳಗಿನ ಕಚ್ಚಾಟ ನಿಂತು, ಎಲ್ಲವೂ ಸರಿಹೋಗುವ ಲಕ್ಷಣಗಳೇನೂ ಸದ್ಯಕ್ಕೆ ಕಾಣಿಸುತ್ತಿಲ್ಲ. ಹೈಕಮಾಂಡ್ ಅನುಮೋದನೆ ಕೊಟ್ಟು ಸಚಿವ ಸಂಪುಟ ಪುನರ್ರಚನೆಯಾಗುವುದು ಇನ್ನು ಯಾವ ಕಾಲಕ್ಕೋ? ಹಾಗೊಮ್ಮೆ ಮಂತ್ರಿಯಾದರೂ ಸೋಮಣ್ಣನ ಬಯಕೆಯಾದ ನಗರಾಭಿವೃದ್ಧಿ ಇಲಾಖೆ ಸಿಗದಂತೆ ಆರ್. ಅಶೋಕ್ ಬೇರೆ ಕಲ್ಲು ಹಾಕಿದ್ದಾರೆ. ಹೀಗಾಗಿ ಸೋಮಣ್ಣನ ಮಂತ್ರಿ ಕನಸಿಗೆ ಸದ್ಯ ಮುಕ್ತಿ ಕಾಣಿಸುತ್ತಿಲ್ಲ.

ಹಾಗಿದ್ದೂ ಸೋಮಣ್ಣನಂಥ ನಿಷ್ಠಾವಂತನನ್ನು ಬಿಟ್ಟರೆ ಯಡ್ಡಿಗೆ ಬೇರೆ ಗತಿಯಿಲ್ಲ. ಸದ್ಯದ ಹತಾಶ ಸ್ಥಿತಿಯಲ್ಲಿ ಗಣಿರೆಡ್ಡಿಗಳ ಕೋಟೆಗೆ ಲಗ್ಗೆಹಾಕಿ ಒಂದಷ್ಟು ಅತೃಪ್ತ ಶಾಸಕರನ್ನು ಯಡ್ಡಿ ಪರ ಎಳೆದು ತರುವ ತಾಕತ್ತಿರುವುದು ಸೋಮಣ್ಣನಿಗೇ. ಅಶೋಕ್, ಕಟ್ಟಾ, ಲಿಂಬಾವಳಿ, ಸುರೇಶ್‌ಕುಮಾರ್‌ಗೆ ಹೋಲಿಸಿದರೆ ಸೋಮಣ್ಣನೇ ಹೆಚ್ಚು ಪ್ರಯೋಜನಕಾರಿ ಮತ್ತು ವಿಶ್ವಾಸಾರ್ಹ ಎಂಬ ನಂಬಿಕೆ ಯಡ್ಡಿಗಿದೆ. ಮಂತ್ರಿಯಾಗಲಿ, ಬಿಡಲಿ ಸದ್ಯದ ಮಟ್ಟಿಗಂತೂ ಸೋಮಣ್ಣನೇ ಯಡ್ಡಿಯ ಆಪತ್ಬಾಂಧವ ಮತ್ತು ಸಂಕಟ ನಿವಾರಕ! ■



19 ಎಂಪಿಗಳು ತಂದಿತ್ತ ಕಿಕ್ಕು

ಒಂದು ರೀತಿಯಲ್ಲಿ ಮೊನ್ನೆಯ ಲೋಕಸಭಾ ಚುನಾವಣೆಯಲ್ಲಿ ಯಡ್ಡಿ ನೇತೃತ್ವದಲ್ಲಿ ಬಿಜೆಪಿ 19 ಸ್ಥಾನಗಳನ್ನು ಗೆದ್ದಿದ್ದೇ ಇವತ್ತು ಅವರಿಗೆ ಮುಳುವಾಗಿದೆ. ಮುಖ್ಯವಾಗಿ, ಇಡೀ ಭಾರತದಲ್ಲೇ ಯಾವುದೇ ರಾಜ್ಯ ಇಷ್ಟೊಂದು ಬಿಜೆಪಿ ಸದಸ್ಯರನ್ನು ಲೋಕಸಭೆಗೆ ಗೆಲ್ಲಿಸದ ಕಾರಣ ಯಡ್ಡಿ ಇದು ತನ್ನ ವೈಯಕ್ತಿಕ ವರ್ಚಸ್ಸಿಗೆ ಸಂದ ಗೆಲುವು ಎಂದೇ ಅರ್ಥೈಸಿದರು.

ಅದಕ್ಕೆ ಸರಿಯಾಗಿ ಯಡ್ಡಿಯ ಭಟ್ಟಂಗಿಗಳೂ ಅವರಿಗೆ ಪಂಪ್ ಹೊಡೆದರು. "ಸಾರ್, ನೀವು ನರೇಂದ್ರ ಮೋದಿಗಿಂತಲೂ ಪಾಪ್ಯುಲರ್ ಸಾರ್", "ಗುಜರಾತಲ್ಲೇ 19 ಸ್ಥಾನ ಗೆಲ್ಲಲು ಮೋದಿಗೆ ಸಾಧ್ಯವಾಗಲಿಲ್ಲ, ಮೋದಿ ಮಾಡಲಾಗದ ಸಾಧನೆಯನ್ನು ನೀವು ಮಾಡಿದ್ದೀರಿ", "ಕಳೆದ ಬಾರಿ ವಾಜಪೇಯಿ ಅಲೆ ಕೃಪೆಯಿಂದಾಗಿ ಹದಿನೆಂಟು ಸ್ಥಾನಗಳನ್ನು ನಾವು ಗೆದ್ದಿದ್ದೆವು. ಆದರೆ ಈ ಬಾರಿ ವಾಜಪೇಯಿ ಅಲೆ ಇರಲಿಲ್ಲ, ಆದರೂ ಹತ್ತೊಂಭತ್ತು ಸ್ಥಾನಗಳನ್ನು ಗೆದ್ದಿದ್ದು ನಿಮ್ಮ ನಾಮಬಲದಿಂದಲೇ", "ಅಸೆಂಬ್ಲಿ ಚುನಾವಣೆಯಲ್ಲಿ ನಿಮ್ಮ ಪರ ಸಿಂಪಥಿ ವೇವ್ ಇತ್ತು, ಹಾಗೆಯೇ ರಾಷ್ಟ್ರೀಯ ನಾಯಕ ಅರುಣ್ ಜೇಟ್ಲಿಯ ಕಾರ್ಯತಂತ್ರದ ನೆರವು ಇತ್ತು. ಆದರೆ ಈ ಬಾರಿ ಅವರ ನೆರವಿಲ್ಲದೇ, ಸಿಂಪಥಿ ವೇವ್ ಸಹಾಯವಿಲ್ಲದೆ ಬಿಜೆಪಿ ಇಷ್ಟೊಂದು ಸ್ಥಾನಗಳನ್ನು ಗೆದ್ದಿತೆಂದರೆ ನೀವು ನಮ್ಮ ಪ್ರಶ್ನಾತೀತ ನಾಯಕ" ಎಂದೆಲ್ಲ ಭಟ್ಟಂಗಿಗಳು ಯಡ್ಡಿಯನ್ನು ಹಾಡಿ ಹೊಗಳಿದರು. ಇಂತಹ ಮಾತುಗಳನ್ನು ಕೇಳಿದ ಯಡ್ಡಿ ತಾನೋರ್ವ ರಾಷ್ಟ್ರನಾಯಕನೆಂಬ ಭ್ರಮೆಗೆ ಬಿದ್ದರು.



ಹೀಗೆ ಲೋಕಸಭಾ ಚುನಾವಣೆಯ ನಂತರ ಯಡ್ಡಿ ತಮ್ಮ ಖಾಸಗಿ ದರ್ಬಾರಿನಲ್ಲಿ ಭಟ್ಟಂಗಿಗಳ ಈ ಮುಖಸ್ತುತಿಯನ್ನು ಕೇಳಿಸಿಕೊಂಡು ಇನ್ನಷ್ಟು ಸರ್ವಾಧಿಕಾರ ಮನೋಪ್ರವೃತ್ತಿಯನ್ನು ಬೆಳೆಸಿಕೊಳ್ಳಲಾರಂಭಿಸಿದರು. ರಾಜ್ಯದ ಮತ್ತು ಪಕ್ಷದ ವಿಷಯಗಳನ್ನು ದೆಹಲಿ ನಾಯಕರೊಂದಿಗೆ ಚರ್ಚಿಸದೇ ತಾನು ಏನು ಮಾಡಿದರೂ ನಡೆಯುತ್ತದೆ, ತನ್ನನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ ಎಂಬಂತೆ ಎಲ್ಲ ನಿರ್ಧಾರಗಳನ್ನು ಏಕಪಕ್ಷೀಯವಾಗಿ ತೆಗೆದುಕೊಳ್ಳಲಾರಂಭಿಸಿದರು.

ಪಕ್ಷಕ್ಕೆ ಮೊನ್ನೆ ಮೊನ್ನೆ ಹಾರಿಬಂದ ಸೋಮಣ್ಣನಂತಹ ಪಕ್ಷಾಂತರಿಗಳಿಗೆ ಪವರ್‌ಫುಲ್ ಸಚಿವ ಖಾತೆಯನ್ನು ನೀಡುವ ಬಗ್ಗೆ ಯಾರೊಂದಿಗೂ ಚರ್ಚಿಸದೆ ನಿರ್ಣಯ ಕೈಗೊಂಡರು. ರಾಜ್ಯದ ಅಭಿವೃದ್ಧಿಯ ನೆಪದಲ್ಲಿ ಕೆಲವು ಟೆಂಡರ್‌ಗಳನ್ನು ತನ್ನ ಕುಲಬಾಂಧವರಿಗೆ ನೀಡಲು ಮುಂದಾದರು. ಇವೆಲ್ಲವೂ ಸಹಜವಾಗಿಯೇ ಆರೆಸ್ಸೆಸ್ ನಾಯಕರಲ್ಲಿಯೂ ಮತ್ತು ದೆಹಲಿ ನಾಯಕರಲ್ಲಿಯೂ ಯಡ್ಡಿಯ ಬಗ್ಗೆ ಅಸಮಾಧಾನ ಮೂಡಲು ಕಾರಣವಾಯಿತು.

ಸರ್ವಾಧಿಕಾರಿಯಂತೆ ವರ್ತಿಸಲಾರಂಭಿಸಿದ್ದ ಯಡ್ಡಿಯನ್ನು ಸರಿದಾರಿಗೆ ತರುವ ಉದ್ದೇಶದಿಂದಲೇ ದೆಹಲಿ ನಾಯಕರುಗಳೇ ಈ ಭಿನ್ನಮತೀಯ ಚಟುವಟಿಕೆಗಳನ್ನು ಹುಟ್ಟು ಹಾಕಿದರು ಎಂಬುದು ಈಗ ಬಿಜೆಪಿಯಲ್ಲಿ ಎಲ್ಲರೂ ಅರಿತಿರುವ ಬಹಿರಂಗ ಸತ್ಯ. ಇದಕ್ಕೆ 'ಆಪರೇಷನ್ ಯಡ್ಡಿಯೂರಪ್ಪ' ಎಂದು ದೆಹಲಿ ನಾಯಕರು ಅಡ್ಡ ಹೆಸರನ್ನೂ ಇಟ್ಟಿದ್ದಾರಂತೆ! ಭಿನ್ನಮತೀಯ ಚಟುವಟಿಕೆಗಳನ್ನು ಹುಟ್ಟುಹಾಕಿದ ತಕ್ಷಣ ಯಡ್ಡಿ ಸಹಜವಾಗಿಯೇ ದೆಹಲಿ ನಾಯಕರ ಮನೆ ಬಾಗಿಲು ಬಡಿಯುವಂತಾಗುತ್ತದೆ ಎಂಬುದು ಅವರ ಮಾಸ್ಟರ್ ಪ್ಲಾನ್ ಆಗಿದೆ!

ರಾಜ್ಯದಲ್ಲಿ ತನ್ನ ಮೂಗಿನ ನೇರಕ್ಕೆ ಹಲವಾರು 'ಆಪರೇಷನ್'ಗಳನ್ನು ಮಾಡಿ ದಕ್ಕಿಸಿಕೊಂಡಿದ್ದ 'ಡಾ.ಯಡ್ಡಿಗೆ' ದೆಹಲಿ ನಾಯಕರು ತುಂಬಾ ಜಾಣತನದಿಂದ ಹೀಗೆ 'ಆಪರೇಷನ್' ಮಾಡಿದ್ದಾರೆ. ಹತ್ತೊಂಬತ್ತು ಸೀಟುಗಳನ್ನು ಗೆದ್ದು ಹಮ್ಮು-ಬಿಮ್ಮುಗಳಿಂದ ಓಡಾಡುತ್ತಿದ್ದ ಯಡಿಯೂರಪ್ಪ ಭಿನ್ನಮತೀಯ ಚಟುವಟಿಕೆಯಿಂದಾಗಿ ಈಗ ಪ್ಯಾಪೆ ಮೋರೆ ಹಾಕಿಕೊಂಡು, ನಿದ್ದೆ, ನೆಮ್ಮದಿ ಇಲ್ಲದೆ ಕಾಲ ಕಳೆಯುತ್ತಿದ್ದಾರೆ, ಕಂಡಕಂಡವರ ಕಾಲು ಹಿಡಿಯುತ್ತಿದ್ದಾರೆ, ಹೋಮ-ಹವನಗಳನ್ನು ಮಾಡಿಸುತ್ತಿದ್ದಾರೆ.

'ಆಪರೇಷನ್ ಯಡಿಯೂರಪ್ಪ'ನ ಮುಖ್ಯ ರೂವಾರಿಗಳು ಕೇಂದ್ರ ನಾಯಕರಾದ ಅರುಣ್ ಜೇಟ್ಲಿ ಮತ್ತು ಸುಷ್ಮ ಸ್ವರಾಜ್. ಇವರಿಬ್ಬರ ಆಶೀರ್ವಾದ ಮತ್ತು ಬೆಂಬಲದ ಫಲವಾಗಿಯೇ ಈಶ್ವರಪ್ಪ ಮತ್ತು ರೆಡ್ಡಿ ಸಹೋದರರು ಬಹಿರಂಗವಾಗಿ ಪಕ್ಷದ ಶಿಸ್ತಿನ ನಿಯಮಕ್ಕೆ ವಿರುದ್ಧವಾಗಿ ಬಂಡಾಯ ಏಳಲು ಸಾಧ್ಯವಾದದು. ಇಲ್ಲದಿದ್ದರೆ ಯಡಿಯೂರಪ್ಪನವರ ವಿರುದ್ಧ ಅಷ್ಟೊಂದು ಧೈರ್ಯವಾಗಿ ಮಾತನಾಡಲು ಇವರೆಲ್ಲರಿಗೆ ಧೈರ್ಯ ಎಲ್ಲಿಂದ ಬರುತ್ತಿತ್ತು?


ಮುಖ್ಯವಾಗಿ ಅರುಣ್ ಜೇಟ್ಲಿ ಅವರಿಗೆ ಯಡ್ಡಿ ವಿರುದ್ಧ ಸಿಕ್ಕಾಪಟ್ಟೆ ಸಿಟ್ಟಿದೆಯಂತೆ. "ಅರುಣ್ ಜೇಟ್ಲಿ ಕಾರ್ಯತಂತ್ರದಿಂದಾಗಿಯೇ ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದ್ದು" ಎಂದು ರಾಷ್ಟ್ರ ನಾಯಕರು ಜೇಟ್ಲಿಯ ಬೆನ್ನು ತಟ್ಟಿದ್ದರು. ಅದು ಯಡ್ಡಿ ಕಣ್ಣು ಕೆಂಪಾಗಲು ಕಾರಣವಾಗಿತ್ತು. "ಕಷ್ಟಪಟ್ಟು ರಾಜ್ಯಾದ್ಯಂತ ಪ್ರವಾಸ ಮಾಡಿದ್ದು ನಾನು, ಅಭ್ಯರ್ಥಿಗಳಿಗೆ ಹಣ ಒದಗಿಸಿದ್ದು ನಾನು, ಅವರನ್ನು ಗೆಲ್ಲಿಸಿದ್ದು ನನ್ನ ಜಾತಿ, ಆದರೂ ಎಲ್ಲ ಕ್ರೆಡಿಟ್ ಈ ಮನುಷ್ಯನಿಗೆ ಹೋಯಿತಲ್ಲಾ" ಎಂದು ಯಡ್ಡಿ ತನ್ನ ಪರಮಾಪ್ತರ ಮುಂದೆ ಸಿಟ್ಟು, ಆಕ್ರೋಶ ವ್ಯಕ್ತಪಡಿಸಿದ್ದರು.

ಅಷ್ಟೇ ಅಲ್ಲ "ಅದೇ ಅರುಣ್ ಜೇಟ್ಲಿಯ ಕಾರ್ಯಶೈಲಿ ಲೋಕಸಭಾ ಚುನಾವಣೆಯಲ್ಲಿ ಬೇರೆ ರಾಜ್ಯಗಳಲ್ಲಿ ಯಾಕೆ ಕ್ಲಿಕ್ಕಾಗಲಿಲ್ಲ?" ಎಂದು ಮೊನ್ನೆ ೧೯ ಸೀಟು ಗೆದ್ದ ಹುರುಪದಲ್ಲಿ ಜೇಟ್ಲಿ ಬಗ್ಗೆ ಯಡ್ಡಿ ವ್ಯಂಗ್ಯದ ಮಾತನಾಡಿದ್ದರು. ಈ ಮಾತು ಅರುಣ್ ಜೇಟ್ಲಿ ಕಿವಿಗೆ ಬಿದ್ದಿದ್ದೇ ತಡ ದಕ್ಷಿಣ ಭಾರತದಲ್ಲಿರುವ ಏಕೈಕ ಬಿಜೆಪಿ ಸರ್ಕಾರವನ್ನು ಉಳಿಸಬೇಕಾದರೆ ಯಡ್ಡಿಯ ರೆಕ್ಕೆಪುಕ್ಕವನ್ನು ಕತ್ತರಿಸಲೇಬೇಕು ಎಂದು ಹಿರಿಯ ನಾಯಕರೊಡನೆ ಸಮಾಲೋಚಿಸಿದರಂತೆ.

ಅದೂಅಲ್ಲದೆ ಸದ್ಯದಲ್ಲೇ ಮಹಾರಾಷ್ಟ್ರ ಮತ್ತು ಇನ್ನಿತರ ರಾಜ್ಯಗಳಲ್ಲಿ ನಡೆಯಲಿರುವ ಅಸೆಂಬ್ಲಿ ಚುನಾವಣೆಗೆಂದು ಬಿಜೆಪಿ ಪಕ್ಷಕ್ಕೆ ಸಾಕಷ್ಟು ಫಂಡ್ ಬೇಕಾಗಿದೆ. ಯಡ್ಡಿಯನ್ನು ಈಗಲೇ ಹದ್ದುಬಸ್ತಿನಲ್ಲಿಡದಿದ್ದರೆ ಈತನಿಂದ ಪಕ್ಷಕ್ಕೆ ನಯಾಪೈಸೆ ಸಿಗುವುದಿಲ್ಲ ಎಂಬುದು ದೆಹಲಿ ನಾಯಕರಿಗೆ ಮನದಟ್ಟಾಯಿತು.

ಹೀಗೆ ಯಡಿಯೂರಪ್ಪನವರ ಅಟ್ಟಹಾಸ, ಸರ್ವಾಧಿಕಾರ, ಸ್ವೇಚ್ಛಾಚಾರಕ್ಕೆ ಕಡಿವಾಣ ಹಾಕುವ ಉದ್ದೇಶದಿಂದಲೇ ದೆಹಲಿ ನಾಯಕರ ಸೂಚನೆ ಮೇರೆಗೆ ಈ ಭಿನ್ನಮತೀಯ ಚಟುವಟಿಕೆ ಆರಂಭವಾದದ್ದು. ■

ಹುಸಿನಗೆ ಗೌಡನಿಗೆ ಮಂಗಳಾರತಿ




ಯಡ್ಡಿ ವಿರುದ್ಧ ಮೊದಲ ರಣಕಹಳೆ ಊದಿದ ಈಶ್ವರಪ್ಪನವರ ಸಿಟ್ಟು ಸದ್ಯಕ್ಕೆ ತಣಿಯುವ ಲಕ್ಷಣಗಳಿಲ್ಲ. ಮೊನ್ನೆಯಷ್ಟೇ ರಾಜ್ಯ ಬಿಜೆಪಿಯ ಕಚೇರಿ ಕಾರ್ಯದರ್ಶಿ ಕೇಶವ ಪ್ರಸಾದ್ ಎಂಬ ಸದಾನಂದಗೌಡರ ಶಿಷ್ಯನೊಬ್ಬನಿಂದ ಈಶ್ವರಪ್ಪನಿಗೆ ಫೋನ್ ಬರುತ್ತದೆ. 'ನೋಡಿ ಈಶ್ವರಪ್ನೋರೇ.. ಇನ್ನು ಮುಂದೆ ನೀವು ಸಿಎಂ ವಿರುದ್ಧ ಬಹಿರಂಗವಾಗಿ ಎಲ್ಲೂ ಮಾತಾಡಕೂಡದು ಅಂತ ಸದಾನಂದಗೌಡರು ಸೂಚಿಸಿದ್ದಾರೆ. ಸುಮ್ನೆ ರಗಳೆ ಯಾಕೆ...? ' ಎಂದು ಕೇಶವ ಪ್ರಸಾದ್ ರಾಗ ತೆಗೆಯುತ್ತಿದ್ದಂತೆ ಈಶ್ವರಪ್ಪನವರ ಪಿತ್ತ ನೆತ್ತಿಗೇರಿದೆ.

"ಅಲ್ಲಪ್ಪಾ... ಪಾರ್ಟಿಯಲ್ಲಿ ನಾನು ಸೀನಿಯರ್ರಾ, ಸದಾನಂದಗೌಡನಾ? ಪಕ್ಷದ ಐಡಿಯಾಲಜಿಯನ್ನ ಆ ಸದಾನಂದಗೌಡನಿಂದ ನಾನು ಕಲಿತುಕೊಳ್ಳಬೇಕಾ? ಯಡಿಯೂರಪ್ಪನಿಂದ ಕಾಟ ಅನುಭವಿಸ್ತಿರೋನು ನಾನಾ ಸದಾನಂದಗೌಡನಾ? ನನಗೇನಯ್ಯಾ ಅವ್ನು ಬುದ್ಧಿ ಹೇಳೋದು? ಮೊದಲು ಯಡಿಯೂರಪ್ಪಂಗೆ ಬುದ್ಧಿ ಹೇಳೋಕೆ ಹೇಳು; ನನಗಲ್ಲ...!" ಎಂದು ಫೋನ್ ಕುಕ್ಕಿದ್ದಾರೆ ಈಶ್ವರಪ್ಪ. ಅಲ್ಲಿಗೆ ಸದಾನಂದಗೌಡರ ನೋಟೀಸು ಪುರಾಣಕ್ಕೆ ತೆರೆ ಬಿದ್ದಿದೆ. ಗೌಡರಾಗಲಿ ಕೇಶವಪ್ರಸಾದ್ ಆಗಲಿ ಮತ್ತೆ ಈಶ್ವರಪ್ಪನವರಿಗೆ ಫೋನ್ ಮಾಡಿದ ಮಾಹಿತಿಯಿಲ್ಲ. ಬಹುಶಃ ಮಾಡುವುದೂ ಇಲ್ಲ.

ಅನಂತು ಯಾಕೆ ಫುಲ್ ಸೈಲೆಂಟು?

ಬಿಜೆಪಿಯಲ್ಲಿ ಭಿನ್ನಮತ ಭುಗಿಲೆದ್ದಿದೆ. ಈಶ್ವರಪ್ಪ ಮತ್ತು ರೆಡ್ಡಿ ಬ್ರದರ್ಸ್ ಸಿಎಂ ಯಡ್ಡಿಗೆ ನೇರ, ನೇರ ಸವಾಲೊಡ್ಡುತ್ತಿದ್ದಾರೆ. ಆದರೆ ಈ ಭಿನ್ನಮತೀಯ ಚಟುವಟಿಕೆಗೆ ನೇರವಾಗಿ ಅಥವಾ ಪರೋಕ್ಷವಾಗಿ ನಾಯಕತ್ವ ವಹಿಸಲಿದ್ದಾರೆ ಎಂದು ನಿರೀಕ್ಷಿಸಲಾಗುತ್ತಿದ್ದ ಸಂಸದ ಅನಂತ್‌ಕುಮಾರ್ ಮಾತ್ರ ಫುಲ್ ಸೈಲೆಂಟಾಗಿರುವಂತೆ ವರ್ತಿಸುತ್ತಾ ಬಿಜೆಪಿ ಪಾಳಯದಲ್ಲಿಯೇ ಕುತೂಹಲ ಮೂಡಿಸಿದ್ದಾರೆ.

ರಾಜಕೀಯ ಕುತಂತ್ರಗಳಿಗೆ ಹೆಸರಾಗಿರುವ ಅನಂತ್‌ಕುಮಾರ್ ರಾಜಕೀಯ ಲೆಕ್ಕಾಚಾರ ಹಾಕಿಯೇ ಈಗ ಸುಮ್ಮನಾಗಿದ್ದಾರೆಂದು ಹೇಳಲಾಗುತ್ತಿದೆ. ಆದರೆ ಪಕ್ಷದ ಹೈಕಮಾಂಡ್ ಎದುರು ತಮ್ಮ ಪರವಾಗಿ ಮಾತನಾಡುತ್ತಾರೆಂದೇ ಬಯಸಿದ್ದ ಈಶ್ವರಪ್ಪ ಆ್ಯಂಡ್ ಟೀಮ್ ಅನಂತು ಈ ವರ್ತನೆಯಿಂದ ಬೆಚ್ಚಿಬಿದ್ದಿದೆ. ಬೆನ್ನಿಗೆ ಚೂರಿ ಹಾಕುವುದರಲ್ಲಿ ಅನಂತು ನಿಸ್ಸೀಮ ಎಂದು ಯಡ್ಡಿ ಹೇಳುತ್ತಿದ್ದುದ್ದರಲ್ಲಿ ಸತ್ಯಾಂಶವಿದೆ" ಎಂದು ಈಗ ಈಶ್ವರಪ್ಪ ಹೇಳಲಾಗುತ್ತಿದ್ದಾರಂತೆ!



ಬಿಜೆಪಿಯಲ್ಲಿ ಏನೇ ಆದರೂ ಅದರಲ್ಲಿ ತನ್ನ ಪಾತ್ರವಿದ್ದೇ ಇರುತ್ತದೆ ಎಂಬಂತೆ ಪೋಜು ನೀಡುತ್ತಿದ್ದ ಅನಂತು ಭಿನ್ನಮತ ಭುಗಿಲೆದ್ದಿರುವಾಗಲೂ ಬಾಯಿಗೆ ಬೀಗ ಜಡಿದುಕೊಂಡು ಸುಮ್ಮನಿರುವುದನ್ನು ನೋಡಿದರೆ, ಏನೋ ಮಸಲತ್ತು ನಡೆಸುತ್ತಿರುವಂತಿದೆ ಎಂದು ಬಿಜೆಪಿ ಪಾಳಯದ ಮಂದಿ ಮಾತನಾಡಿಕೊಳ್ಳುತ್ತಿದ್ದಾರೆ.

ಅನಂತು ಲೆಕ್ಕಾಚಾರವೇನು?

ಈಗ ಭುಗಿಲೆದ್ದ ಭಿನ್ನಮತ ತಾರ್ಕಿಕ ಅಂತ್ಯ ಕಾಣುವುದಿಲ್ಲ ಎಂಬುದು ಅನಂತುಗೆ ಮನದಟ್ಟಾಗಿದೆ. ಹೀಗಾಗಿ 'ಕಜ್ಜಾಯ ತಿಂದೇಕೆ ಜಾತಿ ಕೆಡಿಸಿಕೊಳ್ಳಬೇಕು' ಎಂದು ಸುಮ್ಮನಾಗಿದ್ದಾರೆ ಎನ್ನುತ್ತಿದೆ ಅವರ ಆತ್ಮೀಯ ವಲಯ. ಆದರೆ ಸುಮ್ಮನೆ ಕೂರುವ ಜಾಯಮಾನ ಅನಂತುದೇನೂ ಅಲ್ಲ. 'ವಿ.ಕ' ಎಂಬ ನಂ.1 ಚೆಡ್ಡಿ ಪತ್ರಿಕೆಯ ಸಂಪಾದಕನಾಗಿರುವ, ಹಳೆಯ ಗೆಳೆಯ ವಿಶ್ವೇಶ್ವರ ಭಟ್ಟನನ್ನು ಕರೆದು, ಯಡ್ಡಿಗೆ ಚಳಿಜ್ವರ ಬರುವಂತೆ ಮಾಡಿ ಎಂದು ಸೂಚನೆ ನೀಡಿದ್ದಾರಂತೆ. ಹೀಗಾಗಿ, ಒಳ್ಳೆ ವಿರೋಧ ಪಕ್ಷದ ಪತ್ರಿಕೆಯಂತೆ ವಿ.ಕ. ಯಡ್ಡಿ ವಿರುದ್ಧದ ಭಿನ್ನಮತೀಯ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಿದೆ.

ಆದರೂ, ಈಗ ಯಾರೇ ಏನೇ ಮಾಡಿದರೂ ಯಡ್ಡಿಯನ್ನು ಕೂಡಲೇ ಅಧಿಕಾರದಿಂದ ಇಳಿಸಲು ಸಾಧ್ಯವಿಲ್ಲ, ಜಾತಿಬಲ ಹೊಂದಿರುವ ಅವರ ವಿರುದ್ಧ ಬಹಿರಂಗ ಸಮರ ಸಾರಿದರೆ ವ್ಯರ್ಥವೇ ಸರಿ. ಅಲ್ಲದೆ ಪಕ್ಷ ರಾಷ್ಟ್ರೀಯ ಮಟ್ಟದಲ್ಲಿ ತೀವ್ರ ಕಳಪೆ ಸಾಧನೆ ಮಾಡಿರುವುದರಿಂದ ಪಕ್ಷದ ಹೈಕಮಾಂಡ್ ಕೂಡ ರಾಜ್ಯದಲ್ಲಿನ ಸರ್ಕಾರದ ನೇತೃತ್ವವನ್ನು ಬದಲಾಯಿಸಲು ಹೋಗುವುದಿಲ್ಲ, ಹೀಗಾಗಿ ಈಗ ಭಿನ್ನಮತೀಯರೊಂದಿಗೆ ಗುರುತಿಸಿಕೊಳ್ಳುವುದರಿಂದ ಯಾವುದೇ ಪ್ರಯೋಜನವಿಲ್ಲ, ಹೀಗಾಗಿ ಕೆಸರು ಕೆರೆಗೆ ಇಳಿಯುವುದೇ ಬೇಡ ಎಂದು ಬುದ್ಧಿವಂತಿಕೆಯಿಂದ ದೂರ ಉಳಿದಿದ್ದಾರೆ.


ಆರ್‌ಎಸ್‌ಎಸ್ ಕೂಡ ಬಿಜೆಪಿಯಂತೆಯೇ ಒಡೆದು ಎರಡು ಭಾಗವಾಗಿದೆ. ಒಂದು ಬಣ ಯಡ್ಡಿ ಪರ ನಿಂತಿದ್ದರೆ, ಮತ್ತೊಂದು ಬಣ ಆದರ್ಶದ ಪಾಠ ಹೇಳುತ್ತಿದೆ. ಹೀಗಾಗಿ ಯಡ್ಡಿಯನ್ನು ಅಧಿಕಾರದಿಂದ ಇಳಿಸುವ ಕುರಿತು ಅಲ್ಲಿ ಕೂಡ ಒಮ್ಮತ ಮೂಡುವುದು ಕಷ್ಟ. ಹೀಗಾಗಿ ಏನೇ ಆದರೂ ತೇಪೆ ಹಚ್ಚಿ ಕೆಲವರಿಗೆ ಎಚ್ಚರಿಕೆ ನೀಡಿ ಪರಿಸ್ಥಿತಿಯನ್ನು ತಿಳಿಗೊಳಿಸಲಾಗುತ್ತದೆ ಎಂಬುದು ಅನಂತುಗೆ ಗೊತ್ತಿದೆ. ಆದರೆ ಈಶ್ವರಪ್ಪ ಮತ್ತು ತಂಡ, ಅನಂತು ಕೊನೆಗೂ ಯಡ್ಡಿ ಗ್ಯಾಂಗ್ ಸೇರಿದ್ದಾರೆ ಎಂದು ಪ್ರಚಾರ ಮಾಡುತ್ತಿದೆ.

ದಿಲ್ಲಿಯಲ್ಲಿಯೂ ಜಗಳ

ರಾಷ್ಟ್ರಮಟ್ಟದಲ್ಲಿಯೂ ಪಕ್ಷದಲ್ಲಿ ಭಿನ್ನಮತ ಭುಗಿಲೆದ್ದಿದೆ. ಅಡ್ವಾಣಿ, ರಾಜನಾಥ್ ಸಿಂಗ್ ಮತ್ತು ಜಸ್ವಂತ್‌ಸಿಂಗ್ ನೇತೃತ್ವದಲ್ಲಿ ಬಣಗಳು ಹುಟ್ಟಿಕೊಂಡಿದ್ದು, ಒಬ್ಬರ ಮೇಲೆ ಮತ್ತೊಬ್ಬರು ಕೆಸರು ಎರಚಲು ಆರಂಭಿಸಿದ್ದಾರೆ. ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ನೇಮಕಗೊಂಡಿರುವ ಅರುಣ್ ಜೇಟ್ಲಿ ವಿರುದ್ಧ ದೊಡ್ಡ ಹೋರಾಟ ಆರಂಭವಾಗಿದೆ.

ದಿಲ್ಲಿಯಲ್ಲಿನ ಬೆಳವಣಿಗೆ ರಾಜ್ಯ ರಾಜಕಾರಣದ ಮೇಲೂ ಪರಿಣಾಮ ಬೀರಿದೆ. ವೆಂಕಯ್ಯ ನಾಯ್ಡು ನೇರವಾಗಿ ಭಿನ್ನಮತೀಯರಿಗೆ ಬೆಂಬಲ ನೀಡುತ್ತಿದ್ದರೆ, ಪಕ್ಷದ ಅಧ್ಯಕ್ಷ ರಾಜ್‌ನಾಥ್ ಸಿಂಗ್ ಯಡ್ಡಿಗೆ ಅಭಯ ನೀಡಿದ್ದಾರೆ. ರಾಜ್‌ನಾಥ್ ಸಿಂಗ್ ವಿರುದ್ಧ ಕತ್ತಿ ಮಸೆಯುತ್ತಿರುವ ಅರುಣ್ ಜೇಟ್ಲಿ ಈಗ ರಾಜ್ಯದಲ್ಲಿನ ಭಿನ್ನಮತೀಯರ ಅಹವಾಲು ಆಲಿಸಲು ಬಂದಿದ್ದಾರೆ.

ಸರಿಯಾದ ಸಂದರ್ಭದಲ್ಲಿ ಅನಂತು ಮಾತನಾಡಿ, ತಾವಂದುಕೊಂಡಿದ್ದನ್ನು ಸಾಧಿಸಿಕೊಳ್ಳುತ್ತಾರೆ ಎನ್ನುತ್ತಿದೆ ಬಿಜೆಪಿ ಮೂಲಗಳು. ಯುದ್ಧ ನಿರ್ಣಾಯಕ ಹಂತಕ್ಕೆ ಬರುವವರೆಗೂ ಅನಂತ್‌ಕುಮಾರ್ ಲೆಕ್ಕಾಚಾರಗಳು ಗೊತ್ತಾಗುವುದು ಕಷ್ಟ. ■



ಕರಿಯ ಕಂಬಳಿ ಗದ್ದಿಗೆ ಮಾಡಿ ವೀರದೊಳ್ಳ ತಂದಿರಿಸಿದರೊ!

ಕಳೆದ ಚುನಾವಣೆಯಲ್ಲಿ ಸಾದ ಜನಾಂಗ ಸಾಲಿಡ್ಡಾಗಿ ಬಿಜೆಪಿಗೆ ಓಟು ಮಾಡಿದೆ ಎಂದು ಗ್ರಹಿಸಿದ ಎಡೂರಪ್ಪ ಸದರಿ ಜನಾಂಗವನ್ನು ಮೀಸಲಾತಿ ಕೆಟಗರಿಯ 2(ಎ) ಪ್ರವರ್ಗಕ್ಕೆ ಸೇರಿಸಿದ್ದಾರಂತಲ್ಲಾ, ಭೂಮಿ, ಕಾಣಿ, ವಸತಿ ಯಾವೊಂದು ಸೌಲಭ್ಯವೂ ಇಲ್ಲದೆ ನಿರ್ಗತಿಕರಾಗಿ ಬದುಕುತ್ತಿರುವ ಸಾದ ಜನಾಂಗ ಇನ್ನು ಮುಂದಾದರೂ ಮುಂದೆ ಬರಲೆಂದು ಮೀಸಲಾತಿ ಕೊಟ್ಟಿರುವ ಎಡೂರಪ್ಪನೆಂಬ ಯಬಡನ ತೀರ್ಮಾನವನ್ನ ನೋಡಿದ ಸಾದ ಜನಾಂಗ ಗಹಗಹಿಸಿ ನಕ್ಕು, ಪಾರ್ಟಿ ಮಾಡಿತಂತಲ್ಲಾ. "ಮುಂಡೆ ಮಗ ಎಡೂರಪ್ಪನಿಗೆ ನಮ್ಮ ಜನಾಂಗದವರು ಮಡಗಿರುವ ಅಡಿಕೆ ತೋಟಗಳ ಮಾಹಿತಿಯೇ ಇಲ್ಲ, ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ ಇವೆಲ್ಲಾ ಒಂದಿಷ್ಟು ತಿರುಗಾಡಿ, ಅಡಿಕೆ ಕುಬೇರರ ಮನೆಯಲ್ಲಿ ಉಂಡು ತಿಂದು, ಅವರ ಮನೆ ಮುಂದಿನ ಕಾರನ್ನ ನೋಡಿದ್ದರೆ ಇಂತಹ ಮೂರ್ಖ ತೀರ್ಮಾನ ತೆಗೆದುಕೊಳ್ಳುತ್ತಿರಲಿಲ್ಲ" ಎಂದು ಅಡಿಕೆ ಕುಬೇರರೇ ಆಡಿಕೊಳ್ಳುತ್ತಿದ್ದಾರಂತಲ್ಲಾ, ಥೂತ್ತೇರಿ!

* * * * * * * *

ಮೂರ್ಖ ಮನುಷ್ಯನೊಬ್ಬ ಮುಖ್ಯಮಂತ್ರಿಯಾದರೆ ಅವನೆಂದೂ ಒಳ್ಳೆಯ ಕೆಲಸ ಮಾಡಲಾರ ಎಂಬುದು ಕರ್ನಾಟಕದ ಮಟ್ಟಿಗೆ ಅದಾಗಲೇ ಸಾಬೀತಾಗಿಹೋಗಿದೆಯಂತಲ್ಲಾ, ಇಂತಹ ಮೂರ್ಖನನ್ನ ಬದಲಾಯಿಸಲೇಬೇಕೆಂದು ಹೊರಟಿರುವ ಈಶ್ವರಪ್ಪನ ಪಡೆ ಒಂದೆಡೆಯಾದರೆ, ಗಣಿಕಳ್ಳರ ಕೂಟ ಒಂದೆಡೆ ಸೇರಿಕೊಂಡು ಮಸಲತ್ತು ನಡೆಸುತ್ತಿದೆಯಂತಲ್ಲ, ಸದಾ ಶನೇಶ್ವರನನ್ನು ಹಿಡಿದುಕೊಂಡಿದ್ದ ಈಶ್ವರಿ, ಶನಿಯಂತೆಯೇ ಎಡೂರಿಯ ಹೆಗಲೇರಿದ್ದೂ ಅಲ್ಲದೇ, ಮೈಸೂರವರೆಗೂ ಹೋಗಿ ಚಾಮುಂಡಿ ಬೆಟ್ಟದಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡು ಗಳಗಳನೆ ಅತ್ತರಂತಲ್ಲಾ, ಈಶ್ವರಿ ಅಭಿಮಾನಿಗಳು "ಯಾಕ್ ಸಾರ್ ಅಳತಿರಿ?" ಎಂದು ಕೇಳಲಾಗಿ, ಈಶ್ವರಪ್ಪ ಕಣ್ಣೀರು ಗೊಣ್ಣೆಯನ್ನೆಲ್ಲಾ ಒರೆಸಿಕೊಂಡು ಕರ್ಚೀಪನ್ನು ಜುಬ್ಬದ ಜೇಬಿನಲ್ಲಿಡುತ್ತ "ಇದು ಸಂತೋಷದ ಕಣ್ಣೀರು ಕಂಡ್ರೀ. ಬಳ್ಳಾರಿ ಕಡೆಯಿಂದ ಬರಿಗೈ ಹೋದ ನಾನು ಶಿವಮೊಗ್ಗದಲ್ಲಿಂದು ಕುಬೇರ ಮಂತ್ರಿ. ಅದೂ ಇಂಧನ ಮಂತ್ರಿ" ಎಂದು ಸೊಂಟಕೊಂಕಿಸಿ, ಪಿಟೀಲು ಕುಯ್ಯುವಂತೆ ಗ್ಯಾಸ್ ಬಿಟ್ಟು ನಕ್ಕರಂತಲ್ಲಾ, ಥೂತ್ತೇರಿ!!

* * * * * * * *

ಎಡೂರಿ, ಸುಖಸಂಪತ್ತಿನಿಂದ ಕೂಡಿರುವ ಸಾದರನ್ನು ಹಿಂದುಳಿದ ವರ್ಗಕ್ಕೆ ಸೇರಿಸುವ ಸಂದರ್ಭದಲ್ಲೇ, ಹಿಂದುಳಿದ ವರ್ಗದ ಮುಂದುವರಿದ ಸಿದ್ಧರಾಮಯ್ಯನನ್ನ ಕಾಂಗ್ರೆಸ್ ಪಕ್ಷ ವಿರೋಧಪಕ್ಷದ ನಾಯಕರನ್ನಾಗಿ ಕಡೆಗೂ ಆರಿಸಿ ನಿಟ್ಟುಸಿರು ಬಿಟ್ಟಿತಂತಲ್ಲಾ, ಈ ಸಮಯದಲ್ಲವರನ್ನ ಅಭಿನಂದಿಸಬೇಕಾದದ್ದು ಧರ್ಮವಲ್ಲವೇ. ಆದ್ದರಿಂದ ಫೋನ್ ಮಾಡಲಾಗಿ ಸಿಕ್ಕದರು.


ರಿಂಗ್‌ಟೋನ್ : "ಕರಿಯಕಂಬಳಿ ಗದ್ದಿಗೆ ಮಾಡಿ ವೀರದೊಳ್ಳ ತಂದಿರಿಸಿದರೋ.. ವೀರದೊಳ್ಳ ತಂ...."

"ಹಲೋ, ಯಾರು?"

"ನಾನು ಯಾಹೂ ಅಂತ ಪತ್ರಕರ್ತ, ತಾವ್ಯಾರು ಸಾರ್?"

"ನಾನು ಮುಕಡಪ್ಪ ಕಂಡ್ರಿ. ಸಾಯೇಬ್ರಿಗೆ ಕೊಟ್ಟೆ ಇರಿ."

"ಹಲೋ?"



"ನಮಸ್ಕಾರ ಸಾರ್, ನಾನು ಯಾಹೂ ಅಂತ ಪತ್ರಕರ್ತ."

"ಏನ್ ಯಾಹೂ ಅವರೇ?"

"ಕಂಗ್ರಾಟ್ಸ್ ಸಾರ್, ಅಂತೂ ವಿರೋಧಿ ನಾಯಕರಾದ್ರಿ."

"ಆದೆ ಅನ್ನದಕಿಂತ ಮಾಡಿದ್ರು ಅನ್ನಬಹುದು."

"ನಿಜ ಸಾರ್. ಕಾಂಗ್ರೆಸ್ನಲ್ಲಿ ನೀವೇ ಏನಾದ್ರು ಆಗಕ್ಕಾಗಲ್ಲ, ಅವ್ರುರಾಗೇ ಮಾಡಬೇಕು. ನೋಡಿ, ದೇವೇಗೌಡ್ರಿಗಿಂತ ಹಿರಿಯರಾದ ಎಸ್ಸೆಂಕೃಷ್ಣ ಮುಖ್ಯಮಂತ್ರಿಯಾಗಕ್ಕೆ ಎಪ್ಪತ್ತು ವರ್ಷ ವಯಸ್ಸಾಗಿತ್ತು, ಅದೇ ದೇವೇಗೌಡ್ರು ತಾವೇ ಆಗಬೇಕಾದ್ರೆ ಕೇವಲ ಅರವತ್ತೈದು ವರ್ಷ ತುಂಬಿಸಿದ್ರು. ಆದ್ರಿಂದ ಕಾಂಗ್ರೆಸ್ನಲ್ಲಿ ಏನಾರ ಆಗಬೇಕಾದ್ರೆ ಆಯಸ್ಸು ಗಟ್ಟಿ ಇರಬೇಕು ಸಾರ್."

"ಅದಕ್ಕೆ ನಾನು ಯಾವ ಹ್ಯಾಬಿಟ್ಸು ಜಾಸ್ತಿ ಇಟಗಂಡಿಲ್ಲ, ವಾಕ್ ಮಾಡ್ತಿನಿ, ಯೋಗಾಸನ ಮಾಡ್ತಿನಿ, ನಿದ್ದೆ ಮಾಡ್ತಿನಿ."

"ವಿರೋಧಪಕ್ಷದ ಕೆಲಸ ಪಾರ್ಟಿ ಪ್ರೆಸಿಡೆಂಟಗಿಂತ ಈಜಿನ ಸಾರ್?"

"ಒಂಥರ ಅಂಗೆ ಅನ್ನಬಹುದು. ಪಾರ್ಟಿ ಪ್ರೆಸಿಡೆಂಟಾದ್ರೆ ತಿರಗಬೇಕು. ಸಂಘಟನೆ ಮಾಡಬೇಕು. ಸಭೆ ಮಾಡಬೇಕು. ಫಂಡೆತ್ತಬೇಕು. ಖರ್ಚು ಮಾಡಬೇಕು. ಇಲ್ಲಿ ಅಂತ ಯಾವ ಕ್ಯಲಸನೂ ಇಲ್ಲ, ಎಡೂರಪ್ಪನ ಸರಕಾರವ ಸಾರಾಸಗಟು ವಿರೋಧಿಸಿಕೊಂಡು ಇರಬಹುದು."

"ಅದಕ್ಕೆ ಏನೋ ಸಾರ್, ಕುಮಾರ್‌ಸ್ವಾಮಿ ಆ ಸ್ಥಾನನ ಪಡಪೋಸಿ ಸ್ಥಾನ, ಅದರಲ್ಯಾವ ಬೆಲೆನೂ ಇಲ್ಲ ಅಂತ ಆಡಿಕಂಡವ್ರುರೆ."

"ಚೈಲ್ಡಿಷಾಗಿ ಮಾತಾಡೋರಿಗ್ಯಲ್ಲ ಉತ್ತರ ಕೊಡಕ್ಕಾಗಲ್ಲ."

"ಜನ ಅವ್ರುರ ಮಾತ್ನ ನಿಜ ಅನ್ನಕಂಡ್ರೆ?"

"ಅನ್ನಕಂಡ್ರೇನಾಯ್ತದೇ? ಅವ್ರುರಪ್ಪ ಇಪ್ಪತ್ತೊರ್ಸ ಮಾಡಿಕೊಂಡು ಬಂದ ಕ್ಯಲಸ ಅದೇ ಅಲ್ವಾ? ಅವರಪ್ಪ ಮಾಡಿರೋ ಕೆಲಸ ಪಡಪೋಸಿ ಅನ್ನದಾದ್ರೆ ನಾವಿನ್ನೇನೇಳಕ್ಕಾದತೂ?"

"ಜಿ.ಪರಮೇಶ್ವರ ನಿಮಗ್ಯಾಕ್ ಸಾರ್ ಅಡ್ಡಗಾಲಾಗಿದ್ರು?"

"ಅದೂ, ಖರ್ಗೆ ಸ್ಥಾನ ನನಿಗೆ ಬೇಕು ಅಂತ ಕೇಳಿದ್ರು. ಅವ್ರುರು ಕೇಳಿದ್ರಲ್ಲಿ ಒಂಥರಾ ವಾರಸುದಾರಿಕೆ ಇತ್ತು."

"ಅವ್ರುರದೇನೋ ಸರಿ; ಜಯಚಂದ್ರ?"

"ಅವ್ರುನು ಎಸ್ಸೆಂ ಕೃಷ್ಣನ ಸರಕಾರದಲ್ಲಿದ್ದಾಗ ತೆಂಗಿನ ನುಸಿರೋಗ ನಿವಾರಣೆ ಮಾಡಿದ್ನಂತೆ. ನುಸಿರೋಗನ ತಗದೋನು [illegible] ಅಂತ ಬಂದಿದ್ನ, ಸುಮ್ಮನಾದ ಅತ್ತಗೆ."

"ಬಿಜೆಪಿ ಬಂಡಾಯ ನಿಮಗೇನನ್ನಸ್ತದ [illegible]?"

"ಅದ ಬಂಡಾಯ ಅನ್ನಕ್ಕಾಗದಿಲ್ಲ, ರಾಮದಾಸು, ದೇವನೂರು ಮಾಡಿದ್ದ ಬಂಡಾಯ ಅನ್ನಬವುದು. ಪುರೋಹಿತ ಶಾಹಿಗಳು, ಯಥಾಸ್ಥಿತಿವಾದಿಗಳು ಮಾಡೋ ಕ್ಯಲಸವ ಬಂಡಾಯ ಅನ್ನಕ್ಕಾದತೇ?"

"ಆದ್ರು, ನೀವು ಬಂಡಾಯದ ಜನಕ್ಕೆ ಎನ್‌ಕ್ಯೈಜ್ ಮಾಡಬೇಕಲ್ಲವೆ?"

"ಎನ್‌ಕ್ಯೈಜ್ ಯಾಕ್ ಮಾಡಬೇಕೂ? ಅವೇನು ಮೊಲ ಓಡಿಸಿಗಂಡೋಯ್ತಾಯಿರೋ ನಾಯಿಗಳಾ? ಈ ಈಶ್ವರಪನಿಗೆ ಓಲಿಸಿದ್ರೆ ಆ ಎಡೂರಪ್ಪನೇ ಪರವಾಗಿಲ್ಲ."

"ಥೂತ್ತೇರಿ!!!"



ಲಿಂಗದ ಕೋಟೆಗೆ ಜನಿವಾರ?

ಆರೆಸ್ಸೆಸ್ ಕಪಟನಾಟಕ ಶುರು

■ ರಾ. ಸೋಮನಾಥ್

ಟ್ರಾನ್ಸ್‌ಫರ್ ಸುಲಿಗೆ, ಭೂಕಬಳಿಕೆ, ದುರಾಡಳಿತ, ಭ್ರಷ್ಟಾಚಾರ, ಸ್ವಜನಪಕ್ಷಪಾತ ಬಿಟ್ಟರೆ ಯಡ್ಡಿ ಸರ್ಕಾರದ ಸಾಧನೆಯೆಂದರೆ ಚುನಾವಣೆಯಲ್ಲಿ ಬಿಟ್ಟಿ ಹಂಚಿದ ಹಣ ಹೆಂಡಗಳಷ್ಟೆ. ತನಗೆ ಮಣೆಹಾಕದ ಸಿಟ್ಟಿಗೆ ಈಶ್ವರಪ್ಪ, ಗಣಿ ಲೂಟಿಗೆ ಹಪಹಪಿಸುವ ರೆಡ್ಡಿ ಗ್ಯಾಂಗ್ ಈಗ ಯಡ್ಡಿ ವಿರುದ್ಧ ತಿರುಗಿಬಿದ್ದರೆ ಇದನ್ನೇ ತನ್ನ ಸ್ವಾರ್ಥಸಾಧನೆಗೆ ಆರೆಸ್ಸೆಸ್ ಅಸ್ತ್ರವಾಗಿ ಬಳಸುತ್ತಿದೆಯೇ ಹೊರತು ಅದಕ್ಕೆ ರಾಜ್ಯದ ಅಭಿವೃದ್ಧಿ ಬೇಕಿಲ್ಲ. ಒಂದೆಡೆ ಈಶ್ವರಪ್ಪನವರನ್ನು ಛೂಬಿಟ್ಟು ಮತ್ತೊಂದೆಡೆ ಗಣಿ ರೆಡ್ಡಿಗಳ ಬ್ಲಾಕ್‌ಮೇಲ್ ಬಳಸಿಕೊಂಡು ಆರೆಸ್ಸೆಸ್ ಸಮಯ ಸಾಧಿಸುತ್ತಿದೆಯೇ ಹೊರತು ಯಡ್ಡಿಯನ್ನು ಸಂಕಟದಿಂದ ಪಾರು ಮಾಡುತ್ತಿಲ್ಲ. ಲಿಂಗಾಯತರ ಕೋಟೆಗೆ ಜನಿವಾರ ಕಟ್ಟುವುದು ಬಿಟ್ಟರೆ ಚೆಡ್ಡಿ ಗ್ಯಾಂಗ್‌ಗೆ ಬೇರೆ ಉದ್ದೇಶವೇನಿದೆ?

ರೆಡ್ಡಿಯಂಥ ಕ್ರಿಮಿನಲ್‌ಗಳನ್ನು ಸಂಪುಟದಿಂದ ಕೈಬಿಡುವುದಿರಲಿ ಮೊದಲು ಜೈಲಿಗೆ ಹಾಕಬೇಕಾಗುತ್ತದೆ. ತಮಾಷೆಯೆಂದರೆ ಇದೇ ಕ್ರಿಮಿನಲ್ ಗ್ಯಾಂಗ್ ಮಹಾನ್ ಸಾಚಾಗಳಂತೆ ಕರಂದ್ಲಾಜೆ, ಬಸವರಾಜ ಬೊಮ್ಮಾಯಿ, ಕಟ್ಟಾ, ಉದಾಸಿ, ಹಾಲಪ್ಪರಂಥ ಮಂತ್ರಿಗಳನ್ನು ಯಡ್ಡಿ ಸಂಪುಟದಿಂದ ಕೈಬಿಡುವಂತೆ ಒತ್ತಾಯಿಸುತ್ತಿದೆ. ಈಶ್ವರಪ್ಪನವರಂಥವರು ಗಣಿರೆಡ್ಡಿಗಳ ಇಂಥ ಬೊಬ್ಬೆಗೆ ಸಾತು ಕೊಟ್ಟರೆ ರೇಣುಕಾ ಚಾರ್ಯನಂಥ ಕೀಚಕರೂಪಿಗೆ ಬೊಗಳುವುದೇ ನಿತ್ಯಕಾಯಕವಾಗಿದೆ.


ಮೇಲುನೋಟಕ್ಕಿದು ಯಡ್ಡಿ ನಿರಂಕುಶಾಧಿಕಾರದ ವಿರುದ್ಧ ಅತೃಪ್ತರ ದಂಗೆಯೇ. ಗಣಿ ರೆಡ್ಡಿಗಳ ಬೇಡಿಕೆಗೆ ತಾರ್ಕಿಕ



ಸಮರ್ಥನೆಯಾಗಲಿ, ಅದನ್ನು ಬೆಂಬಲಿಸುವ ಅತೃಪ್ತರ ಕೂಗಿಗೆ ಸಮಂಜಸ ತಳಹಾಯವಾಗಲಿ ಕಾಣಿಸುತ್ತಿಲ್ಲ. ಯಾವ ಕಾರಣಕ್ಕೆ ಈ ಆರು ಮಂತ್ರಿಗಳನ್ನು ತೆಗೆಯಬೇಕೆಂಬ ಪ್ರಶ್ನೆಗೆ ರೆಡ್ಡಿಗಳಲ್ಲೇ ಉತ್ತರವಿಲ್ಲ. ಹಾಗೇ ನೋಡಿದರೆ ಕಟ್ಟಾನಾಯ್ಡು ಗಣಿಕಳ್ಳರು ಯಾರೋ ಮಂತ್ರಿಯೊಬ್ಬ ನಾಲಾಯಕ್ಕೆಂದೋ ನಿಷ್ಪ್ರಯೋಜಕನೆಂದೋ ತೀರ್ಪು ಕೊಟ್ಟುಬಿಟ್ಟರೆ ಅಂಥವರನ್ನು ಮುಖ್ಯಮಂತ್ರಿ ಯಡಿಯೂರಪ್ಪ ಏಕೆ ಹೊರದಬ್ಬಬೇಕು? ಇಂಥ ದಗಾಕೋರರ ಭಟ್ಟಂಗಿಯಂತೆ ಪುಂಗಿ ಊದುತ್ತಿರುವ ಹೊನ್ನಾಳಿ ಶಾಸಕ ರೇಣುಕಾಚಾರ್ಯನೇ ಹೇಳಿಕೇಳಿ ನರ್ಸ್ ಜಯಲಕ್ಷ್ಮಿ ಪ್ರಕರಣದಲ್ಲಿ ಫೋಟೋ ಸಮೇತ ರೆಡ್‌ಹ್ಯಾಂಡ್ ಸಿಕ್ಕಿಬಿದ್ದ ವ್ಯಭಿಚಾರಿ. ಬೊಮ್ಮಾಯಿ, ಉದಾಸಿ, ಹಾಲಪ್ಪನಂಥವರನ್ನು ಸಂಪುಟದಿಂದ ಕೈಬಿಡಿ ಎನ್ನಲು ಇವರಿಗಾದರೂ ಯಾವ ಯೋಗ್ಯತೆಯಿದೆ.

ಇನ್ನು ಸಾಗರದ ಶಾಸಕ ಬೇಳೂರು ಗೋಪಾಲಕೃಷ್ಣನ ಚರಿತ್ರೆಯಾದರೂ ಎಂಥದ್ದು? ನಕಲಿ ವಿಸ್ಕಿ ರಮ್ಮು ತಯಾರಿಸಿ ಕಳ್ಳಸಾಗಾಟ ಮಾಡುತ್ತಿರುವಾಗಲೇ ಅಬಕಾರಿ ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದು ಜೈಲು ಕಂಡ ಬೇಳೂರು ಗೋಪಾಲಕೃಷ್ಣ ಈಗ ರೆಡ್ಡಿಗಳ ಪರನಿಂತು ಮಂತ್ರಿಗಳ ರಾಜೀನಾಮೆ ಕೇಳುತ್ತಿದ್ದಾನೆಂದರೆ ಅದಕ್ಕೇನಾದರೂ ಅರ್ಥವುಂಟೆ?

ಗಣಿ ರೆಡ್ಡಿಗಳ ಧಮಕಿಗೆ ಕಾರಣವೇ ಬೇರೆಯಿದೆ. ಒಂದೆಡೆ ಬಳ್ಳಾರಿ ಶಾಸಕ ಸೋಮಶೇಖರ ರೆಡ್ಡಿಯನ್ನು ಛೂಬಿಟ್ಟು ಮುಖ್ಯಮಂತ್ರಿ ವಿರುದ್ಧ ದಿನಕ್ಕೊಂದು ಕ್ಯಾತೆ ತೆಗೆಸುತ್ತಾರೆ. ಬಳ್ಳಾರಿಯ ಅಭಿವೃದ್ಧಿಗಷ್ಟೇ ತಮ್ಮ ತಕರಾರು ಎನ್ನುವ ಸೋಮಶೇಖರ ರೆಡ್ಡಿಯ ಬಳಿ ಬೇಡಿಕೆಯಂತೆ ಒಂದಷ್ಟು ಮಂತ್ರಿಗಳನ್ನು ಕೈಬಿಟ್ಟರೂ ರೆಡ್ಡಿಗಳ ಹಾವಳಿ ನಿಲ್ಲುವುದಿಲ್ಲ. ಏಕೆಂದರೆ ಅವರ ಬೇಡಿಕೆಯೇ ಬೇರೆಯಿದೆ. ಬ್ಲಾಕ್‌ಮೇಲ್ ತಂತ್ರವಾಗಿ ಇಂಥ ಹುಸಿ ಕಾರಣಗಳನ್ನು ಸೃಷ್ಟಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಹವಣಿಸುತ್ತಿರುವ ರೆಡ್ಡಿಗಳ ಮೂಲ ಜರೂರತ್ತೆಂದರೆ; ಯಾವುದೇ ಕಾರಣಕ್ಕೂ ಆಂಧ್ರ-ಕರ್ನಾಟಕದ ಗಡಿಯ ಜಂಟಿ ಸರ್ವೆ ನಡೆಯದಂತೆ ತಡೆಯುವುದು!



ಅಯೋಗ್ಯರೆಂಬ ಕಾರಣಕ್ಕೆ ಕೈಬಿಡುವುದೇ ಆದರೆ ಯಡ್ಡಿ ಸಂಪುಟದಿಂದ ಮೊದಲು ಹೊರಹಾಕಬೇಕಾದದ್ದು ಯಾರನ್ನು?

ಒಂದಲ್ಲಾ ಎರಡಲ್ಲಾ ಮೂವತ್ತೆರಡು ಕ್ರಿಮಿನಲ್ ಕೇಸುಗಳಿರುವ ಶ್ರೀರಾಮುಲು ಎಂಬ ರೌಡಿಯನ್ನೋ? ಕರ್ನಾಟಕದ ನಕ್ಷೆಯನ್ನೇ ತಿದ್ದಿ ಸಹಸ್ರಾರು ಕೋಟಿ ಮೊತ್ತದ ಅದಿರು ದೋಚಿದ ಜನಾರ್ದನ ರೆಡ್ಡಿಯನ್ನೋ? ಅಥವಾ ಅರಣ್ಯವನ್ನೇ ಆಕ್ರಮಿಸಿ ಅದಿರು ಕಳ್ಳಸಾಗಾಣಿಕೆ ಮಾಡಿದ ಆರೋಪ ಎದುರಿಸುತ್ತಿರುವ ಕಂದಾಯ ಮಂತ್ರಿ ಕರುಣಾಕರ ರೆಡ್ಡಿಯನ್ನೋ? ಅಥವಾ ಶೋಭಾ, ಕಟ್ಟಾ, ಬೊಮ್ಮಾಯಿ, ಉದಾಸಿ, ಹಾಲಪ್ಪ, ಕೃಷ್ಣಯ್ಯ ಶೆಟ್ಟಿಯಂಥ ಸೋಕಾಲ್ಡ್ ನಾಲಾಯಕ್ಕುಗಳನ್ನೋ?



ಹೀಗೊಂದು ಪ್ರಶ್ನೆ ಹಾಕಿಕೊಂಡರೆ ಶ್ರೀರಾಮುಲು, ಜನಾರ್ದನರೆಡ್ಡಿ ಮತ್ತು ಕರುಣಾಕರ ವಿರುದ್ಧ ಅರಣ್ಯ ಭೂಮಿ, ಕೆರೆ ಜಮೀನು ಕಬಳಿಕೆಯ ಆರೋಪವಿದೆ ನಿಜ. ಕೃಷ್ಣಯ್ಯ ಶೆಟ್ಟಿ ಕೂಡ ಸರ್ಕಾರಿ ಭೂಮಿ ಕಬಳಿಸಿದ್ದಾನೆ. ತನಿಖೆಯಾದರೆ ಮಾಲೂರಿನ ಬಜೆಪಿ ಕಾರ್ಯಕರ್ತೆಯೊಬ್ಬಳ ಕೊಲೆ ಕೇಸಿನಲ್ಲಿ ಇವತ್ತಲ್ಲಾ ನಾಳೆ ಕೃಷ್ಣಯ್ಯ ಶೆಟ್ಟಿಯ ತಮ್ಮನೇ ಜೈಲು ಪಾಲಾಗುತ್ತಾನೆ. ಕರಂದ್ಲಾಜೆಗೆ ಯಡ್ಡಿಯ ಶ್ರೀರಕ್ಷೆ ಬಿಟ್ಟರೆ ಪಂಚಾಯ್ತಿ ಮೆಂಬರ್ ಕೂಡ ಆಗುವ ಯೋಗ್ಯತೆಯಿಲ್ಲ ಎಂಬುದೂ ಅಷ್ಟೇ ಸತ್ಯ.



ಹಾಗಂತ ಬಸವರಾಜ ಬೊಮ್ಮಾಯಿ, ಉದಾಸಿ, ಹರತಾಳು ಹಾಲಪ್ಪನಂಥವರನ್ನು ಯಾವ ಕಾರಣಕ್ಕೆ ಮಂತ್ರಿಗಿರಿಯಿಂದ ಕಿತ್ತು ಹಾಕಬೇಕು? ಬಳ್ಳಾರಿಯ ಗಣಿ ರೆಡ್ಡಿಗಳೆಸಗಿದ ಪಾಪದ ಮುಂದೆ ಇವರದು ಯಾವ ಲೆಕ್ಕ? ಜೈಲಲ್ಲಿರಬೇಕಾದ ಬಳ್ಳಾರಿ ಆದಕ್ಕೆ ಬೇಕಾದ ಪೂರ್ವಸಿದ್ಧತೆ, ನೀಲಿನಕ್ಷೆ ಯಾವುದೂ ಇಲ್ಲ. ತನ್ನ ತಮ್ಮನೇ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿರುವಾಗ ಮುಖ್ಯಮಂತ್ರಿಯ ವಿರುದ್ಧ ಕಿಡಿಕಾರುವುದರಲ್ಲಿ ಯಾವುದೇ ಅರ್ಥ ಕಾಣಿಸುತ್ತಿಲ್ಲ. ವಿಕಟವೆಂದರೆ ಬಳ್ಳಾರಿ ಅಭಿವೃದ್ಧಿಯ ಕುರಿತಂತೆ ಮುಖ್ಯಮಂತ್ರಿ ವಿರುದ್ಧ ಕಿಡಿಕಾರುವ ರೆಡ್ಡಿ ಗ್ಯಾಂಗ್ ಜೂನ್ 9 ರ ಮಂಗಳವಾರದ ಜಿಲ್ಲಾಧಿಕಾರಿಗಳು ಮತ್ತು ವಿಭಾಗಾಧಿಕಾರಿಗಳ ಸಭೆಯತ್ತ ತಲೆ ಕೂಡ ಹಾಕಿಲ್ಲ.



ಇದರರ್ಥ ರೆಡ್ಡಿಗಳ ಕ್ಯಾತೆಗೆ ಬಳ್ಳಾರಿಯ ಅಭಿವೃದ್ಧಿಯಾಗಲಿ ಅರ್ಧ ಡಜನ್ ಮಂತ್ರಿಗಳ ಅಯೋಗ್ಯತೆಯಾಗಲಿ ಕಾರಣವಲ್ಲ. ಅರುಣ್ ಜೇಟ್ಲಿ ಪಂಚಾಯ್ತಿ ನಡೆಸಿ ಯಡ್ಡಿಗೂ ರೆಡ್ಡಿಗಳಿಗೂ ರಾಜಿ ಮಾಡಿಸಿ, ಅವರ ಜಂಟಿ ಸರ್ವೆಯೇನಾದರೂ ನಡೆದುಬಿಟ್ಟರೆ ಇಡೀ ರೆಡ್ಡಿ ಗ್ಯಾಂಗ್ ಜೀವನ ಪರ್ಯಂತ ಕಂಬಿ ಎಣಿಸಬೇಕಾಗುತ್ತದೆ. ಸಹಸ್ರಾರು ಕೋಟಿಯ ಅದಿರು ಲೂಟಿ ಬಯಲಾಗಿ ತಿಂದಿದ್ದನ್ನೆಲ್ಲ ಕಕ್ಕಬೇಕಾಗುತ್ತದೆ ಎಂಬ ಭೀತಿಯಲ್ಲಿ ಬ್ಲಾಕ್‌ಮೇಲ್‌ಗಿಳಿದ ರೆಡ್ಡಿಗಳಿಗೆ ಯಡ್ಡಿ ಕೊಟ್ಟ ದೊಡ್ಡ ಪೆಟ್ಟೆಂದರೆ; ರೆಡ್ಡಿಗಳೇ ಬೇನಾಮಿಯಾಗಿ ನಡೆಸುತ್ತಿದ್ದ ಕಳ್ಳ ಗಣಿಗಳನ್ನು ಮುಚ್ಚಿಸಿದ್ದು. ಮತ್ತು ಆಂಧ್ರದ ಕೆಲ ಬೇನಾಮಿಗಳ ಹೆಸರಲ್ಲಿ ಕರ್ನಾಟಕದ ಅರಣ್ಯಭೂಮಿ ಆಕ್ರಮಿಸಿ ಪ್ರಾರಂಭಿಸಬೇಕಿದ್ದ ಹೊಸ ಗಣಿಗಳಿಗೆ ಈತನಕ ಮಂಜೂರಾತಿ ಆದೇಶ ನೀಡದಿರುವುದು!

ನಿಂತು ಹೋದ ಹದಿನಾರು ಗಣಿಗಳ ಪೈಕಿ ಒಂಭತ್ತು ಗಣಿಗಳ ರೈಸಿಂಗ್ ಕಾಂಟ್ರಾಕ್ಟ್ ರೆಡ್ಡಿಗಳ ಕೈಯಲ್ಲಿತ್ತು. ಈಗ ಶುರು ಹಚ್ಚಿಕೊಳ್ಳಬೇಕಿದ್ದ ಹನ್ನೆರಡು ಕಳ್ಳ ಗಣಿಗಳೆಲ್ಲವೂ ರೆಡ್ಡಿಗಳೇ ಬೇನಾಮಿಯಾಗಿ ಕೈಹಾಕಿದ್ದ ದಂಧೆಗಳೆ. ಇದಲ್ಲದೇ ಶ್ರೀರಾಮುಲು ಮೇಲಿದ್ದ ಕೆಲ ಕ್ರಿಮಿನಲ್ ಕೇಸುಗಳನ್ನು ಸರ್ಕಾರವೇ ವಾಪಸ್ಸು ಪಡೆಯಬೇಕೆಂಬುದೂ ರೆಡ್ಡಿಗಳ ಮತ್ತೊಂದು ಡಿಮ್ಯಾಂಡು. ಈ ಪೈಕಿ ಯಾವುದನ್ನೇ ಮಾಡಹೊರಟರೂ ಅದಕ್ಕೆ ಯಡ್ಡಿಯೇ ತಲೆಕೊಡಬೇಕಾಗುತ್ತದೆ. ನುಂಗುವಂತಿಲ್ಲ ಉಗುಳುವುದೂ ಸಾಧ್ಯವಿಲ್ಲದಂಥ ಉಭಯಸಂಕಟಕ್ಕೆ ಬಿದ್ದ ಯಡ್ಡಿಯ ಪಾಡು ಯಾರಿಗೂ ಬೇಡ.

ಇದು ರೆಡ್ಡಿಗಳ ಅಸಲೀ ಹುನ್ನಾರ. ಲೋಕಸಭಾ ಚುನಾವಣೆ ಮುಗಿದದ್ದೇ ಈಶ್ವರಪ್ಪ ಕೊಳ್ಳಿ ಇಟ್ಟದ್ದನ್ನೇ ಕಾದು ಹಾವಳಿಗಿಳಿದ ರೆಡ್ಡಿಗಳ ಷಡ್ಯಂತ್ರ ಪಕ್ಕಾ ಬಜೆಪಿ ನಿಷ್ಠ ರೇಣುಕಾಚಾರ್ಯ, ಗೋಪಾಲಕೃಷ್ಣ, ಸವದಿ, ಬಗಲಿಯಂಥವರಿಗೆ ಗೊತ್ತಿಲ್ಲವೆಂದಲ್ಲ. ಯಡ್ಡಿ ವಿರುದ್ಧದ ತನ್ನ ದಾಳಿಯನ್ನು ರೆಡ್ಡಿಗಳು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತಿರುವುದು ಸ್ವತಃ ಈಶ್ವರಪ್ಪನವರಿಗೆ ಅರಿವಿಲ್ಲವೆಂದೇನಲ್ಲ.

ಗೊತ್ತಿದೆ. ಗೊತ್ತಿದ್ದೂ ಈಶ್ವರಪ್ಪ ಪದೇಪದೇ

▶▶▶12

ಗಣಿ ಕಳ್ಳರ ಜೊತೆ ಕೊನೆತನಕ ನಿಲ್ಲುವವರ್‍ಯಾರು?

ಗಣಿ ರೆಡ್ಡಿಗಳ ಬೆನ್ನಿಗಿರುವ ಎಮ್ಮೆಲ್ಲೆಗಳ ಸಂಖ್ಯೆ ಎರಡು ಡಜನ್ ಎಂದು ಯಾರೆಷ್ಟೇ ಬೊಬ್ಬೆಯಿಟ್ಟರೂ ವಾಸ್ತವವೇ ಬೇರೆಯಿದೆ. ಸದ್ಯದ ಮಟ್ಟಿಗೆ ಬಳ್ಳಾರಿಯ ಸೋಮಶೇಖರ ರೆಡ್ಡಿ, ಸಿರಗುಪ್ಪಿಯ ಸೋಮಲಿಂಗಪ್ಪ ಕಂಪ್ಲಿಯ ಸುರೇಶ್ ಬಾಬು, ಕೂಡ್ಲಿಗಿಯ ನಾಗೇಂದ್ರ, ಹೂವಿನಹಡಗಲಿಯ ಚಂದ್ರನಾಯ್ಕ, ಹೊಸಪೇಟೆಯ ಆನಂದ್‌ಸಿಂಗ್, ಹಗರಿಬೊಮ್ಮನಹಳ್ಳಿಯ ನೇಮಿರಾಜನಾಯ್ಕ, ಹರಪನಹಳ್ಳಿಯ ಕರುಣಾಕರರೆಡ್ಡಿ ಮತ್ತು ಬಳ್ಳಾರಿ ಗ್ರಾಮೀಣದ ಶ್ರೀರಾಮುಲು ಬಿಟ್ಟರೆ ಕೊನೆ ತನಕ ರೆಡ್ಡಿಗಳ ಜೊತೆ ನಿಲ್ಲಬಲ್ಲ ಮತ್ತೊಬ್ಬ ಶಾಸಕನಿಲ್ಲ.

ಇವರೆಲ್ಲರೂ ಗಣಿ ಧಣಿಗಳೆ. ಮುಚ್ಚಿದ ಕಳ್ಳಗಣಿಗಳಿಗೂ ಇವರ ಬ್ಲಾಕ್‌ಮೇಲ್ ರಾಜಕಾರಣಕ್ಕೂ ಸಂಬಂಧವಿದೆ. ಇವರ ಹೊರತಾಗಿ ದೇವದುರ್ಗದ ಶಿವನಗೌಡ ನಾಯಕ, ಅರಬಾವಿಯ ಬಾಲಚಂದ್ರ ಜಾರಕಿಹೊಳಿ, ಸುರಪುರದ ರಾಜೂಗೌಡ, ಶಿವರಾಜ ತಂಗಡಗಿ ಇತ್ಯಾದಿಗಳೆಲ್ಲ ತಮ್ಮ ಸ್ವಾರ್ಥಕ್ಕಾಗಿ ರೆಡ್ಡಿಗಳನ್ನು ಬಳಸಿಕೊಳ್ಳುತ್ತಿದ್ದಾರೆಯೇ ಹೊರತು ಶಾಶ್ವತವಾಗಿ ರೆಡ್ಡಿಗಳ ಜೊತೆ ನಿಲ್ಲುವುದಿಲ್ಲ. ಇನ್ನು ರೇಣುಕಾಚಾರ್ಯನಿಗೆ 'ಹೊಗದಸ್ತು' ನಿಗಮವೋ ಮಂಡಳಿಯೋ ಸಿಕ್ಕಿಬಿಟ್ಟರೆ ನಾಳೆಯೇ ಉಲ್ಟಾ ಹೊಡೆಯುತ್ತಾನೆ. ಬೇಳೂರು ಗೋಪಾಲಕೃಷ್ಣನದ್ದೂ ಇಂಥದ್ದೇ ಸ್ವಾರ್ಥ ಸಾಧಕ ಕುಟಿಲೋಪಾಯವೇ ಹೊರತು ರೆಡ್ಡಿಗಳಿಗಾತ ಋಣಿಯೇನಲ್ಲ.

ಗೂಳಿಹಟ್ಟಿ ಶೇಖರ್, ಸುಧಾಕರ್, ವರ್ತೂರು ಪ್ರಕಾಶ್ ಥರದ ಪಕ್ಷೇತರರದೂ ತಾತ್ಕಾಲಿಕ ಲಾಭತಂತ್ರವೇ ಹೊರತು ಶಾಶ್ವತ ದುಷ್ಮನಿಯಲ್ಲ. ಪ್ರತಿಯೊಬ್ಬರಿಗೂ ಅವರವರದೇ ಆದ ಸ್ವಾರ್ಥವಿದೆ. ಈಶ್ವರಪ್ಪನವರಿಗೆ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಿಕ್ಕಿಬಿಟ್ಟರೆ ದುಷ್ಮನಿ ಮುಗಿದುಬಿಡುತ್ತದೆ. ಹೇಗೆ ಯಡ್ಡಿಗೆ ತನ್ನ ಜಾತಿ ಬಂಧುಗಳೇ ಅಧಿಕಾರದ ಸುಪ್ಪತ್ತಿಗೆಯಲ್ಲಿರಬೇಕೆಂಬ ಸ್ವಾರ್ಥವಿದೆಯೋ ಹಾಗೇ ಪ್ರತಿಯೊಬ್ಬರಿಗೂ ತಮ್ಮದೇ ಡೀಲಿಂಗ್, ದಂಧೆ ಮತ್ತು ಅಧಿಕಾರದ ಉದ್ದೇಶವಿದೆ.

ಪರಸ್ಪರ ವಿರುದ್ಧ ಗುಣದ, ಸಮಯಸಾಧಕತನದ, ಕಬಳಿಕೆಯೇ ಉದ್ದೇಶವಾಗಿರುವ ಇಂಥವರನ್ನು ಪಕ್ಷದ ತತ್ವಸಿದ್ಧಾಂತ ಹೆಸರಲ್ಲಿ ಕಟ್ಟಿ ಹಾಕಲು ಯತ್ನಿಸುತ್ತಿರುವ ಆರೆಸ್ಸೆಸ್ ಎಷ್ಟೇ ತೇಪೆ ಹಾಕಿದರೂ ಏನು ಪ್ರಯೋಜನ? ಅಧಿಕಾರಕ್ಕಾಗಿ ಹಿಡಿದ ಅಡ್ಡದಾರಿ ದುರಂತಕ್ಕಲ್ಲದೇ ಮತ್ತೆಲ್ಲಿಗೆ ತಲುಪಿಸಲು ಸಾಧ್ಯ?








ಕಡೆಗಾಲದಲ್ಲೂ ಯಾಕೀ ದುರಾಸೆ?

…ಜ್ಯದ ಒಕ್ಕಲಿಗ ಸಮುದಾಯದ ಏಕೈಕ …ತವಾಗಿರುವ ಆದಿಚುಂಚನಗಿರಿ …ಸಂಸ್ಥಾನದ ಪೀಠಾಧ್ಯಕ್ಷ ಬಾಲಗಂಗಾಧರರಿಗೆ …ಾಲದಲ್ಲಿ ಯಾಕಿಷ್ಟು ದುರಾಸೆ ಎಂಬ ಪ್ರಶ್ನೆ … ಜನರನ್ನು ಕಾಡತೊಡಗಿದೆ. ಇವತ್ತೋ, …ೋ ಅನ್ನುತ್ತಿರುವ ಅವರು ದೇವರು, …ಗಳ ಸೇವೆ ಮಾಡುತ್ತಾ ಒಕ್ಕಲಿಗ ಸಮಾಜವನ್ನು …ರ ಮಾಡುವುದನ್ನು ಬಿಟ್ಟು ರಿಯಲ್ ಎಸ್ಟೇಟ್ …ಗೆ ಯಾಕೆ ಇಳಿಯುತ್ತಿದ್ದಾರೆ ಎಂದು ಹಲವರು …ಗ ವ್ಯಕ್ತಪಡಿಸುತ್ತಿದ್ದಾರೆ. ಅದರಲ್ಲೂ …ೂರಿನ ಹೊರವಲಯದಲ್ಲಿ ಕೆಂಗೇರಿ …ರುವ ಕಂಬೀಪುರದ ಬಡ ರೈತರಂತೂ ತಮ್ಮ …ಕ್ಕೆ ಏಕೈಕ ಆಸರೆಯಾಗಿರುವ ತುಂಡು …ನುಗಳನ್ನು ಕಿತ್ತುಕೊಳ್ಳುವ ಮೂಲಕ ತಮ್ಮ … ಮೇಲೆ ಹೊಡೆಯುತ್ತಿರುವ ಬಾಲಗಂಗಾಧರರ ವಿರುದ್ಧ ತುಸು ಜಾಸ್ತಿಯೇ ಅಸಮಾಧಾನಗೊಂಡಿದ್ದಾರೆ. ಇತ್ತ ಮಹಾಸ್ವಾಮಿಗಳನ್ನು ಎದುರು ಹಾಕಿಕೊಳ್ಳದೇ, ಅತ್ತ ತಮ್ಮ ಜಮೀನುಗಳನ್ನು ಕಳೆದುಕೊಂಡು ಬೀದಿಪಾಲಾಗಲೂ ಸಿದ್ಧವಿಲ್ಲದೇ ಒಂದು ರೀತಿಯ ಸಂಕಟಕ್ಕೆ ಒಳಗಾಗಿದ್ದಾರೆ.

ಏನಿದು ರಿಯಲ್ ಎಸ್ಟೇಟ್ ಬಿಸಿನೆಸ್ಸು?

ಬೆಂಗಳೂರಿನ ದಕ್ಷಿಣದಲ್ಲಿ ಕೆಂಗೇರಿ-ಕುಂಬಳಗೋಡುಗಳ ಬಳಿ ಮೈಸೂರು ರಸ್ತೆಗೆ ಹೊಂದಿಕೊಂಡಂತೆ ಕಂಬೀಪುರ ಎಂಬ ಗ್ರಾಮವೊಂದಿದೆ. ಬಹುತೇಕ ಬಡರೈತರು, ಕೂಲಿ ಕಾರ್ಮಿಕರೇ ಹೆಚ್ಚಾಗಿರುವ ಈ ಊರಿನಲ್ಲಿ ಇಂದಿಗೂ ಜನ ಭೂಮಿ ಉಳುಮೆ ಮಾಡಿಕೊಂಡೇ ಜೀವನ ಸಾಗಿಸುತ್ತಿದ್ದಾರೆ. ಹೆಚ್ಚೂಕಡಿಮೆ ಕಳೆದ ಒಂದು ನೂರು ವರ್ಷಗಳಿಂದ ಈ ಜನ ಇಲ್ಲೇ ವಾಸವಾಗಿದ್ದಾರೆ.


ಈ ಊರಿನ ಸರ್ವೇ ನಂಬರ್ 43ರಲ್ಲಿ ಸುಮಾರು 232 ಎಕರೆಯಷ್ಟು ಗೋಮಾಳವಿತ್ತು. ಇದೇ ಊರಿನಲ್ಲಿ ಬಹಳಷ್ಟು ಕೃಷಿ ಕಾರ್ಮಿಕರಿಗೆ ತುಂಡು ಭೂಮಿಯೇ ಇಲ್ಲದಿದ್ದುದರಿಂದ ಅಂದಿನ ಮೈಸೂರು ಸರ್ಕಾರ 1959ನೇ ಸಾಲಿನಲ್ಲಿ ಈ ಗೋಮಾಳದ ಸುಮಾರು 105 ಎಕರೆಯಷ್ಟು ಜಮೀನನ್ನು ಭೂಹೀನ ಕೃಷಿ ಕಾರ್ಮಿಕರಿಗೆ, ದಲಿತರಿಗೆ, ಮುಸ್ಲಿಮರಿಗೆ ಹಂಚಿಕೆ ಮಾಡಿತ್ತು. ಅಲ್ಲದೇ ನಂತರದ ದಿನಗಳಲ್ಲೂ ಕೂಡ ಭೂಹೀನ ಕೃಷಿ ಕಾರ್ಮಿಕರನ್ನು ಹುಡುಕಿ ಅವರಿಗೊಂದು ಜೀವನ ಕಲ್ಪಿಸುವ ದೃಷ್ಟಿಯಿಂದ ಉಳಿದ ಭೂಮಿಯನ್ನೂ ಹಂಚಿಕೆ ಮಾಡುತ್ತಲೇ ಬಂದಿದೆ. ಜೊತೆಗೆ ತೀರಾ ಇತ್ತೀಚೆಗೆ, ಅಂದರೆ 2005ನೇ ಇಸ್ವಿಯಲ್ಲೂ ಮುಸ್ಲಿಮರ ಮಸೀದಿ ನಿರ್ಮಾಣಕ್ಕೆ ಮೂರು ಎಕರೆ, ಮುಸ್ಲಿಮರ ಸ್ಮಶಾನಕ್ಕೆ ನಾಲ್ಕು ಎಕರೆ ಹಾಗೂ ಇಬ್ಬರು ದಲಿತರಿಗೆ ತಲಾ ಎರಡೆರಡು ಎಕರೆ ಹಂಚಿಕೆ ಮಾಡಿತ್ತು. ಇವರೆಲ್ಲರ ಬಳಿ ಸರ್ಕಾರ ಭೂಮಿ ಕೊಟ್ಟಿರುವುದರ ಬಗ್ಗೆ ಅದಕ್ಕೆ ತಾವೇ ಮಾಲಿಕರಾಗಿರುವುದರ ಬಗ್ಗೆ ಪಕ್ಕಾ ದಾಖಲಾತಿಗಳಿವೆ.



ಮೊದಲೆಲ್ಲಾ ಈ ಭೂಮಿಯ ಮೇಲೆ ಯಾವ ಸ್ವಾಮಿಗಾಗಲೀ, ಮಾತೆಗಾಗಲೀ, ರಿಯಲ್ ಎಸ್ಟೇಟ್ ದಂಧೆಕೋರರಿಗಾಗಲೀ ಕಣ್ಣು ಬಿದ್ದಿರಲಿಲ್ಲ. ಆಗಿನ ಕಾಲದಲ್ಲಿ ಬೆಂಗಳೂರಿನಿಂದ ತೀರಾ ದೂರದಲ್ಲಿರುವ ಈ ಜಮೀನು ಅವರಿಗೆಲ್ಲಾ ನಿರುಪಯುಕ್ತ ಜಾಗವಾಗಿತ್ತು. ಆದರೆ, ಭೂಮಿಯನ್ನೇ ನೆಚ್ಚಿಕೊಂಡು ಬದುಕು ನಡೆಸುತ್ತಿದ್ದ ಬಡ ರೈತರಿಗೆ ಅದೇ ಭೂಮಿ ಕಾಮಧೇನುವಾಗಿತ್ತು, ಅದೇ ಅವರ ಜೀವನಾಧಾರವಾಗಿತ್ತು. ಯಾವಾಗ ಬೆಂಗಳೂರು ಹಿಂದೆಂದೂ ಕಂಡುಕೇಳರಿಯದಂತೆ ವಿಸ್ತಾರವಾಗಿ ಬೆಳೆಯಲಾರಂಭಿಸಿತೋ ದೂರದಲ್ಲಿದ್ದ ಕಂಬೀಪುರ ಗ್ರಾಮ ಬೆಂಗಳೂರಿನ ಒಳಭಾಗಕ್ಕೆ ಬರಲಾರಂಭಿಸಿತು. ಇಲ್ಲಿನ ಭೂಮಿಗೆ ಚಿನ್ನದ ಬೆಲೆ ಬಂದುಬಿಟ್ಟಿತು. ಆಗ ಸಹಜವಾಗಿ ಮಾತೆಯರ, ಸ್ವಾಮಿಗಳ, ರಿಯಲ್ ಎಸ್ಟೇಟ್ ಕುಳಗಳ ಕಣ್ಣು ಈ ಭೂಮಿಯ ಮೇಲೆ ಬಿತ್ತು.

ಹೀಗೆ ಕಣ್ಣು ಹಾಕಿದ ಸ್ವಾಮಿಗಳಲ್ಲಿ ಪ್ರಮುಖರೆಂದರೆ ಕ್ಯಾತೆ ಮಹಾದೇವಿ, ಕ್ಷಮಿಸಿ ಮಾತೇ ಮಹಾದೇವಿ ಹಾಗೂ ಆದಿಚುಂಚನಗಿರಿ ಮಠಾಧೀಶ ಬಾಲಗಂಗಾಧರನಾಥ ಸ್ವಾಮಿಗಳು. ಅದರಲ್ಲೂ ಬಾಲಗಂಗಾಧರನಾಥ ಸ್ವಾಮಿ ಕಿಂಚಿತ್ತೂ ತಡ ಮಾಡದೆ 2003ರಲ್ಲಿ ಅಂದಿನ ಎಸ್ಸೆಂ ಕೃಷ್ಣ ಸರ್ಕಾರಕ್ಕೆ ಪತ್ರವೊಂದನ್ನು ಬರೆದು ತಾವು ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ವತಿಯಿಂದ ಕಂಬೀಪುರ ಗ್ರಾಮದಲ್ಲಿ ಒಂದು ಗೋಶಾಲೆಯನ್ನು ಸ್ಥಾಪಿಸಲು ಇಚ್ಛಿಸಿರುವುದಾಗಿಯೂ ಅದಕ್ಕಾಗಿ 150 ಎಕರೆ ಜಮೀನನ್ನು ಮಂಜೂರು ಮಾಡಬೇಕಾಗಿಯೂ ಕೋರಿಕೊಂಡಿದ್ದರು. ಅದಾದ ಮೇಲೆ 2005ರಲ್ಲಿ ಬೆಂಗಳೂರು ಜಿಲ್ಲಾಧಿಕಾರಿಗಳು ಸರ್ಕಾರದ ನಿರ್ದೇಶನದಂತೆ ಕರ್ನಾಟಕ ಭೂಮಂಜೂರಾತಿ 1969ರ ನಿಯಮ 19ರಂತೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಂಬೀಪುರ ಗ್ರಾಮದ ಸರ್ವೇ ನಂಬರ್ 43ರಲ್ಲಿ 45 ಎಕರೆ ಜಮೀನನ್ನು ಗೋಶಾಲೆ ತೆರೆಯುವುದಕ್ಕಾಗಿ ಗುತ್ತಿಗೆ ಆಧಾರದ ಮೇಲೆ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ಗೆ ಮಂಜೂರು ಮಾಡಲಾಯಿತು. ಆದರೆ, 43ನೇ ಸರ್ವೇ ನಂಬರ್‌ನಲ್ಲಿ ನೂರಾರು ಎಕರೆ ಜಮೀನಿರುವುದರಿಂದ ನಿರ್ದಿಷ್ಟವಾಗಿ ಇದೇ 45 ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ ಎಂಬುದನ್ನು ಗುರುತಿಸಿರಲಿಲ್ಲ. ಅಲ್ಲದೇ, ಈ ನಿರ್ದಿಷ್ಟ ಜಾಗದಲ್ಲಿ ಈಗಾಗಲೇ ದೇವಸ್ಥಾನ, ಮಸೀದಿಗಳಂಥ ಸಾರ್ವಜನಿಕ ಸ್ಥಳಗಳಿದ್ದರೆ ಅದನ್ನು ತೆಗೆದುಕೊಳ್ಳಬಾರದು ಎಂಬ ಷರತ್ತು ಕೂಡ ಇದೆ.

▶▶▶12



…ದ ಒಕ್ಕಲಿಗ ಸಮುದಾಯದ …ಬೃಹನ್ಮಠವಾಗಿರುವ …ಚುಂಚನಗಿರಿ ಮಹಾಸಂಸ್ಥಾನದ …ಧ್ಯಕ್ಷ ಬಾಲಗಂಗಾಧರರಿಗೆ ಕಡೆ …ದಲ್ಲಿ ಯಾಕಿಷ್ಟು ದುರಾಸೆ ಎಂಬ … ಬಹಳ ಜನರನ್ನು ಕಾಡತೊಡಗಿದೆ. …ಶಾಲೆ ನಿರ್ಮಿಸುವ ನೆಪದಲ್ಲಿ ಕೋಟಿ …ಟಿ ಬೆಲೆಬಾಳುವ ಭೂಮಿಯನ್ನು … ಹಾಕುವುದು ಅವರ ನಿಜವಾದ …ೇಶ. ಈ ಹುನ್ನಾರದಲ್ಲಿ ರಾಜ್ಯ …ರವೂ ಭಾಗಿಯಾಗಿರುವುದು …ಮೇಲ್ನೋಟಕ್ಕೆ ಎದ್ದುಕಾಣುತ್ತದೆ. …ರೈತರ ಹೊಟ್ಟೆ ಮೇಲೆ …ಹೊಡೆದಾದರೂ ಸರಿ ತಮ್ಮ …ನನ್ನು ಈಡೇರಿಸಿಕೊಳ್ಳುವ … ಬಾಲಗಂಗಾಧರನಾಥ … ಬಿದ್ದಿದ್ದಾರೆ.

…ಕ್ಯಾತೆ ಮಹಾದೇವಿಯೂ ಕೈಯಿಟ್ಟಿದ್ದಳು!



…ಕಂಬೀಪುರ ಗ್ರಾಮದ ಬಡ ರೈತರ …ದುರದೃಷ್ಟವೋ ಏನೋ ಒಬ್ಬರಾದ ಮೇಲೆ …ಕಾವಿಧಾರಿಗಳು ಅಮರಿಕೊಳ್ಳುತ್ತಿದ್ದಾರೆ. ಸರಿಯಾಗಿ ಒಂದು ವರ್ಷದ ಹಿಂದೆ ಇದೇ …ಜಮೀನಿಗೆ ಕ್ಯಾತೆ ಮಹಾದೇವಿಯೆಂಬ ಕ್ಯಾತೆ …ಮಹಾದೇವಿಯೂ ಕೈಯಿಟ್ಟಿದ್ದಳು. 'ಲಂಕೇಶ್' …ೇ ಆಕೆಯ ಜನ್ಮ ಜಾಲಾಡಿದ ಮೇಲೆ, …ಕಂಬೀಪುರದ ಜನರೂ ಆಕೆಯ ವಿರುದ್ಧ ಬಡಿಗೆ …ಹಿಡಿದು ನಿಂತಿದ್ದೇ ತಡ ಕೆಟ್ಟೆನೋ ಸತ್ತೆನೋ …ಎಂದು ಅಲ್ಲಿಂದ ಕಾಲ್ಕಿತ್ತಿದ್ದಳು.

…ಕುಂಬಳಗೋಡಿನ ರಾಜರಾಜೇಶ್ವರಿ ಡೆಂಟಲ್ …ಕಾಲೇಜಿನ ಎದುರು ಈ ಮಹಾತಾಯಿಯ …ಆಶ್ರಮದ 32 ಎಕರೆ ಜಮೀನಿದೆ. …ಅಶೋಕ್ ಕುಮಾರ್‌ಗೆ …ಈ ಜಾಗವನ್ನು ಆಕೆ 1978ರಲ್ಲಿ ಕೇವಲ ಎರಡು ಲಕ್ಷಕ್ಕೆ ಕೊಂಡುಕೊಂಡಿದ್ದಳು. ಅಲ್ಲೊಂದು ಅನಾಥಾಶ್ರಮ ಕಟ್ಟುತ್ತೇನೆ, ಶಾಲೆ ತೆರೆಯುತ್ತೇನೆ ಅಂತ ಸೋಗೆರೆದು ಇಷ್ಟೊಂದು ಕಡಿಮೆ ದುಡ್ಡಿಗೆ ಅಷ್ಟೊಂದು ದೊಡ್ಡ ಜಮೀನನ್ನು ಗಿಟ್ಟಿಸಿಕೊಂಡಿದ್ದಳು. 1978ರಲ್ಲಿ ಆ ಜಮೀನು ಬೆಂಗಳೂರಿನಿಂದ ಹದಿನೈದು ಕಿ.ಮೀ. ದೂರದಲ್ಲಿತ್ತು, ಈಗದು ಬೆಂಗಳೂರಿನ ಒಳಭಾಗಕ್ಕೆ ಬಂದುಬಿಟ್ಟಿದೆ. ಎಕರೆಯೊಂದಕ್ಕೆ ಒಂದು ಕೋಟಿಯಷ್ಟು ಬೆಲೆ ಬಂದಿದೆ. ಹೀಗಾಗಿ, ಅನಾಥಾಶ್ರಮ, ಶಾಲೆ ಎಲ್ಲಾ ಬಿಟ್ಟು ಅಷ್ಟೂ ಜಾಗದಲ್ಲಿ ಲೇಔಟ್ ಮಾಡಿ ಒಂದೊಂದಕ್ಕೆ ಹತ್ತು ಲಕ್ಷ ರೂಪಾಯಿಗೆ ಮಾರಿಕೊಳ್ಳಲಾರಂಭಿಸಿದ್ದಳು.

ದುಡ್ಡಿನ ರುಚಿ ಹತ್ತುತ್ತಿದ್ದಂತೆಯೇ ಆಕೆಯ ಲೇಔಟಿಗೆ ಸಮೀಪದಲ್ಲೇ ಇರುವ ಕಂಬೀಪುರದ ಈ ಜಮೀನಿನ ಮೇಲೂ ಆಕೆಯ ಕಣ್ಣು ಬಿತ್ತು. ತಡಮಾಡದೇ ಚಿಕ್ಕದಾದ ನಾಲ್ಕು ಗೋಡೆಗಳನ್ನು ಎಬ್ಬಿಸಿ, ಮೇಲೊಂದು ಕಲ್ಲು ಹಾಕಿ, ಒಳಗೊಂದು ಬಸವಣ್ಣನ ವಿಗ್ರಹವನ್ನಿಟ್ಟು, ಥೇಟ್ ತನ್ನದೇ ಪ್ರತಿರೂಪದಂತಿರುವ ನಾಲ್ಕಾರು ಮಾತೆಯರನ್ನು ಮುಂದೆಬಿಟ್ಟು, ದಿನಾಲೂ ಭಜನೆ ಶುರುಹಚ್ಚಿಕೊಂಡಳು. ಬೆಳಗಾಗುವುದರಲ್ಲಿ ತಮ್ಮ ಜಮೀನಿನೊಳಗೆ ಹೀಗೊಂದು ಬಸವಣ್ಣನ ದೇಗುಲವೊಂದು ನಿರ್ಮಾಣಗೊಂಡಿದ್ದನ್ನು, ಮಾತೆಯರು ಭಜನೆ ಶುರುಹಚ್ಚಿಕೊಂಡಿದ್ದನ್ನು ನೋಡಿ ರೈತರು ಬೆರಗಾಗಿ ಹೋಗಿದ್ದರು. ಆಮೇಲೆ ಇಡೀ ಜಮೀನು ಮಾತೆ ಮಹಾದೇವಿಗೆ ಸೇರಬೇಕೆಂದು ಕ್ಯಾತೆ ಶುರುಹಚ್ಚಿಕೊಂಡರು. ಈ ವಿಚಾರ ಗೊತ್ತಾಗಿದ್ದೇ ತಡ 'ಲಂಕೇಶ್' ಕ್ಯಾತೆ ಮಹಾದೇವಿಯ ಜನ್ಮ ಜಾಲಾಡುತ್ತಾ ಸುದೀರ್ಘ ವರದಿಯೊಂದನ್ನು ಪ್ರಕಟಿಸಿತು. ಅದರ ಬೆನ್ನಲ್ಲೇ ಕಂಬೀಪುರದ ರೈತರೂ ಬಡಿಗೆ ಎತ್ತಿಕೊಂಡು ನಿಂತರು. ಅವತ್ತು ಮಾಯವಾದ ಮಾತೆ ಇಂದಿಗೂ ಕಂಬೀಪುರದಲ್ಲಿ ಪ್ರತ್ಯಕ್ಷವಾಗಿಲ್ಲ.


ಈಗ ಬಾಲಗಂಗಾಧರನಾಥ ಪ್ರತ್ಯಕ್ಷವಾಗಿದ್ದಾರೆ. ಅವರಿಗೂ ಕ್ಯಾತೆ ಮಹಾದೇವಿಗಾದ ಗತಿಯೇ ಆದರೂ ಆಶ್ಚರ್ಯವಿಲ್ಲ.

▶▶▶11

ವಾಸ್ತವದಲ್ಲಿ ಇದೇ ಜಮೀನಲ್ಲಿ ಎಂಟು ಎಕರೆ ಜಾಗವನ್ನು ತಮಗೆ ವರ್ಗಾಯಿಸಿಕೊಡುವಂತೆ ಜೈನ ಸಮುದಾಯದ ಶ್ರೀ ಕನಕ್‌ಮಲ್ ಜೈನ್ ಅವರು ಬಾಲಗಂಗಾಧರರಿಗಿಂತಲೂ ಮುಂಚೆಯೇ 1998ರಲ್ಲೇ ಅರ್ಜಿ ಹಾಕಿದ್ದರು. ವಾಸ್ತವದಲ್ಲಿ ಆ ಜಮೀನನ್ನು ಅವರು ಕೊಂಡುಕೊಂಡಿರುವುದರ ಬಗ್ಗೆ ದಾಖಲಾತಿಗಳನ್ನೂ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ್ದರು. ಬೆಂಗಳೂರು ವಿಶೇಷ ಜಿಲ್ಲಾಧಿಕಾರಿಗಳು ದಿನಾಂಕ 30.08.2002ರಲ್ಲಿ ಹಿಂಬರಹ ನೀಡಿ ಕಾನೂನಿನ ಪ್ರಕಾರ ಈ ಎಂಟು ಎಕರೆಯನ್ನು ಶ್ರೀ ಕನಕಮಲ್ ಜೈನ್ ಹೆಸರಿಗೆ ವರ್ಗಾಯಿಸುವಂತೆ ನಿರ್ದೇಶನ ನೀಡಿದ್ದರು. ಆದರೆ, ಅವರಿಗೆ ಆ ಜಮೀನನ್ನು ವರ್ಗಾಯಿಸುವ ಬದಲು ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ಗೆ ಈ ಎಂಟು ಎಕರೆ ಜಮೀನನ್ನೂ ಒಳಗೊಂಡಂತೆ ಒಟ್ಟು 45 ಎಕರೆಯನ್ನು ಮಂಜೂರು ಮಾಡಿದರು.

ಮೊಟ್ಟ ಮೊದಲನೆಯದಾಗಿ ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ಈ ಜಾಗದಲ್ಲಿ ಗೋಶಾಲೆ ಕಟ್ಟಬೇಕೆಂಬ ಬೇಡಿಕೆಯನ್ನು ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಮುಂದಿಟ್ಟಾಗಲೇ ಸರ್ಕಾರ ಅದನ್ನು ತಿರಸ್ಕರಿಸಬೇಕಿತ್ತು. ಬೆಂಗಳೂರಿನಂಥ ಐಟಿ-ಬಿಟಿ ಸಿಟಿಯಲ್ಲಿ ಗೋಶಾಲೆ ಕಟ್ಟುವ ಕಲ್ಪನೆಯೇ ಒಂದು ರೀತಿಯಲ್ಲಿ ಅತಾರ್ಕಿಕವಾದದ್ದು. ಯದ್ವಾತದ್ವಾ ಬೆಳೆದಿರುವ ಈ ಸಿಟಿಯಲ್ಲಿ ಎಷ್ಟು ಜನ ವ್ಯವಸಾಯ ಮಾಡುತ್ತಿದ್ದಾರೆ? ಎಷ್ಟು ಮನೆಯಲ್ಲಿ ಗೋವುಗಳಿವೆ? ವಾಸ್ತವದಲ್ಲಿ ಬಾಲಗಂಗಾಧರನಾಥ ಸ್ವಾಮಿಗೆ ಇಲ್ಲೊಂದು ಗೋಶಾಲೆ ನಿರ್ಮಿಸುವ ಇರಾದೆಯೇನೂ ಇಲ್ಲ, ಬೆಂಗಳೂರಿನಲ್ಲಿ ಗೋಶಾಲೆ ನಿರ್ಮಿಸುವಷ್ಟು ದಡ್ಡ ಸ್ವಾಮಿಯಲ್ಲ ಅವರು. ಅವರಿಗೆ ಸಾಯುವುದರೊಳಗೆ ಮಠಕ್ಕೆ ಭಾರಿ ದುಡ್ಡು ಮಾಡಿ ಹೋಗಬೇಕೆಂಬ ಮಹದಾಸೆ ಚಿಗುರೊಡೆದಿದೆ. ಇಲ್ಲಿನ ಜಮೀನು ಈಗ ಏನಿಲ್ಲವೆಂದರೂ ಎಕರೆಗೆ ಒಂದು ಕೋಟಿ ಬೆಲೆ ಬಾಳುತ್ತದೆ. ಗೋಶಾಲೆ ನಿರ್ಮಿಸುವ ನೆಪದಲ್ಲಿ ಕೋಟಿ ಕೋಟಿ ಬೆಲೆಬಾಳುವ ಈ ಭೂಮಿಯನ್ನು ನುಂಗಿ ಹಾಕುವುದು ಅವರ ನಿಜವಾದ ಉದ್ದೇಶ. ಈ ಹುನ್ನಾರದಲ್ಲಿ ರಾಜ್ಯ ಸರ್ಕಾರವೂ ಭಾಗಿಯಾಗಿರುವುದು ಮೇಲ್ನೋಟಕ್ಕೆ ಎದ್ದುಕಾಣುತ್ತದೆ.

ಬಡರೈತರ ಹೊಟ್ಟೆ ಮೇಲೆ ಹೊಡೆದಾದರೂ ಸರಿ ತಮ್ಮ ಆಸೆಯನ್ನು ಈಡೇರಿಸಿಕೊಳ್ಳುವ ಹಠಕ್ಕೆ ಬಾಲಗಂಗಾಧರನಾಥ ಸ್ವಾಮಿ ಬಿದ್ದಿದ್ದಾರೆ. ಸರ್ಕಾರ ಅವರಿಗೆ ಕೊಟ್ಟಿರುವ 45 ಎಕರೆ ಜಮೀನು ಸಾಕಾಗುತ್ತಿಲ್ಲ. ಆದ್ದರಿಂದಲೇ ಈಗ ಅಕ್ಕಪಕ್ಕದ ಬಡ ರೈತರ ಮೂವತ್ತೈದು ಎಕರೆ ಜಮೀನಿಗೂ ಕೈಯಿಟ್ಟಿದ್ದಾರೆ. ಸುಮಾರು ಐವತ್ತು ವರ್ಷಗಳಿಂದ



ರೈತರ ಪಹಣಿ ದಾಖಲೆ

ಉಳುಮೆ ಮಾಡಿಕೊಂಡು ಬಂದಿರುವ ನಾಗ ಮುನಿಯಮ್ಮ, ನಾರಾಯಣಪ್ಪ, ಮುನಿ ಆಳ್ವಪ್ಪ ದೊಡ್ಡಮ್ಮರಂಥ ಬಡ ರೈತರನ್ನು ಭೂಮಿಯಿಂದ ಓಡಿಸಲು ಪ್ರಾರಂಭಿಸಿದ್ದಾರೆ. ಇವರೆಲ್ಲರ ಬಳಿಯೂ ಜಮೀನಿಗೆ ತಾವೇ ಒಡೆಯರು ಎಂಬುವುದಕ್ಕೆ ಅಧಿಕೃತ ಪಕ್ಕಾ ದಾಖಲೆಗಳಿವೆ. ಆದರೂ ಅವರನ್ನು ಹೆದರಿಸಿ, ಬೆದರಿಸಿ ಓಡಿಸುತ್ತಿದ್ದಾರೆ. ಸ್ವಾಮೀಜಿಯ ಈ ಭೂಕಬಳಿಕೆಯ ದೌರ್ಜನ್ಯಕ್ಕೆ ತುತ್ತಾದವರಲ್ಲಿ ಮುನಿಯಮ್ಮ ಎಂಬ ಹೆಣ್ಣುಮಗಳು ಕೂಡ ಸೇರಿದ್ದಾಳೆ. 60 ವರ್ಷ ವಯಸ್ಸಿನ ಈ ಮಹಿಳೆ ಗಂಡನನ್ನು ಕಳೆದುಕೊಂಡ ವಿಧವೆ. ಆಕೆಗೆ ಸ್ವಂತ ಮಕ್ಕಳು ಕೂಡ ಇಲ್ಲ, ಆಕೆಯ ಜೀವನಕ್ಕೆ ಭದ್ರತೆ ಅಂತಾ ಇರೋದು ಕಂಬೀಪುರದಲ್ಲಿರುವ ಎರಡು ಎಕರೆ ಜಮೀನು ಮಾತ್ರ. ಅದನ್ನಾಕೆ ಕಳೆದ ನಲ್ವತ್ತು ವರ್ಷಗಳಿಂದ ಊಳುತ್ತಾ ಬಂದಿದ್ದಾಳೆ. ಈಗ ಆಕೆಯ ಹೊಟ್ಟೆಯ ಮೇಲೂ ಬಾಲಗಂಗಾಧರ ತಣ್ಣೀರು ಬಟ್ಟೆ ಹಾಕಲು ಹೊರಟಿದ್ದಾರೆ. ಸ್ವಾಮಿಗಳು ಎಂಥಾ ಕ್ರೂರಿಗಳಾಗಿದ್ದಾರೆಂಬುದಕ್ಕೆ ಇದೊಂದು ಉದಾಹರಣೆ ಮಾತ್ರ.

ನರಸಿಂಹಮೂರ್ತಿಯ ದರ್ಬಾರ್

ಬಾಲಗಂಗಾಧರನಾಥ ಸ್ವಾಮಿ ಅದೆಂಥ ತಂತ್ರ ರೂಪಿಸಿದ್ದಾರೆಂದರೆ, ಈ ರೈತರಿಂದ ಜಮೀನು ಕಿತ್ತುಕೊಳ್ಳುವ ಕೆಲಸವನ್ನು ತಾವೇ ಮುಂದೆ ನಿಂತು ಮಾಡುತ್ತಿಲ್ಲ, ತನ್ನ ನೆಚ್ಚಿನ ಭಂಟನಾಗಿರುವ ಹಾಗೂ ಗೂಂಡಾಗಿರಿಯ ಮೂಲಕ ಜನರನ್ನು ಹೆದರಿಸಿ ಬೆದರಿಸಿ ಜಮೀನು ಕಿತ್ತುಕೊಳ್ಳುವಲ್ಲಿ ನಿಸ್ಸೀಮನಾಗಿರುವ ನರಸಿಂಹಮೂರ್ತಿ ಎಂಬ ಕಿರಾತಕನನ್ನು ಬಿಟ್ಟಿದ್ದಾರೆ. ಈತ ಜಿಲ್ಲಾ ಪಂಚಾಯತ್ ಅಧ್ಯಕ್ಷೆಯಾಗಿರುವ ರತ್ನ ನರಸಿಂಹಮೂರ್ತಿಯ ಪತಿದೇವ. ಅವನಿಗೆ ಸರ್ಕಾರದ ಕಡೆಯಿಂದ, ಪೊಲೀಸರ ಕಡೆಯಿಂದ, ಜಿಲ್ಲಾಡಳಿತದ ಕಡೆಯಿಂದ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳುವ ಕೆಲಸವನ್ನು ಸ್ವಾಮೀಜಿಗಳು ಮಾಡುತ್ತಿದ್ದಾರೆ.

ಹೀಗೆ ಒಂದೆಡೆ ಸ್ವಾಮಿಯ ಆಶೀರ್ವಾದ, ಇನ್ನೊಂದೆಡೆ ಪತ್ನಿಯ ಅಧಿಕಾರ, ಮಗದೊಂದೆಡೆ ಪೊಲೀಸು-ಜಿಲ್ಲಾಧಿಕಾರಿಗಳ ಸಹಕಾರ ಇದ್ದ ಮೇಲೆ ನರಸಿಂಹಮೂರ್ತಿಯಂಥ ಕಿರಾತಕ ರೈತರನ್ನು ಅವರ ಭೂಮಿಯಿಂದ ಓಡಿಸುವುದಕ್ಕೆ ಎಂಥಾ ಹೀನ ದೌರ್ಜನ್ಯಕ್ಕಿಳಿಯಬಹುದೆಂದು ಯಾರು ಬೇಕಾದರೂ ಅಂದಾಜಿಸಬಹುದು. ಈತ ರೈತರ ಮನೆಮನೆಗೆ ಹೋಗಿ "ಸುಮ್ಮನೇ ಸ್ವಾಮೀಜಿಯನ್ನು ಏಕೆ ಎದುರುಹಾಕಿಕೊಳ್ಳುತ್ತೀರಿ? ನಿಮಗೆ ಸೈಟು ಕೊಡುತ್ತೇವೆ. ನೀವಾಗಿಯೇ ನಿಮ್ಮ ಜಮೀನು, ಮನೆಗಳನ್ನು ಬಿಟ್ಟುಕೊಟ್ಟು ಹೊರಟುಹೋಗಿ" ಎಂದು ಕೆಲವರಿಗೆ ಆಸೆ ತೋರಿಸುತ್ತಿದ್ದರೆ, ಇವನ ಮಾತಿಗೆ ಮರುಳಾಗದವರನ್ನು "ನಿಮ್ಮ ಮೇಲೆ ಕೇಸು ದಾಖಲಿಸಿದ್ದೇವೆ, ನಾನ್‌ಬೆಲಬಲ್‌ವಾರೆಂಟ್ ಇಶ್ಯೂ ಆಗಿದೆ. ಹೆಚ್ಚುಕಡಿಮೆ ಮಾತನಾಡಿದರೆ ಜೀವನಪರ್ಯಂತ ಜೈಲಿನಲ್ಲಿ ಕೊಳೆಯಬೇಕಾಗುತ್ತದೆ" ಎಂದು ಬೆದರಿಸುತ್ತಿದ್ದಾನೆ. ಬಹುತೇಕ ಅನಕ್ಷರಸ್ಥರಾಗಿರುವ ಅಮಾಯಕ ರೈತರು ಇವನ ಬೆದರಿಕೆಗೆ ಅಂಜಿಕೊಂಡಿದ್ದೂ ಉಂಟು. ಆದರೂ, ಜನ



ದೊಡ್ಡಮ್ಮ

ಮಾತ್ರ ಬಾಲಗಂಗಾಧರನಾಥ ಸ್ವಾಮಿಗಳು ಬಡವರ ಹೊಟ್ಟೆ ಮೇಲೆ ಹೊಡೆಯುವಷ್ಟು ಕ್ರೂರಿಗಳಾಗಲು ಸಾಧ್ಯವಿಲ್ಲ ಎಂದೇ ನಂಬಿಕೊಂಡಿದ್ದರು. ಈಗ ಅದೆಲ್ಲ ಹುಸಿಯಾಗಿದೆ. ಕಳೆದೊಂದು ವಾರದಿಂದ ನರಸಿಂಹಮೂರ್ತಿ ಜೆಸಿಬಿ ಯಂತ್ರಗಳನ್ನು, ಟ್ರಾಕ್ಟರ್‌ಗಳನ್ನು ತಂದು ರೈತರ ಹೊಲದಲ್ಲಿದ್ದ ಮರಗಳನ್ನು ಉರುಳಿಸಲಾರಂಭಿಸಿದ್ದಾನೆ. ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ಗೆ ಸರ್ಕಾರ ನೀಡಿರುವ 45 ಎಕರೆ ಮತ್ತು ಅದರ ಸುತ್ತಮುತ್ತಲಿರುವ ಸುಮಾರು 35 ಎಕರೆಯಷ್ಟು ಬಡ ರೈತರ ಜಮೀನು ಸೇರಿಸಿಕೊಂಡು ಇಡೀ 80 ಎಕರೆಗೆ ಬೃಹತ್ ಗೋಡೆ ಕಟ್ಟುವ ಕೆಲಸವನ್ನು ಪ್ರಾರಂಭಿಸಿದ್ದಾನೆ. ಹತ್ತಾರು ವರ್ಷಗಳಿಂದ ಇಲ್ಲಿ ತಲೆಯೆತ್ತಿ ನಿಂತಿರುವ ಮುನೇಶ್ವರ ಸ್ವಾಮಿ ದೇವಸ್ಥಾನವನ್ನೂ ಕೆಡವುವ ಕೆಲಸಕ್ಕೆ ಕೈ ಹಾಕಿದ್ದಾನೆ. ಜಮೀನು ಕಳೆದುಕೊಳ್ಳುತ್ತಿರುವ ರೈತರು ಎಲ್ಲಿ ಬಂಡಾಯ ಎದ್ದುಬಿಡುತ್ತಾರೋ ಎಂಬ ಭಯದಿಂದ ಈತ ದೊಡ್ಡ ಸಂಖ್ಯೆಯಲ್ಲಿ ಪೊಲೀಸರನ್ನು ಕಾವಲಿಗಿಟ್ಟುಕೊಂಡು ಭೂಕಬಳಿಕೆ ಮಾಡುತ್ತಿದ್ದಾನೆ. ಆದಿಚುಂಚನಗಿರಿ ಸ್ವಾಮಿಯ 'ಪ್ರಸಾದ' ತಿಂದಿರುವ ಪೊಲೀಸರು ಜನರನ್ನು ತಮ್ಮ ಹೊಲಗಳ ಹತ್ತಿರ ಕೂಡ ಹೋಗುವುದಕ್ಕೆ ಬಿಡುತ್ತಿಲ್ಲ. ಒಂದು ಶಸ್ತ್ರಸಜ್ಜಿತ ಪೊಲೀಸ್ ವಾಹನದ ತುಂಬಾ ನಲ್ವತ್ತು-ಐವತ್ತು ಪೊಲೀಸರು ಆದಿಚುಂಚನಗಿರಿಯ ಬಾಲಗಂಗಾಧರನಾಥನ ಈ ಭೂಆಕ್ರಮಣದ ದೌರ್ಜನ್ಯಕ್ಕೆ ಕಾವಲುಗಾರರಾಗಿ ನಿಂತಿದ್ದಾರೆ. ಒಂದೆಡೆ ಜಮೀನಿಗೆ ಗೋಡೆ ಕಟ್ಟುವ ಕೆಲಸ ಭರದಿಂದ ಸಾಗಿದ್ದರೆ ಇನ್ನೊಂದೆಡೆ ಇದೇ ಜಮೀನಿನಲ್ಲಿ ಮನೆಕಟ್ಟಿಕೊಂಡಿರುವವರನ್ನು ಬೆದರಿಸಿ "ತಕ್ಷಣವೇ ಮನೆ ಖಾಲಿ ಮಾಡಿ ಹೊರಟುಹೋಗಿ. ಇಲ್ಲದಿದ್ದರೆ ಜೆಸಿಬಿ ಯಂತ್ರ ನಿಮ್ಮ ಮನೆಯನ್ನು ಸಾಮಾನುಗಳ ಸಮೇತವಾಗಿ ಕಿತ್ತೆಸೆಯುತ್ತದೆ" ಎಂದು ಮನೆಖಾಲಿ ಮಾಡುವುದಕ್ಕೆ ಒತ್ತಾಯಿಸುತ್ತಿದ್ದಾರೆ.

ಜನ ಭೂಆಕ್ರಮಣವನ್ನು ಪ್ರತಿಭಟಿಸಿ ಬೆಂಗಳೂರು ದಕ್ಷಿಣ ವಿಶೇಷ ಜಿಲ್ಲಾಧಿಕಾರಿಯಾಗಿರುವ ಹೆಚ್.ರಾಮಾಂಜನೇಯ ಅವರಿಗೆ ದೂರು ಕೊಟ್ಟರೆ "ನಿಮ್ಮ ಹತ್ತಿರ ದಾಖಲೆಗಳಿರಬಹುದು. ಆದರೆ, ನಿಮ್ಮ ಮಾತನ್ನು ಕೇಳಿ ನಾನು ಬಾಲಗಂಗಾಧರನಾಥ ಸ್ವಾಮಿಯನ್ನು ಎದುರು ಹಾಕಿಕೊಳ್ಳಲಾರೆ. ಹಾಗೇನಾದರೂ ಮಾಡಿದರೆ ನನ್ನ ಕುರ್ಚಿ ಅಲುಗಾಡುತ್ತೆ. ನೀರು ನೆರಳು ಇಲ್ಲದ ಜಾಗಕ್ಕೆ ವರ್ಗವಾಗಿ ಹೋಗಬೇಕಾಗುತ್ತೆ" ಎಂದು ಗದರಿಸಿ ಕಳಿಸಿದ್ದಾರೆ. ಕೊನೆಗೆ ನಾಮಕಾವಸ್ತೆಗೆ ಸರ್ವೇ ನಡೆಸುವಂತೆ ತಹಶೀಲ್ದಾರ ಸಿ.ಮಂಜುನಾಥ್ ಅವರಿಗೆ ಸೂಚಿಸಿ ಕೈತೊಳೆದುಕೊಂಡಿದ್ದಾರೆ. ತಹಶೀಲ್ದಾರ್ ಮಂಜುನಾಥ್ ಕೂಡ ಜಿಲ್ಲಾಧಿಕಾರಿಯಂತೆಯೇ ಮಾತನಾಡಿ "ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನವರನ್ನು ತಡೆಯಲು ನನ್ನಿಂದ ಸಾಧ್ಯವಿಲ್ಲ. ನೀವು ಬೇಕಾದರೆ ಕೋರ್ಟ್‌ಗೆ ಹೋಗಿ" ಎಂದು ಬೈದು ಕಳಿಸಿದ್ದಾರೆ.

ಬೇರೆ ದಾರಿ ಕಾಣದೆ ಈ ರೈತರೆಲ್ಲಾ ಸೇರಿಕೊಂಡು, ತಮಗೆ ಸರ್ಕಾರ ಮಂಜೂರು ಮಾಡಿರುವ ಪತ್ರವನ್ನು, ಖಾತೆಯಾಗಿರುವ ದಾಖಲೆ, ಪಾಣಿಗಳನ್ನು ಹಿಡಿದುಕೊಂಡು ಕಚೇರಿಯಿಂದ ಕಚೇರಿಗೆ ಅಲೆಯುತ್ತಿದ್ದಾರೆ. ಬಾಲಗಂಗಾಧರನಾಥರ ಭೂಆಕ್ರಮಣವನ್ನು ನಿಲ್ಲಿಸುವಂತೆ ಕೋರಿ ತಡೆಯಾಜ್ಞೆ ತರುವುದಕ್ಕೆ ಹೈಕೋರ್ಟಿನ ಮೆಟ್ಟಿಲು ಹತ್ತುತ್ತಿದ್ದಾರೆ.

ಇದನ್ನು ಕಣ್ಣಾರೆ ನೋಡುತ್ತಿರುವ ಜನ ಬಾಲಗಂಗಾಧರರ ದುರಾಸೆಯ ಬಗ್ಗೆ, ಅಮಾಯಕ ಜನರನ್ನು ಗೋಳು ಹೊಯ್ದುಕೊಳ್ಳುತ್ತಿರುವ ಅವರ ನೀಚತನದ ಬಗ್ಗೆ ಸಿಡಿಮಿಡಿಗೊಂಡಿದ್ದಾರೆ. ಅವರಿನ್ನೂ ಬದುಕಿರುವಾಗಲೇ ಕಾಂಗ್ರೆಸ್ಸಿಗರು, ಬಿಜೆಪಿಗಳು, ಜನತಾದಳಗಳು ಬಾಲಗಂಗಾಧರ ಕೂಡಿಟ್ಟಿರುವ ದುಡ್ಡು-ಆಸ್ತಿಗಾಗಿ ಕಚ್ಚಾಟ ಶುರುವಿಟ್ಟುಕೊಂಡಿದ್ದಾರೆ. ಇನ್ನು ಅವರು ಗೊಟಕ್ ಎಂದಮೇಲೆ ಇದು ಬೀದಿಜಗಳವಾಗುವುದರಲ್ಲಿ ಸಂಶಯವಿಲ್ಲ. ಮಠಕ್ಕೆ ಆಸ್ತಿ ಹೆಚ್ಚಾದಷ್ಟೂ ಈ ಜಗಳದ ತೀವ್ರತೆಯೂ ಜಾಸ್ತಿಯಾಗುತ್ತದೆ.


ಕಡೆಗಾಲದಲ್ಲಿ ಸ್ವಾಮಿಗೆ ಇದು ಬೇಕಿತ್ತೆ? ■

ಆರೆಸ್ಸೆಸ್ ಕಪಟ ನಾಟಕ ಶುರು

▶▶▶10

ಯಡ್ಡಿಯನ್ನು ಕುಟುಕುತ್ತಲೇ ಇದ್ದಾರೆ. ಹೈಕಮಾಂಡ್ ವರಿಷ್ಠ ಅರುಣ್ ಜೈಟ್ಲಿ ಬಂದಾಕ್ಷಣವೇ ಅವರ ಬಳಿ ಅಹವಾಲು ತೋಡಿಕೊಳ್ಳುತ್ತೇವೆಂದು ಮತ್ತೆ ಮತ್ತೆ ತಿಪ್ಪೆ ಸಾರಿಸುತ್ತಿದ್ದಾರೆ. ಅರುಣ್ ಜೈಟ್ಲಿ ಬಂದದ್ದೇ ಹನ್ನೆರಡು ಮಂದಿಯ ಉನ್ನತ ಸಮಿತಿಯೊಂದನ್ನು ರಚಿಸುತ್ತಾರೆಂದೂ, ಅದಕ್ಕೆ ಮುಖ್ಯಮಂತ್ರಿಗಿಂತಲೂ ಹೆಚ್ಚಿನ ಅಧಿಕಾರವಿರುತ್ತದೆಯೆಂದೂ, ಯಾರು ಮಂತ್ರಿಯಾಗಬೇಕು, ಯಾರು ರಾಜೀನಾಮೆ ಕೊಡಬೇಕು, ಯಾರೆಲ್ಲ ನಿಗಮ ಮಂಡಳಿಗಳ ಅಧ್ಯಕ್ಷರಾಗಬೇಕು, ಸರ್ಕಾರದ ಪಾಲಿಸಿ ಏನಾಗಬೇಕು, ಕಾರ್ಯತಂತ್ರ ಹೇಗಿರಬೇಕು, ಯಾವ ಉನ್ನತ ಹುದ್ದೆಯಲ್ಲಿ ಯಾವ ಅಧಿಕಾರಿಯಿರಬೇಕು, ವರ್ಗಾವಣೆ ಹೇಗಿರಬೇಕು; ಎಲ್ಲವನ್ನೂ ಈ ಸಮಿತಿಯೇ ನಿರ್ಧರಿಸಬೇಕೆಂಬುದು ಈಶ್ವರಪ್ಪ ಮತ್ತವರ 'ಅತೃಪ್ತ' ಕೂಟದ ಪರತ್ತು.

ಹಕೀಕತ್ತೆಂದರೆ ಇಂಥ 'ಉನ್ನತ ಸಮಿತಿ'ಯ ಪರಿಕಲ್ಪನೆ ಮಾಡಿದ್ದೇ ಆರೆಸ್ಸೆಸ್ ವರಿಷ್ಠ ಮಂಡಳಿ. ಆರೆಸ್ಸೆಸ್ ಮುಖ್ಯಸ್ಥನಾದ ಮೈ.ಚ. ಜಯದೇವ, ಕಲ್ಲಡ್ಕ ಪ್ರಭಾಕರ ಭಟ್ಟ, ಸು. ರಾಮಣ್ಣ, ಮಂಘೇಶ್ ಭೇಂಡೆ, ಕೃ. ನರಹರಿ, ಬೌದ್ಧಿಕ ಪ್ರಮುಖ ಸೂರ್ಯ ನಾರಾಯಣರಾವ್, ಚಂದ್ರಶೇಖರ ಭಂಡಾರಿ ಮುಂತಾದವರೆಲ್ಲ ಜೂನ್



ಐದರ ಶುಕ್ರವಾರದಂದು ಕೇಶವಕೃಪದಲ್ಲಿ ಸಭೆ ಸೇರುತ್ತಾರೆ. ಅಲ್ಲಿಗೆ ರಾಜ್ಯ ಬಿಜೆಪಿಯ ಸಂಘಟನಾ ಕಾರ್ಯದರ್ಶಿ ಮತ್ತು ಆರೆಸ್ಸೆಸ್ ಧೂತನಾದ ಸಂತೋಷ್‌ಜಿಯನ್ನು ಕರೆಸಿಕೊಳ್ಳುತ್ತಾರೆ. ರಾತ್ರಿ 11 ತನಕ ಕೂತು ಅಂತಿಮವಾಗಿ ಯಡ್ಡಿಗೆ ಮೂಗುದಾರ ಹಾಕಲು ಕಾರಸ್ಥಾನ ರೂಪುಗೊಳ್ಳುತ್ತದೆ.

ಅದು ಮುಖ್ಯಮಂತ್ರಿಗಿರಿಗಿಂತಲೂ ಉನ್ನತಾಧಿಕಾರದ ಸುಪ್ರೀಂ ಕಮಾಂಡ್. ರಾಜ್ಯ ಬಿಜೆಪಿಯ ಸೂತ್ರಧಾರನಂತಿರುವ ಸಂತೋಷ್‌ಜಿ, ಎಬಿವಿಪಿಯ ರಘುನಂದನ್, ವಿಶ್ವಹಿಂದೂ ಪರಿಷತ್ತಿನ ಕೇಶವ ಹೆಗಡೆ, ಬಿಎಂಎಸ್‌ನ ಮುಖ್ಯಸ್ಥ ಶೇಷಾದ್ರಿ, ಆರೆಸ್ಸೆಸ್‌ನ ಮೈ.ಚ. ಜಯದೇವ, ಕಲ್ಲಡ್ಕ ಪ್ರಭಾಕರ ಭಟ್ಟ, ಆರೆಸ್ಸೆಸ್ ಪ್ರಾಂತ ಪ್ರಚಾರಕ ಮುಕುಂದ್, ಪ್ರಾಂತಸಹಕಾರ್ಯವಾಹ ತಿಪ್ಪೇಸ್ವಾಮಿ ಮುಂತಾದವರನ್ನೊಳಗೊಂಡ ಈ 'ಸುಪ್ರೀಂ ಕಮಾಂಡ್' ಹೇಳಿದಂತೆ ಮುಖ್ಯಮಂತ್ರಿ ಆಳ್ವಿಕೆ ಮಾಡಬೇಕು!

ಬಿಜೆಪಿಯ ಇನ್ನೂ ಕೆಲವರು ಈ ಸಮಿತಿಯಲ್ಲಿರುತ್ತಾರಂತೆ. ಇಲ್ಲಿ ಮೈ.ಚ. ಜಯದೇವ ಮತ್ತು ತಿಪ್ಪೇಸ್ವಾಮಿ ಎಂಬಿಬ್ಬರು ಲಿಂಗವಂತ ಚೆಡ್ಡಿಗಳನ್ನು ಬಿಟ್ಟರೆ ಮಿಕ್ಕೆಲ್ಲರೂ ಬ್ರಾಹ್ಮಣರು. ಹುಟ್ಟಾ ಆರೆಸ್ಸೆಸ್ ವೈದಿಕಶಾಹಿ ಮನಸ್ಥಿತಿಯವರು. ಯಾವ ಹುದ್ದೆಯಲ್ಲಿ ಯಾರಿರಬೇಕು, ಯಾರೆಲ್ಲ ನಿಗಮ ಮಂಡಳಿಗಳ ಅಧ್ಯಕ್ಷರಾಗಬೇಕು, ಸರ್ಕಾರದ ಪಾಲಿಸಿ, ಬಜೆಟ್ಟು, ಕಾರ್ಯತಂತ್ರ ಎಲ್ಲವನ್ನೂ ಈ ಸಮಿತಿಯೇ ನಿರ್ಧರಿಸುವುದಾದರೆ; ಯಾವ ಪುರುಷಾರ್ಥಕ್ಕೆಂದು ಯಡ್ಡಿ ಮುಖ್ಯಮಂತ್ರಿಯಾಗಿರಬೇಕು?

ಹೆಸರಿಗೆ ಸರ್ಕಾರ ಬಿಜೆಪಿಯದಾದರೂ ಯಡ್ಡಿಯನ್ನು ಅಧಿಕಾರಕ್ಕೆ ತಂದದ್ದು ರಾಜ್ಯದ ಲಿಂಗಾಯತ ಸಮೂಹ. ಲಿಂಗಾಯತರು ಬಿಜೆಪಿಯ ಬೆನ್ನಿಗೆ ನಿಲ್ಲದೇ ಹೋಗಿದ್ದರೆ ಗಣಿ ರೆಡ್ಡಿಗಳು ಅದೆಷ್ಟೋ ರೊಕ್ಕ ಸುರಿದರೂ ಹೇಗೆ ಗೆಲ್ಲುತ್ತಿದ್ದರು? ಲಿಂಗಾಯತರ ಇಚ್ಛಾಶಕ್ತಿಗನುಗುಣವಾಗೇ ತನಗೆ ಅಧಿಕಾರ ದಕ್ಕಿದ್ದೆಂಬ ನಂಬಿಕೆಯಿಂದಲೇ ಯಡ್ಡಿ ಲಿಂಗವಂತ ಅಧಿಕಾರಿಗಳನ್ನು ಆಯಕಟ್ಟಿಗೆ ತಂದರು. ತನ್ನ ಸುತ್ತ ತನ್ನದೇ ಜಾತಿವಂತರ ಕೋಟೆಕಟ್ಟಿಕೊಂಡರು. ಸಂಘ ಪರಿವಾರವನ್ನು ಕೊಂಚ ಅಂತರದಲ್ಲಿಟ್ಟೇ ಸ್ವಂತ ನಿರ್ಧಾರಗಳನ್ನು ಕೈಗೊಂಡರು.

ಟ್ರಾನ್ಸ್‌ಫರ್ ಸುಲಿಗೆ, ಭೂಕಬಳಿಕೆ, ದುರಾಡಳಿತ, ಭ್ರಷ್ಟಾಚಾರ, ಸ್ವಜನಪಕ್ಷಪಾತ ಬಿಟ್ಟರೆ ಯಡ್ಡಿ ಸರ್ಕಾರದ ಸಾಧನೆಯೆಂದರೆ ಚುನಾವಣೆಯಲ್ಲಿ ಬಿಟ್ಟಿ ಹಂಚಿದ ಹಣ ಹೆಂಡಗಳಷ್ಟೆ. ತನಗೆ ಮಣೆಹಾಕದ ಸಿಟ್ಟಿಗೆ ಈಶ್ವರಪ್ಪ, ಗಣಿ ಲೂಟಿಗೆ ಹಪಾಹಪಿಸುವ ರೆಡ್ಡಿ ಗ್ಯಾಂಗ್ ಈಗ ಯಡ್ಡಿ ವಿರುದ್ಧ ತಿರುಗಿಬಿದ್ದರೆ ಇದನ್ನೇ ತನ್ನ ಸ್ವಾರ್ಥಸಾಧನೆಗೆ ಆರೆಸ್ಸೆಸ್ ಅಸ್ತ್ರವಾಗಿ ಬಳಸುತ್ತಿದೆಯೇ ಹೊರತು ಅದಕ್ಕೆ ರಾಜ್ಯದ ಅಭಿವೃದ್ಧಿ ಬೇಕಿಲ್ಲ. ಒಂದೆಡೆ ಈಶ್ವರಪ್ಪನವರನ್ನು ಛೂಬಿಟ್ಟು ಮತ್ತೊಂದೆಡೆ ಗಣಿ ರೆಡ್ಡಿಗಳ ಬ್ಲಾಕ್‌ಮೇಲ್ ಬಳಸಿಕೊಂಡು ಆರೆಸ್ಸೆಸ್ ಸಮಯ ಸಾಧಿಸುತ್ತಿದೆಯೇ ಹೊರತು ಯಡ್ಡಿಯನ್ನು ಸಂಕಟದಿಂದ ಪಾರು ಮಾಡುತ್ತಿಲ್ಲ. ಲಿಂಗಾಯತರ ಕೋಟೆಗೆ ಜನಿವಾರ ಕಟ್ಟುವುದು ಬಿಟ್ಟರೆ ಚೆಡ್ಡಿ ಗ್ಯಾಂಗ್‌ಗೆ ಬೇರೆ ಉದ್ದೇಶವೇನಿದೆ?

ಈ ಪುರುಷಾರ್ಥಕ್ಕೆ ರಾಜ್ಯದ ಲಿಂಗಾಯತರೆಲ್ಲ ಬಿಜೆಪಿಯನ್ನು ಬೆಂಬಲಿಸಬೇಕಿತ್ತೆ? ■


ಶಿವಪ್ಪ

ಶಿವಪ್ಪ ಹಾರೋಮುಚಡಿ

ಚೋರ ಗುರುವಿನ ಚಾಂಡಾಲ ಪುರಾಣ!


...ಗೆ ಚಿತ್ರದಲ್ಲಿರುವ ವ್ಯಕ್ತಿಯನ್ನೊಮ್ಮೆ ಸೂಕ್ಷ್ಮವಾಗಿ ... ಕೈಯಲ್ಲಿ ಸ್ಲೇಟು ಕೊಟ್ಟರೆ ಥೇಟ್ ಕಲಾಸಿಪಾಳ್ಯ ...ಸ್ ಸ್ಟೇಶನ್‌ನಲ್ಲಿ ಸಿಕ್ಕಿಬಿದ್ದ ಪಿಕ್‌ಪಾಕೆಟರ್ ಥರ ...ತ್ತಾನೆ. ನಿಜ ಹೇಳಬೇಕೆಂದರೆ, ಈತ ಪರಪ್ಪನ ...ರ ಜೈಲಿನಲ್ಲಿ ಬಿಳಿ ಯೂನಿಫಾರ್ಮ್ ಹಾಕಿಕೊಂಡು ...ಪ್ಪತ್ತು ವರ್ಷ ಕೈದಿಯಾಗಿ ಶಿಕ್ಷೆ ಅನುಭವಿಸಬೇಕಾ... ಕನ್ನಡನಾಡಿನ ಕಲಾ ವಿದ್ಯಾರ್ಥಿಗಳ ದುರಂತವೋ, ...ಷ್ಟವೋ ಗೊತ್ತಿಲ್ಲ, ಅಂತೂ ಕರ್ನಾಟಕ ಸಾರ್ವಜನಿಕ ... ಇಲಾಖೆಯ ಆಯುಕ್ತರ ಕಾರ್ಯಾಲಯದಲ್ಲಿ ಸಹಾಯಕ ನಿರ್ದೇಶಕನಾಗಿ, ಚಿತ್ರಕಲಾ ಕಲಾವಿದ ...ರ್ಯನಿರ್ವಹಿಸುತ್ತಿದ್ದಾನೆ.

...ತನನ್ನು ಚೆನ್ನಾಗಿ ಬಲ್ಲ ಕೆಲವರಿಗೆ ಆಶ್ಚರ್ಯವಾಗಿ ... ನಿಜ. ಇವನಿಗೆ ಸರಿಯಾಗಿ ಒಂದೇ ಒಂದು ಗೆರೆ ...ಬು ಬರುವುದಿಲ್ಲ, ಅಂಥವನು ಅದ್ಹೇಗೆ ಚಿತ್ರಕಲಾ ...ಕನಾಗಿ ಪ್ರಮೋಶನ್ ಪಡೆದುಕೊಂಡ? ಹೈಸ್ಕೂಲ್ ...ಗೆ ಪಾಠ ಮಾಡುವುದಕ್ಕೆ ಬೇಕಿರುವ ಕನಿಷ್ಠ ...ನ್ನೂ ಪಡೆದುಕೊಳ್ಳದೇ ಅದ್ಹೇಗೆ ಹಿರಿಯ ಸಹಾಯಕ ...ಶಕನಾದ? ಕಾಲೇಜಿಗೆ ಹಾಜರಾಗದೇ, ...ಯೂ ಕುಳಿತುಕೊಳ್ಳದೇ ಅದ್ಹೇಗೆ ಅಂಕ ...ಪಡೆದುಕೊಂಡ? ಒಂದು ಕಾಲದಲ್ಲಿ ...ಹೊತ್ತಿನ ಕೂಳಿಗೆ ಅಲೆಯುತ್ತಿದ್ದವನು ...ದೇ ಡಿಗ್ರಿಯನ್ನೂ ಮುಗಿಸದೇ ಅದ್ಹೇಗೆ ...ಸೇರಿಕೊಂಡ? ಅದ್ಹೇಗೆ ಲಕ್ಷಾಧಿಪತಿ ... ಆತನನ್ನು ಬಲ್ಲವರಿಗೆ ಈ ಪ್ರಶ್ನೆಗಳು ...ಗಿ ಏಳುತ್ತಿವೆ. ಈ ಪ್ರಶ್ನೆಗಳಿಗೆ ಉತ್ತರ ...ತ್ತಾ, ಇವನ ಹಿನ್ನೆಲೆ-ಮುನ್ನೆಲೆಗಳನ್ನು ...ತ್ತಾ ಹೋದರೆ ಶಿವಪ್ಪ ಹಾರೋಮುಚಡಿ ಎಂಬ ...ಚೋರ ಗುರುವಿನ ಚಾಂಡಾಲ ಪುರಾಣಗಳು ಅನಾ...ವರಣಗೊಳ್ಳುತ್ತವೆ. ಈ ಘಟಿಂಗನ ವಂಚನೆಯ ಚರಿತ್ರೆ ...ವಾಚುತ್ತದೆ.


ಚದ್ರೇ ಶಂಕರಯ್ಯ

...ನೆಗೂ ಒಂದು ಮಿತಿ ಬೇಡವೆ?

...ಪ್ಪ ಎಚ್ ಹಾರೋಮುಚಡಿ ಗದಗದ ವಿಜಯ ...ದಿರ ಎಂಬ ಚಿತ್ರಕಲಾ ಕಾಲೇಜಿಗೆ ಸೇರಿಕೊಂಡು ...ಲ್ಲಿ ಡಿಟಿಸಿ (Drawing Teacher Course) ...ನ್ನು ಮುಗಿಸಿದ್ದಾನೆ. ಅದಾದ ಮೇಲೆ ಬೆಂಗಳೂರಿನ ...ಬೇಗೌಡ ಬಾಲಕರ ಪ್ರೌಢಶಾಲೆಯಲ್ಲಿ ಚಿತ್ರಕಲಾ ...ಗಿ ಕೆಲಸಕ್ಕೆ ಸೇರಿಕೊಂಡಿದ್ದಾನೆ. ಈತ ಕೇವಲ


ಫೋರ್ಜರಿ ಅಂಕಪಟ್ಟಿ...

...ಕೋರ್ಸ್ ಮಾತ್ರ ಮುಗಿಸಿದ್ದರಿಂದ ಅವನ ಈ ...ಪ್ರಾಥಮಿಕ ಶಾಲಾ ಶಿಕ್ಷಕನ ಹುದ್ದೆಗೆ ಸರಿಸಮಾನದ್ದು ... ಪ್ರಮೋಶನ್ ಮೇಲೆ ಪ್ರಮೋಶನ್ ಪಡೆಯ...ಗಿಲು, ಆ ಮೂಲಕ ದುಡ್ಡು ಕಮಾಯಿಸಬೇಕೆಂಬ ...ಸೆ ಇತ್ತು, ಅದಕ್ಕೆ ತಕ್ಕಂತೆ ಕಷ್ಟಪಟ್ಟು ವ್ಯಾಸಂಗ ...ವಶ್ಯವಿರುವ ಡಿಗ್ರಿಗಳನ್ನು ಪಡೆದುಕೊಳ್ಳಬೇಕಲ್ಲವೆ? ...ಸಹಾ ಮೈಗಳ್ಳನಾಗಿದ್ದ ಈತ ಡಿಟಿಸಿ ಕೋರ್ಸ್ ...ದ್ದೇ ದೊಡ್ಡ ಮಾತಾಗಿತ್ತು, ಇನ್ನು ಉನ್ನತ ಡಿಗ್ರಿಗಳನ್ನು ...ವ ಪ್ರಶ್ನೆ ಎಲ್ಲಿಂದ ಬರುತ್ತೆ? ಅತ್ತ ಉನ್ನತ ... ಪ್ರಮೋಶನ್ ಪಡೆದುಕೊಂಡು ದುಡ್ಡು ...ಕೆಂಬ ದುರಾಸೆಯನ್ನೂ ಬಿಡುವುದಕ್ಕೆ ಮನಸ್ಸಿಲ್ಲ, ...ಸ್ತುರಿದು ಓದುವುದಕ್ಕೂ ಸಿದ್ಧವಿಲ್ಲ, ಅಂಥ ...ಸ್ಥಿತಿಯಲ್ಲಿ, ಆತ ಕೈಹಾಕಿದ್ದು ಮೋಸವಂಚನೆಗಳ ... ತನ್ನ ಗುರಿಸಾಧನೆ ಮಾಡುವ ಮಹಾನ್ ಕೃತ್ಯಕ್ಕೆ. ...ಆತನ ಮೊದಲ ವಂಚನೆ ಶುರುವಾಗಿದ್ದು ಆವಾಗಲೇ. ...ರಿನ ಹೊಂಬೇಗೌಡ ಬಾಲಕರ ಪ್ರೌಢಶಾಲೆಯಲ್ಲಿ ... ಶಿಕ್ಷಕನಾಗಿದ್ದುಕೊಂಡೇ ಗದಗದ ವಿಜಯ ...ಮಂದಿರದಲ್ಲಿ ಉನ್ನತ ವ್ಯಾಸಂಗವಾದ ಡಿ.ಎಂ.ಸಿ ...ing Master Course) [illegible]

ಕೋರ್ಸಿಗೆ ರೆಗ್ಯೂಲರ್ ವಿದ್ಯಾರ್ಥಿಯಾಗಿ ಸೇರಿಕೊಂಡ. ವಾಸ್ತವದಲ್ಲಿ ಹೀಗೆ ಮಾಡುವಂತಿಲ್ಲ. ಏಕೆಂದರೆ, ಆತ ಅತ್ತ ಬೆಂಗಳೂರಿನಲ್ಲಿ ಟೀಚರ್ ಆಗಿ ಕೆಲಸ ಮಾಡುತ್ತಲೇ ಇತ್ತ ರೆಗ್ಯೂಲರ್ ವಿದ್ಯಾರ್ಥಿಯಾಗಿ ಸೇರಿಕೊಳ್ಳುವುದಕ್ಕೆ ನಿಯಮಗಳ ಪ್ರಕಾರ ಅವಕಾಶವಿಲ್ಲ. ಆದರೂ ಮುಂಡಾ ಮೋಚುವುದಕ್ಕೆ ತಯಾರಾಗಿದ್ದ ಹಾರೋಮುಚಡಿ ಇಂತಹದ್ದೊಂದು ಕೆಲಸಕ್ಕೆ ಕೈಹಾಕಿದ್ದ. ಆದರೆ, ಟೀಚರ್ ಆಗಿ ಆತ ಕೆಲಸ ಮಾಡುತ್ತಾ ಸರ್ಕಾರಿ ಸಂಬಳ ಪಡೆಯುತ್ತಿದ್ದ ನಾದ್ದರಿಂದ, ವರ್ಷಗಟ್ಟಲೇ ರಜೆ ಹಾಕಲು ಬರುವುದಿಲ್ಲ ವಾದ್ದರಿಂದ ಆತ ಟೀಚರ್ ಆಗಿ ಕೆಲಸ ಮುಂದುವರೆಸಿದನೇ ಹೊರತು ಎಂದೂ ಕಾಲೇಜಿಗೂ ಹೋಗಲಿಲ್ಲ, ಪರೀಕ್ಷೆಗೂ ಕುಳಿತುಕೊಳ್ಳಲಿಲ್ಲ. ಪರಿಣಾಮವಾಗಿ 1982-83ರಲ್ಲಿ ಹಾಗೂ 1983-84ರಲ್ಲಿ ನಿರೀಕ್ಷೆಯಂತೆ ಫೇಲ್ ಆದ.

ಹೀಗೆ, ಡಿಎಂಸಿ ಕೋರ್ಸಿನಲ್ಲೇ ಪಾಸಾಗದೇ ಡುಮುಕಿ ಹೊಡೆದ ಹಾರೋಮುಚಡಿ ಗದಗ ತಾಲ್ಲೂಕಿನ ಬೆಟಗೇರಿಯ ಜೆ.ಎನ್. ಕಲಾಶಾಲೆಯಲ್ಲಿ 1986-87ರಲ್ಲಿ ಇನ್ನೂ ಉನ್ನತ ವ್ಯಾಸಂಗವಾದ Art Master Courseಗೆ ಪ್ರವೇಶ ಪಡೆದಿದ್ದಾನೆ! ಈ ಕೋರ್ಸಿಗೆ ಪ್ರವೇಶ ಸಿಗಬೇಕೆಂದರೆ ಕನಿಷ್ಠ ಡಿಎಂಸಿ ದ್ವಿತೀಯ ವರ್ಷದಲ್ಲಿ ಪಾಸಾಗುವುದು ಕಡ್ಡಾಯ. ಅಲ್ಲದೇ ಮೂರನೇ ಮತ್ತು ನಾಲ್ಕನೇ ವರ್ಷಗಳಲ್ಲಿ ಡ್ರಾಯಿಂಗ್ ಮತ್ತು ಪೇಯಿಂಟಿಂಗ್‌ನಲ್ಲಿ ಪಾಸಾಗುವುದು ಕಡ್ಡಾಯ. ಅಷ್ಟೇ ಅಲ್ಲ, ಈ ಎಲ್ಲಾ ಕೋರ್ಸುಗಳಲ್ಲಿ ಕನಿಷ್ಠ ಶೇ.80ರಷ್ಟು ಹಾಜರಾತಿ ಇರಬೇಕಾದದ್ದೂ ಕಡ್ಡಾಯ. ಆದರೆ, ಬೆಂಗಳೂರಿನ ಹೊಂಬೇಗೌಡ ಪ್ರೌಢಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದವನು, ಸರ್ಕಾರಿ ಸಂಬಳ ಪಡೆಯುತ್ತಿದ್ದವನು ಒಂದು ದಿನವೂ ಕಾಲೇಜಿಗೆ ಹೋಗಿಲ್ಲ ಎಂದರೆ ಇನ್ನು ಶೇ.80ರಷ್ಟು ಹಾಜರಾತಿ ಎಲ್ಲಿಂದ ಬರಬೇಕು? ಪರೀಕ್ಷೆಗೇ ಕುಳಿತುಕೊಂಡಿಲ್ಲ ಎಂದರೆ ಎಲ್ಲಿಂದ ಪಾಸಾಗಬೇಕು? ಆದರೂ ಆರ್ಟ್ ಮಾಸ್ಟರ್ ಕೋರ್ಸಿಗೆ ಪ್ರವೇಶ ಪಡೆದುಕೊಂಡ. ಪರೀಕ್ಷೆ ಬರೆಯುವುದಕ್ಕಾಗಿ ಅಪ್ಲಿಕೇಶನ್ ಕೂಡ ಸಲ್ಲಿಸಿದ.

1986-87ರಲ್ಲಿ ಈತ ಆರ್ಟ್ ಮಾಸ್ಟರ್ ಕೋರ್ಸ್‌ನ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ನೋಡಿದ ತಕ್ಷಣವೇ 17.03.1987ರಂದು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ಒಂದು ಆಕ್ಷೇಪಣಾ ಪತ್ರವನ್ನು ಬೆಟಗೇರಿ ಸ್ಕೂಲಿಗೆ ರವಾನಿಸಿತು (ಕ.10.9. ಅ.ಪ. ಉಚಿತ 86-87/89). ಆದರಲ್ಲಿ ಶಿವಪ್ಪ ಹಾರೋಮುಚಡಿ ಡಿಎಂಸಿ ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ಪಾಸಾದ ಅಂಕಪಟ್ಟಿ, ನಾಲ್ಕನೇ ವರ್ಷ ಡ್ರಾಯಿಂಗ್ ಮತ್ತು ಪೇಯಿಂಟಿಂಗ್ ಪರೀಕ್ಷೆಯಲ್ಲಿ ಪಾಸಾದ ಅಂಕಪಟ್ಟಿ ಸಲ್ಲಿಸುವಂತೆ ಕೇಳಲಾಗಿತ್ತು. ಶಿವಪ್ಪ ಹಾರೋಮುಚಡಿ ಕಾಲೇಜಿಗೂ ಹೋಗಿಲ್ಲ, ಪರೀಕ್ಷೆಯನ್ನೂ ಬರೆದಿಲ್ಲ ಎಂದರೆ ಆತ ಅಂಕಪಟ್ಟಿಗಳನ್ನು ಎಲ್ಲಿಂದ ತರುತ್ತಾನೆ? ಆತ ಈ ಅಂಕಪಟ್ಟಿಗಳನ್ನು ಸಲ್ಲಿಸದಿದ್ದುದರಿಂದ ಆತನಿಗೆ ಹಾಲ್ ಟಿಕೆಟ್ ಸಿಗಲಿಲ್ಲ, ಪರೀಕ್ಷೆಗೂ ಕುಳಿತುಕೊಳ್ಳಲಿಲ್ಲ.

ನಂತರ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ 10.6.1987ರಲ್ಲಿ ಪ್ರಕಟಿಸಿದ ಫಲಿತಾಂಶ ಪಟ್ಟಿಯಲ್ಲೂ ಆ ಶಾಲೆಯಲ್ಲಿ ಒಟ್ಟು 17 ವಿದ್ಯಾರ್ಥಿಗಳ ಪೈಕಿ ಮೂರು ಜನ ಮಾತ್ರವೇ ಉತ್ತೀರ್ಣರಾಗಿದ್ದು ಅದರಲ್ಲಿ ಶಿವಪ್ಪ ಹಾರೋಮುಚಡಿಯ ರಿಜಿಸ್ಟರ್ ನಂಬರ್ ಇಲ್ಲದಿರುವುದು ಸ್ಪಷ್ಟವಾಗಿದೆ. ಇಂಟರ್‌ನಲ್ ಅಸೆಸ್‌ಮೆಂಟ್ ಪರೀಕ್ಷೆಯಲ್ಲೂ ಒಟ್ಟು 11 ವಿದ್ಯಾರ್ಥಿಗಳಲ್ಲಿ 10 ಜನ ಹಾಜರಾಗಿದ್ದು 1722 ರಿಜಿಸ್ಟರ್ ನಂಬರ್‌ನ ಒಬ್ಬ ವಿದ್ಯಾರ್ಥಿ ಗೈರು ಹಾಜರಾಗಿದ್ದಾನೆ ಎಂಬುದು ಅಲ್ಲಿನ ದಾಖಲೆಗಳಲ್ಲೇ ಇದೆ. ಈ ನಂಬರ್ ಶಿವಪ್ಪ ಹಾರೋಮುಚಡಿಯದ್ದೇ ಆಗಿದೆ.

ಹೀಗೆ ಶಿವಪ್ಪ ಹಾರೋಮುಚಡಿ ಮುಗಿಸಿದ್ದು ಕೇವಲ ಡಿಟಿಸಿ ಕೋರ್ಸ್. ಅಂದರೆ, ಅವನಿಗೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕೊಡುವಷ್ಟು ಸಂಬಳವನ್ನು ಮಾತ್ರವೇ ಕೊಡಬೇಕು. ಆದರೆ, ಈತ ಎಂಥ ತಾರಾತಿಗಡಿ ಮನುಷ್ಯ ಎಂದರೆ ಆರ್ಟ್ ಮಾಸ್ಟರ್ ಡಿಪ್ಲೊಮಾ ಕೋರ್ಸ್ ಪಾಸ್ ಆಗಿದೆ ಅಂತ ಹೇಳಿಕೊಂಡು, ಫೋರ್ಜರಿ ಅಂಕಪಟ್ಟಿಯನ್ನು ಸೃಷ್ಟಿಸಿ 1988ರಿಂದೀಚೆಗೆ ಪ್ರೌಢಶಾಲಾ ಶಿಕ್ಷಕರ ವೇತನ ಶ್ರೇಣಿಯಲ್ಲಿ ಬಾಕಿ ಸಮೇತ ಸಂಬಳ ಪಡೆದಿದ್ದಾನೆ. ಆದರೆ, ಇವನೆಂಥ ದಡ್ಡ ಎಂದರೆ ಈ ಫೋರ್ಜರಿ ಅಂಕಪಟ್ಟಿ ತಯಾರಿಸುವಾಗಲೂ ಕನಿಷ್ಠ ಎಚ್ಚರಿಕೆ ವಹಿಸಿಲ್ಲ. ಮೂಲ ಅಂಕಪಟ್ಟಿ ಕಳೆದುಹೋಗಿದೆ ಯೆಂಬ ಕಾರಣ ಕೊಟ್ಟು ನಕಲು ಪ್ರತಿಯನ್ನು ಕೊಟ್ಟರು ವುದಾಗಿ ಫೋರ್ಜರಿ ಕೊಟ್ಟಿದ್ದಾನೆ. ಇಡೀ ಅಂಕಪಟ್ಟಿಯಲ್ಲಿ ಅಂಕಗಳು, ಶೀಲುಗಳು, ಸಹಿಗಳು ಎಲ್ಲವೂ ಫೋರ್ಜರಿಯೇ. ಒಂದು ಉದಾಹರಣೆ ಕೊಡಬೇಕೆಂದರೆ, ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ನಿರ್ದೇಶಕರು 22.09.2002ರಂದು ಸಹಿಮಾಡಿ ನಕಲು ಅಂಕಪಟ್ಟಿಯನ್ನು ಕೊಟ್ಟಿರುವುದಾಗಿ ಅದರಲ್ಲಿ ನಮೂದಿತವಾಗಿದೆ. ವಾಸ್ತವ ಏನೆಂದರೆ, ಆ ದಿನ ಭಾನುವಾರ. ರಜಾ ದಿನ. ಆವತ್ತು ಅವರು ಹೇಗೆ ಕೊಟ್ಟರು? ಇಂಥ ಕನಿಷ್ಠ ಎಚ್ಚರಿಕೆಯನ್ನೂ ವಹಿಸಿಕೊಳ್ಳದ ದಡ್ಡ ಈ ದಡ್ಡತನದಿಂದಲೇ ಈಗ ಸಿಕ್ಕಿಹಾಕಿಕೊಂಡಿದ್ದಾನೆ.

ಕೇಂದ್ರ ಕಚೇರಿಗೆ ವಕ್ಕರಿಸಿಕೊಂಡ

ಫೋರ್ಜರಿ ಸರ್ಟಿಫಿಕೇಟ್‌ಗಳನ್ನು ಕೊಟ್ಟು ಪಡೆಯುತ್ತಿದ್ದ ಹೆಚ್ಚುವರಿ ಪುಕ್ಕಟೆ ಸಂಬಳ ಪ್ರಾಯಶಃ ಶಿವಪ್ಪ ಹಾರೋಮುಚಡಿಯ ಧನದಾಹವನ್ನು ಇಂಗಿಸಲಿಲ್ಲ. ಆದ್ದರಿಂದ ಆತ ಮತ್ತೊಂದು ದಗಲ್ಬಾಜಿ ದಂಧೆಗೆ ಕೈಯಿಟ್ಟ. 2002-03ರಿಂದೀಚೆಗೆ ಬೆಂಗಳೂರಿನಲ್ಲಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿಯಲ್ಲಿ ಚಿತ್ರಕಲಾ ವಿಭಾಗದ ಸಹಾಯಕ ಕೆಲಸಗಾರನಾಗಿ ವಕ್ಕರಿಸಿಕೊಂಡ. ರಾಜ್ಯದ ಮೂಲೆ ಮೂಲೆಗಳಿಂದ ಅನೇಕ ಸಮಸ್ಯೆಗಳನ್ನು ಹೊತ್ತುಕೊಂಡು ಬರುತ್ತಿದ್ದ ಕಲಾ ಶಿಕ್ಷಕರಿಗೆ 'ಸಾಹೇಬ್ರಿಗೆ ಹೇಳಿ ನಿಮ್ಮ ಕೆಲಸ ಮಾಡಿಸಿಕೊಡುತ್ತೇನೆ' ಎಂದು ತಲೆ ಸವರುತ್ತಾ ಅಮಾಯಕ ಶಿಕ್ಷಕರನ್ನು ಸುಲಿಯಲಾರಂಭಿಸಿದ. ಇದೇ ಅವಧಿಯಲ್ಲಿ ಹಿರಿಯ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಗೆ ಕೊಡಬಾರದ ಕಿರುಕುಳ ಕೊಟ್ಟು ಅವರು ಅವಧಿಗೆ ಮುಂಚೆಯೇ ಸ್ವಯಂನಿವೃತ್ತಿ ತೆಗೆದುಕೊಂಡು ಕಚೇರಿಯಿಂದ ಕಾಲ್ಕೀಳುವಂತೆ ಮಾಡಿದ. ಆ ನಂತರದಲ್ಲಿ ಪ್ರೌಢಶಿಕ್ಷಣ ಮಂಡಳಿಯ ನಿರ್ದೇಶಕರಾದ ಚದ್ರೇ ಶಂಕರಯ್ಯಸ್ವಾಮಿ ಕೂಡ ಈತನ ಅಮೇಧ್ಯ ಸೇವಿಸಿ ಈತನ ಭ್ರಷ್ಟಾಚಾರಕ್ಕೆ, ಸುಲಿಗೆಗೆ ಬೆಂಗಾವಲಾಗಿ ನಿಂತುಬಿಟ್ಟರು. ಅಲ್ಲಿಯತನಕ ಅನಧಿಕೃತವಾಗಿ ಕೆಲಸ ಮಾಡುತ್ತಿದ್ದ ಶಿವಪ್ಪ ಹಾರೋಮುಚಡಿ ಎಂಬ ಫೋರ್ಜರಿ ವೀರನನ್ನು 23.11.2006ರಂದು ಚಿತ್ರಕಲಾ ವಿಭಾಗಕ್ಕೆ ವೇತನ ಸಹಿತವಾಗಿ ಅಧಿಕೃತವಾಗಿ ನೇಮಕ ಮಾಡಿಕೊಂಡುಬಿಟ್ಟರು. ಅಲ್ಲಿಂದಾಚೆಗೆ ಈತ ಅಕ್ಷರಶಃ ಇಲಾಖೆಯನ್ನು ಆಳಲಾರಂಭಿಸಿದ.


ಜಂಗಿ

ಈ ಚದ್ರೇ ಶಂಕರಯ್ಯಸ್ವಾಮಿ-ಶಿವಪ್ಪ ಹಾರೋಮುಚಡಿ ಎಂಥ ಘಾತುಕ ಜೋಡಿ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ನೋಡಿ. ಇಬ್ಬರೂ ಸೇರಿಕೊಂಡು ಚದ್ರೇ ಶಂಕರಯ್ಯನ ಹೆಸರಿನಲ್ಲಿ ದಿನಾಂಕ 07.11.2007ರಂದು ಒಂದು ಸುತ್ತೋಲೆ ಹೊರಡಿಸುತ್ತಾರೆ. ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಚಿತ್ರಕಲಾ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸುವುದಕ್ಕಾಗಿ ಶಿಕ್ಷಕರು ತಮ್ಮ ವಿದ್ಯಾರ್ಹತೆ, ಅನುಭವಗಳನ್ನು ಸಲ್ಲಿಸಲು ಅದರಲ್ಲಿ ಕೋರುತ್ತಾರೆ. ಇದರ ಉದ್ದೇಶವೇನೆಂದರೆ, ಅರ್ಹರಾದ ಶಿಕ್ಷಕರಿಗೆ ಪ್ರಮೋಷನ್ ನೀಡುವುದು. ಇದಾದ ಐದೇ ದಿನಕ್ಕೆ, ಅಂದರೆ 11.07.2007ರಂದು ಜೇಷ್ಠತಾ ಪಟ್ಟಿಯನ್ನೂ ಬಿಡುಗಡೆಗೊಳಿಸುತ್ತಾರೆ. ಅದರಲ್ಲಿ ಶಿವಪ್ಪ ಹಾರೋಮುಚಡಿಯ ಹೆಸರೂ ಇರುತ್ತದೆ! ವಾಸ್ತವ ಏನೆಂದರೆ ಕರ್ನಾಟಕದಲ್ಲಿ ಒಟ್ಟು ಮೂರೂವರೆ ಸಾವಿರ ಚಿತ್ರಕಲಾ ಶಿಕ್ಷಕರಿದ್ದಾರೆ. ಅವರೆಲ್ಲರಿಗೂ ಈ ಸುತ್ತೋಲೆಯನ್ನು ಕಳಿಸಬೇಕಿತ್ತು, ಆದರೆ, ಈ ಚದ್ರೆ-ಶಿವಪ್ಪ ಜೋಡಿ ಮಾಡಿದ್ದೇನೆಂದರೆ, ಕೇವಲ 650 ಶಿಕ್ಷಕರಿಂದ ದುಡ್ಡು ಕಿತ್ತುಕೊಂಡು ಅವರಿಗಷ್ಟೇ ಸುತ್ತೋಲೆ ಕಳಿಸಿದ್ದಾರೆ. ಆಮೇಲೆ ಎರಡನೇ ಬಾರಿ ಮತ್ತೊಂದು ನೋಟೀಸ್ ಕಳಿಸಿ 'ಈ ಹಿಂದೆ ಸುತ್ತೋಲೆ ಕಳಿಸಿದ್ದೆವು, ಅದಕ್ಕೆ ತಾವು ಉತ್ತರಿಸಿಲ್ಲ' ಎಂದು ಇನ್ನೊಂದು ಸುತ್ತೋಲೆ ಹೊರಡಿಸಿದ್ದಾರೆ. ಆದರೆ, ಅದನ್ನೂ ಯಾರಿಗೂ ಕೊಟ್ಟಿಲ್ಲ, ಕನಿಷ್ಠ ನೋಟೀಸ್ ಬೋರ್ಡಿಗೂ ಹಾಕಿರಲಿಲ್ಲ. ಕೊನೆಗೆ, ಯಾವುದೇ ವಿದ್ಯಾರ್ಹತೆಯಾಗಲೀ, ಸೀನಿಯಾರಿಟಿಯಾಗಲೀ ಏನೂ ಇಲ್ಲದಿದ್ದರೂ ಶಿವಪ್ಪ ಹಾರೋಮುಚಡಿ ಎಂಬ ಫೋರ್ಜರಿ ವೀರನಿಗೆ ಪ್ರಮೋಶನ್ ನೀಡಲಾಗುತ್ತದೆ. ಇವನಿಗಿಂತ ಮುಂಚೆ 1972, 1974, 1982, 1984ರಲ್ಲೇ ಇಲಾಖೆಗೆ ಸೇರಿಕೊಂಡ, ಇವನಿಗಿಂತಲೂ ಹೆಚ್ಚಿನ ವಿದ್ಯಾಭ್ಯಾಸ ಮಾಡಿರುವ ಎಷ್ಟೋ ಶಿಕ್ಷಕರಿದ್ದರೂ ಅವರೆಲ್ಲರನ್ನು ವಂಚಿಸಿ ಈ ಫೋರ್ಜರಿ ವೀರನಿಗೆ ಪ್ರಮೋಶನ್ ನೀಡಿದ್ದಾರೆ ಚದ್ರೇ ಶಂಕರಸ್ವಾಮಿ. ಈ ಅವ್ಯವಹಾರದಲ್ಲಿ ಚದ್ರೇ ಶಂಕರಸ್ವಾಮಿ ಎಷ್ಟು ಸಗಣಿ ತಿಂದಿದ್ದಾನೆ ಎಂಬುದು ನಿಷ್ಪಕ್ಷಪಾತ ತನಿಖೆಯಿಂದ ಮಾತ್ರವೇ ಹೊರಬೀಳಬೇಕಿದೆ.

ಈ ಖದೀಮ ಜೋಡಿ ಈ ಅವ್ಯವಹಾರ ನಡೆಸುವಾಗ ಇನ್ನೊಂದು ಕುತಂತ್ರವನ್ನು ಅನುಸರಿಸಿದೆ. ಅದೆಂದರೆ, 'ಪ್ರಮೋಷನ್ ಕೇಳಿದರೆ ನೀರು ನೆರಳು ಇಲ್ಲದ ಜಾಗಕ್ಕೆ ವರ್ಗಾವಣೆ ಮಾಡಿಬಿಡುತ್ತೇವೆ' ಎಂದು ಬೆದರಿಸಿ ಹಲವಾರು ಶಿಕ್ಷಕರಿಂದ 'ನಮಗೆ ಪ್ರಮೋಷನ್ ಬೇಡ' ಎಂದು ಮುಚ್ಚಳಿಕೆ ಬರೆಸಿಕೊಂಡಿದ್ದಾರೆ. ಅದರಲ್ಲೂ ಕೆಲವು ಮಹಿಳಾ ಚಿತ್ರಕಲಾ ಶಿಕ್ಷಕರಂತೂ ಈ ಜೋಡಿಯ ಮೋಡಿಗೆ ಬೆದರಿ ಹಿಂದುಮುಂದು ನೋಡದೇ ಮುಚ್ಚಳಿಕೆಗೆ ಸಹಿ ಮಾಡಿಕೊಟ್ಟಿದ್ದಾರೆ.

ಚಿತ್ರಕಲಾ ಶಿಕ್ಷಕರ ರಾಜ್ಯಮಟ್ಟದ ಸಂಘಟನೆಯೊಂದಿದೆ. ಆದಾದರೂ ಶಿಕ್ಷಕರಿಗಾಗುತ್ತಿರುವ ಈ ಅನ್ಯಾಯವನ್ನು ಖಂಡಿಸಬೇಕಿತ್ತು, ಶಿವಪ್ಪ ಹಾರೋಮುಚಡಿ ಮತ್ತು ಚದ್ರೇ ಶಂಕರಯ್ಯಸ್ವಾಮಿ ಜೋಡಿಗೆ ಬೀದಿಯಲ್ಲಿ ನಿಲ್ಲಿಸಿ ಬಡಿದು ಹಾಕಬೇಕಿತ್ತು. ದುರಂತ ಎಂದರೆ ಅದೂ ಕೂಡ ಏನೂ ನಡೆದೇ ಇಲ್ಲವೆಂಬಂತೆ ಬಾಯ್ಮುಚ್ಚಿಕೊಂಡು ಕುಳಿತಿದೆ. ಅದಕ್ಕೂ ಒಂದು ಕಾರಣವಿದೆ. ಈ ಸಂಘಟನೆಯ ಇಬ್ಬರು ಪದಾಧಿಕಾರಿಗಳಾದ ಜೆ.ಎಂ.ಜಂಗಿ ಮತ್ತು ಎಂ.ಎ.ಕಂಠಿಯವರೂ ಈ ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆ. ಚದ್ರೇ ಶಂಕರಯ್ಯ ಈ ಇಬ್ಬರು ಪದಾಧಿಕಾರಿಗಳಿಗೆ ಸಬ್ ಇನ್ಸ್‌ಪೆಕ್ಟರ್ ಆಗಿ ಪ್ರಮೋಶನ್ ನೀಡುವ ಮೂಲಕ ಅವರನ್ನು ಬುಟ್ಟಿಗೆ ಹಾಕಿಕೊಂಡಿದ್ದಾನೆ. ಈ ಪ್ರಮೋಷನ್ ಎಂಬ ಎಂಜಲು ತಿಂದಿರುವ ಈ ಮಹಾನಾಯಕರು ಚಿತ್ರಕಲಾ ಶಿಕ್ಷಕರಿಗಾಗುತ್ತಿರುವ ಅನ್ಯಾಯ-ದೌರ್ಜನ್ಯಗಳನ್ನು ನೋಡಿಯೂ ನೋಡದಂತೆ ಸುಮ್ಮನಿದ್ದಾರೆ.

ಎಲ್ಲಿಯತನಕ ಅಮಾಯಕ ಚಿತ್ರಕಲಾ ಶಿಕ್ಷಕರು ಈ ಅನ್ಯಾಯಗಳನ್ನು ಸಹಿಸಿಕೊಂಡಿರುತ್ತಾರೆ? ಈಗ ಅವರೆಲ್ಲರೂ ಸೇರಿಕೊಂಡು ರಾಜ್ಯ ಮಟ್ಟದಲ್ಲಿ ಪ್ರತಿಭಟನೆ ನಡೆಸಲು ಸಜ್ಜಾಗುತ್ತಿದ್ದಾರೆ. ಮತ್ತೆ ಕೆಲವು ಶಿಕ್ಷಕರು ಖುದ್ದಾಗಿ ಲೋಕಾಯುಕ್ತರಿಗೆ ದೂರು ಕೊಟ್ಟಿದ್ದಾರೆ. ಇನ್ನು ಕೆಲವರು ನೇರವಾಗಿ ಹೈಕೋರ್ಟಿನಲ್ಲಿ ಮೊಕದ್ದಮೆ ಹೂಡಲು ಸಿದ್ಧತೆ ನಡೆಸಿದ್ದಾರೆ. ಒಟ್ಟಿನಲ್ಲಿ, ಶಿವಪ್ಪ ಹಾರೋಮುಚಡಿ ಮತ್ತು ಚದ್ರೇ ಶಂಕರಯ್ಯ ಶಾಶ್ವತವಾಗಿ ಪರಪ್ಪನ ಅಗ್ರಹಾರ ಜೈಲಿನಲ್ಲಿ ಕಂಬಿಗಳ ಹಿಂದೆ ಕಾಲಕಳೆಯುವ ದಿನ ದೂರ ಇಲ್ಲ ಅನ್ನಿಸುತ್ತಿದೆ.


● ಕುಮಾರ್ ಬುರಡಿಕಟ್ಟಿ

ಹಾರೋಮುಚಡಿಯ ಆಸ್ತಿಯೆಷ್ಟು?

ಶಿವಪ್ಪ ಹಾರೋಮುಚಡಿ ಎಂಬ ಈ ಘಟಿಂಗ ಒಂದು ಕಾಲದಲ್ಲಿ ಎರಡು ಹೊತ್ತಿನ ಊಟಕ್ಕೂ ಪರದಾಡುತ್ತಿದ್ದ. ಈ ಹೊತ್ತು ಏನಿಲ್ಲವೆಂದರೂ ಕೋಟಿಗೆ ತೂಗುತ್ತಾನೆ. ಚಿತ್ರಕಲಾ ಶಿಕ್ಷಕರಿಗೆ ಮಕ್ಮಲ್ ಟೋಪಿ ಹಾಕುತ್ತಾ, ಚದ್ರೇ ಶಂಕರಯ್ಯನ ಜೊತೆಗೂಡಿ ಸರ್ಕಾರಿ ಖಜಾನೆಯನ್ನು ದೋಚುತ್ತಾ ಹಾರೋಮುಚಡಿ ಈ ಹಂತಕ್ಕೆ ಬೆಳೆದುನಿಂತಿದ್ದಾನೆ. ಈ ಹಡಬೆ ದುಡ್ಡಿನಿಂದಲೇ ಈತ ಬೆಂಗಳೂರಿನ ಗಿರಿನಗರದಲ್ಲಿ ಒಂದು 'ಚೇತನಾ ಚಿತ್ರಕಲಾ ಶಾಲೆ'ಯನ್ನು ಪ್ರಾರಂಭಿಸಿದ್ದಾನೆ. ಇದನ್ನು ಚಿತ್ರಕಲಾ ಶಾಲೆ ಎಂದು ಕರೆಯುವುದಕ್ಕಿಂತ 'ಬ್ಲೇಡ್ ಅಂಗಡಿ' ಎಂದು ಕರೆದರೇನೇ ಚೆನ್ನಾಗಿರುತ್ತದೆ. ಏಕೆಂದರೆ, ಈತ ಇದನ್ನು ಸ್ಥಾಪಿಸಿರುವುದು ಚಿತ್ರಕಲೆಯ ಬಗ್ಗೆ ಪಾಠ ಮಾಡುವುದಕ್ಕಲ್ಲ, ಬದಲಿಗೆ ಬಡಬಗ್ಗರನ್ನು ನುಣ್ಣಗೆ ಬೋಳಿಸುವುದಕ್ಕೆ. ಒಬ್ಬೊಬ್ಬ ವಿದ್ಯಾರ್ಥಿಯಿಂದ ಏನಿಲ್ಲವೆಂದರೂ ಐವತ್ತು ಸಾವಿರ ಡೊನೇಷನ್ ಕಿತ್ತುಕೊಂಡೇ ಇಲ್ಲಿ ಪ್ರವೇಶ ನೀಡಲಾಗುತ್ತದೆ.

ಈ ಶಾಲೆ ಸರ್ಕಾರಿ ಅನುದಾನಿತ ಶಾಲೆಯಾಗಿರಲಿಲ್ಲ, ಯಾವಾಗ ಹಾರೋಮುಚಡಿ ಅತ್ತ ಚದ್ರೇ ಶಂಕರಯ್ಯನ ಜೊತೆ ಸೇರಿಕೊಂಡು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಭದ್ರವಾಗಿ ಬೇರೂರಿದನೋ ಇವನ ಶಾಲೆಗೂ ಅನುದಾನಿತ [illegible] ಇವನೇ ಶಾಲೆ ಎಂಬ ಮಾನ್ಯತೆ ಸಿಗುವ ಹಂತಕ್ಕೆ ಬಂದಿದೆ. ಇಲ್ಲೂ ಈತ ತನ್ನ [illegible] ಶಾಲೆಯಲ್ಲಿ ಕಳೆದ ಹತ್ತು ವರ್ಷಗಳಿಂದ ಬಿಡಿಗಾಸಿಗೆ ದುಡಿಯುತ್ತಿರುವ [illegible] ಕಿತ್ತು ಹಾಕಿ ಹೊಸಬರನ್ನು ತುಂಬಿಕೊಳ್ಳಲು ಶುರು ಮಾಡಿದ್ದಾನೆ. [illegible] ...ನೇನೂ ಇಲ್ಲ. ಅದೇ [illegible] ...ವೆಂದರೂ ಆರು [illegible]

ಬಯಲು



ಕತೆ

1

ಶಾಲಾ ದಿನಗಳ ಮುಕ್ತಾಯದ ದಿನಗಳು ಅವು...

ಕೇರಿ ತುಂಬಾ ಹುಡ್ಗರಾದ ನಾವು ಲಗ್ಗೋರಿ, ಚಿನ್ನಿದಾಂಡ, ತೂರಾಬಿಲ್ಲೇ ಆಡ್ತಾ ಕಣದ ಸಾಲಲ್ಲಿ ಮನೆಯ ಸಂದಿಗಳಲ್ಲಿ ಕೇಕೆ ಹಾಕ್ತಾ ಇದ್ವಿ.

ಮಧ್ಯಾಹ್ನದ ನಿದ್ದೆಯಲ್ಲಿದ್ದವರನ್ನ ಗೋಳ್ಹಾಕೊಂಡು, ಬೀದಿಯಿಂದ ಬೀದಿಗೆ, ಕಣದಿಂದ ಕಣಕ್ಕೆ ಬೇಲಿ ಹಾರ್ಕೊಂಡು ಸಂಜೆತನಕ ಕೇರಿ ಜನರಿಂದ ಬೈಯಿಸಿಕೊಂಡೇ ಕಾಲ ಕಳಿತಿದ್ವಿ.

ದಿನಾಲೂ ಹೀಗೆ ನಡೆದ ನನ್ನ ದಿನಚರಿಯಲ್ಲೇ ಇದ್ದಕ್ಕಿದ್ದ ಹಾಗೆ ಒಂದು ಬದಲಾವಣೆಯಾಯಿತು. ನಮ್ಮ ಕೇರಿ ಕುರುಬರ ಬೀರಪ್ಪ ಒಬ್ಬ ಸಣಕಲ ಮನುಷ್ಯನನ್ನು ನಮ್ಮನೆ ಮುಂದೆ ನಿಂದ್ರಿಸ್ಕೊಂಡು, "ಲೇ ತಿಪ್ಪಣ್ಣ ನಿನ್ನ ಮಗ ಕೇರಿ ಹುಡ್ಗರನ್ನ ಕಟ್ಕಕೊಂಡು ಬೆಳಗ್ಗಿನಿಂದ ಸಂಜೆತನಕ ಭಾರೀ ದಾಂದ್ಲಿ ಮಾಡ್ತಾನೆ. ನೋಡು ಇವ್ರು ಶಿವಕುಮಾರ ಅಂಥ, "ಸಂಘ"ದವ್ರು, ದಿನಾ ಬೆಳಿಗ್ಗೆ ಸಾಯಂಕಾಲ ಹುಡ್ಗರಿಗೆ ಯೋಗ ಕಲಿಸ್ತಾರೆ, ಸೂರ್ಯ ನಮಸ್ಕಾರ, ಆಟ, ಲಾಠಿ, ಶಿಸ್ತು ಕಲಿಸ್ತಾರೆ. ನಾಳಿಂದ ಕಳ್ಸು. ಇವ್ರನ್ನ ಇನ್ನ ನಾಲ್ಕೈದು ಮನೆಯವರಿಗೆ ಪರಿಚಯ ಮಾಡ್ಸಿಕೊಟ್ಟು ಬರ್‍ತೀನಿ" ಅಂದು ಹೋದದ್ದೆ.....

ನನ್ನಪ್ಪ ಕಪಾಳಕ್ಕೆ ಎರಡೇಟು ಹೊಡ್ದು ಅವತ್ತು ಸಾಯಂಕಾಲನೇ ನಮ್ಮೂರು ಹರಿಹರದ ಗಾಂಧೀಮೈದಾನದ ದೊಡ್ಡ ಟ್ಯಾಂಕಿನ ಕೆಳಗೆ ಗೂಟಕ್ಕೆ ಬಾವುಟ ಕಟ್ಟಿದ ಜಾಗಕ್ಕೆ ಕರೆತಂದು ಬಿಟ್ಟು ಹೋದ.....

ಅಲ್ಲಿ ನನಗಿಂತ ಚಿಕ್ಕವ್ರು, ನನ್ನ ವಾರ್ಗೆಯವರು, ನನ್ನಪ್ಪನ ವಯಸ್ಸಿನವರು, ನನ್ನಜ್ಜನ ವಯಸ್ಸಿನವರು ಆಡ್ತಾ ಇದ್ರು. ಅವ್ರು ಬೇರ್ಬೇರೆ ಕೇರಿಯವರು ಭರಂಪುರ ಕೇರಿಯಿಂದ ನಾನೊಬ್ನನೇ ಆಡ್ದೆ.... 'ನೀರು-ದಡ', 'ಶಿವಾಜಿ-ಔರಂಗಜೇಬ', ಕಥೆ ಹೇಳಿದ್ರು. ಸೂರ್ಯಂಗೆ ಮುಖ ಮಾಡ್ಸಿ ನಮಸ್ಕಾರ ಹಾಕ್ಸಿದ್ರು... ಕತ್ತಲಾಗ್ತಾಯಿತ್ತು... ಗೂಟದ ಬಾವುಟಕ್ಕೆ ಎದೆ ಮೇಲೆ ಮುಂಗೈಯಗಲಿಸಿ ವಂದಿಸಿದ್ರು.

2

"ಇಲ್ಲಾಡಾದ್ ಬಿಟ್ಟು ಅಲ್ಲೆಲ್ಲೋ ಸಂಘಕ್ಕೆ ಹೋಕ್ತಾನೆ ನೋಡ್ರಲೇ" ಅಂಥಾ ದಿನ ನನ್ನ್ ಕೇರಿ ಹುಡುಗ್ರು ತಮಾಷಿ ಮಾಡ್ತಾ ಇದ್ರು. ತಪ್ಪಿಸಿಕೊಳ್ಳೋಣ ಅಂತ ಒಂದಿನ ತಪ್ಪಿಸ್ಕೊಂಡ್ರೂ ಸಂಘದ ಪ್ರಮುಖ ಶಿವಕುಮಾರ ಅಪ್ಪನ್ ಮುಂದೆ ಪ್ರತ್ಯಕ್ಷನಾಗಿ, "ನಿಮ್ ಹುಡ್ಗ ತುಂಬಾ ಒಳ್ಳೇನು, ಸಂಘಕ್ಕೆ ಬರ್‍ತಾ ಇಲ್ಲ ನೋಡಿ" ಅಂತ ನಮ್ಮಪ್ಪನೆದುರಿಗೆ ಅನ್ನೋನು. ನನಗೆ ಅವ್ನು ಪೋಲೀಸ್ರಾ ಕಂಡು ಅಪ್ಪನ ಹೊಡೆತಕ್ಕೆ ಹೆದರ್ಕೊಂಡು ದಿನಾಲೂ ಸಂಗಕ್ಕೆ ಹೋದೆ...

"ಒಂದು ತಿಂಗಳ ನಂತರ ಬೇಸ್ಗೆ ರಜೆಯಲ್ಲಿ ಶಿಬಿರ ಮಾಡ್ತೀವಿ. ಇಲ್ಲೇ ಕಲ್ಯಾಣ ಮಂಟಪದಲ್ಲಿ, ಒಂದ್ ತಟ್ಟೆ, ಸಣ್ಣ ಲೋಟ, ಜಮ್‌ಖಾನ, ಹೊದಿಕೆ ತಗೊಂಡು ಬರ್ಬೇಕು. ಹಂಗೇನೇ ಬಿಳಿ ಬಣ್ಣದ ಕಾಟನ್ ಫುಲ್‌ಶರ್ಟ್, ದಪ್ಪನೆ ಖಾಕೀ ಚಡ್ಡಿ ಹೊಲ್ಸೋಕೆ, ಊಟೋಪಚಾರ ಸೇರಿ ಆರುನೂರ್ ರೂಪಾಯಿ ಕೊಟ್ಟು ನಾಳೆ ಸಂಘಕ್ಕೆ ಕಳ್ಸಿ" ಎಂದು ಶಾಖಾ ಪ್ರಮುಖ ಹೇಳಿದಾಗಲೇ ನನ್ನಪ್ಪನ ಮುಖ ಸುಟ್ಟು ಕರಕಲಾದ ಇದ್ದಿಲಂತಾಯ್ತು.

ಶಿಬಿರವೂ ಆಯ್ತು.

3

ಅದೊಂದು ದಿನ, ನನ್ನ ಮನೆ ಎದುರಿನ ಇಬ್ರಾಹಿಂ ಸಾಬ್ ಫುಲ್ ಕುಡ್ದು ಕಾರ್ಲ್‌ಮಾರ್ಕ್ಸ್.......... ಅಂಥ ಏನೇನೋ ಇಂಗ್ಲಿಷ್‌ನಲ್ಲಿ ಬಡಬಡಾಯಿಸ್ತಾಯಿದ್ದ, ಆತ ನನ್ನಪ್ಪನ ಗೆಳೆಯ. ನನ್ನನ್ನ ಕರ್‍ದು "ಲೇ ರಂಗ, ನನ್ಸಣ್ಣ್ ಮಗ ಜಜೀ ಇಲ್ಲೇ ಕೇರಿಲಿ ದೊಡ್ಡ್‌ದೊಡ್ಡ್ ಹುಡ್ಗರೊಟ್ಟಿಗೆ ಸೇರ್ಕೊಂಡು ಗುಡ್ಡಾದೋದನ್ನ ಕಲ್ತಾನೆ.... ನೀನದೆಲ್ಲೋ ಆಡಕೋಕ್ತಿಯಲ್ಲ, ಅಲ್ಗೆ ಅವ್ನ ಕರ್ಕೊಂಡೋಗು" ಅಂದ್ರು.

ಹೆಚ್ಚುಕಮ್ಮಿ ಒಂದೇ ವಾರ್ಗೆಯವ್ರಾದ ನಮ್ಮಿಬ್ಬರಲ್ಲಿ ಬಹುಷ್ಯ ಇಬ್ರಾಹಿಂ ಸಾಬ್ರಿಗೆ ನಾನೇ ಅವ್ರ ಮಗನಿಗಿಂತಾ 'ಬೌದ್ಧಪ್ರಮುಖ್'ನಾಗಿ ಕಂಡಿರಬೇಕು....

ಆಗಾಗ್ಲೇ ವಿದ್ಯಾರಣ್ಯ ಶಾಖೆಯ ಶಾಖಾಪ್ರಮುಖನಾದ ನಾನು ಜಿಬೀಯ ಮನವೊಲಿಸಿ ದಿನಾಲೂ ಶಾಖೆಗೆ ಕರ್‍ದುಕೊಂಡು ಹೋದೆ.

ಒಂದನೇ ದಿನ....

ಎರಡನೇ ದಿನ....

ಮೂರನೇ ದಿನ....

ನಾನು ಸಾಮಾನ್ಯ ಸ್ವಯಂ ಸೇವಕನಾದೆ.

ಶಾಖೆಯ ಪ್ರಮುಖ ಆಟವಾದ
ಶಿವಾಜಿ-ಔರಂಗ್‌ಜಬ್
ಆಟದಲ್ಲಿ ಶಿವಾಜಿಯೂ
ಆಗಲಿಲ್ಲ,
ಔರಂಗ್‌ಜೇಬನೂ
ಆಗಲಿಲ್ಲ, ಔರಂಗ್‌ಜೇಬನ
ಸೈನ್ಯದಲ್ಲಿ ಶಿವಾಜಿ
ಸೈನಿಕರು ಚುಚ್ಚಿದ
ಭರ್ಜಿಗೆ ಸಾಯುವ
ಸೈನಿಕನಾದೆ.

ಮತ್ತೆ ಬದುಕಿದೆ
ಧ್ವಂಸಗೊಂಡ ಆಲಯದಲ್ಲಿ,
ದೀಪ, ಆರಿದೆ
ಹುಳಗಳ ಹಾರಾಟ
ಬಟಾ ಬಯಲಿದೆ.
ನಿತ್ಯ ಪ್ರಾರ್ಥನೆ.

●ಮಾದರ ರಂಗ, ಹರಿಹರ

20-20 ಕ್ರಿಕೆಟ್


ಯಾವ ವ್ಯವಧಾನವೂ ಇಲ್ಲದೆ
ಕಾತರಿಸಿದ್ದಾರೆ
ಸ್ಖಲನದ ಸುಖಕ್ಕೆ
ಉಳಿಯುವುದೆ ರೋಮಾಂಚನಕ್ಕೆ ಬೆಲೆ
ಪ್ರತಿಕ್ಷಣದ ಬಯಕೆಗೆ

ಬೇಕಿಲ್ಲ ಆಗಾಗ ಅನುನಯದ ಸ್ಪರ್ಶ
ಮೆಲುಮಾತು ಉಗುರ ಗುರುತು
ನಿಧಾನಕ್ಕೆ ಬಿಸಿ ಏರಿ ತುತ್ತತುದಿ
ತಲುಪಿದ ಹಾಗಲ್ಲ
ತಂಗಾಳಿಯ ನೆನಪನ್ನೂ ಒದ್ದು
ಕೊತಕೊತನೆ ಕುದಿಯುತ್ತಿರುವ
ಅತೃಪ್ತ ಮನಸ್ಸುಗಳ ಪಾಕ


ಧ್ಯಾನಸ್ಥ ಚಿತ್ತವನು ಅನುಕ್ಷಣವು
ಕದಡಿ ನೇರ ಫಲಿತಕ್ಕೆ
ಜಿಗಿವ ಹುನ್ನಾರ!

ಇವರು ಭಾವರಹಿತ ಯಂತ್ರ ಮಾನವರೋ?
ದೀಪಕ್ಕೆ ಡಿಕ್ಕಿಹೊಡೆದು
ಬೀಳುತ್ತಿರುವ ಪತಂಗಗಳೋ?
ಇದು ಪ್ರಿಯತಮೆಯ ಒಲುಮೆಯೋ
ಕ್ಷಣಿಕ ಸುಖದ ಕುಲುಮೆಯೋ?

-ಡಾ.ಸಿ. ರವೀಂದ್ರನಾಥ್,
ಮೈಸೂರು




ಶ್ರೀಕಾಂತ ಕುಲಕರ್ಣಿ


ಸಿದ್ದು ಸವದಿ


ಶಿವಪ್ಪ ಅಟಲಟ್ಟಿ


ಎಂ.ಎಂ.ಗುಳಪ್ಪನವರ್

ಜಮಖಂಡಿ: ತಾಲ್ಲೂಕು ಪಂಚಾಯ್ತಿಯಲ್ಲಿ ಹಲಾಲ್‌ಕೋರರ ಹಾವಳಿ

ಜಮಖಂಡಿ ತಾಲ್ಲೂಕಿನ ತೇರದಾಳದ ಬಿಜೆಪಿ ಶಾಸಕ ಸಿದ್ದು ಸವದಿಯ ನಿಯತ್ತಿನ ಗುಲಾಮನಂತಿರುವ ಎಂ.ಎಂ. ಗೂಳಪ್ಪನವರ ಎಂಬ ಆಸಾಮಿ ಇಲ್ಲಿನ ತಾಲ್ಲೂಕ್ ಪಂಚಾಯ್ತಿಗೆ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಬಂದಾಗಿನಿಂದಲೂ ಈ ತಾಲ್ಲೂಕ್ ಪಂಚಾಯ್ತಿ ಭ್ರಷ್ಟರ ಪಾಲಿಗೆ ಹುಲ್ಲುಗಾವಲಿನಂತಾಗಿ ಹೋಗಿದೆ. ಅಭಿವೃದ್ಧಿ ಯೋಜನೆಗಾಗಿ ಹರಿದುಬರುತ್ತಿರುವ ಕೋಟ್ಯಂತರ ರೂಪಾಯಿ ಹಣ ಕಮಿಷನ್ ರೂಪದಲ್ಲಿ ಅಧಿಕಾರಿಗಳ ತಿಜೋರಿ ಸೇರುತ್ತಿದೆ. ತಾಲ್ಲೂಕಿನ ಬಹುಪಾಲು ಯೋಜನೆಗಳನ್ನು ರೂಪಿಸುವ, ಅನುಷ್ಠಾನಗೊಳಿಸುವ ಈ ಇಲಾಖೆ ಈಗ ಕಳ್ಳರ, ಖದೀಮರ ಕೂಟವಾಗಿದೆ. ದುರ್ಬಿನು ಹಾಕಿ ಹುಡುಕಿದರೂ ಇಲ್ಲಿ ಪಂಚಾಯತ್ ರಾಜ್ಯ ಇಲಾಖೆಯ ಒಂದೇ ಒಂದು ನಿಯಮಾವಳಿ ಕಟ್ಟುನಿಟ್ಟಾಗಿ ಪಾಲನೆಯಾಗುತ್ತಿರುವುದು ಕಂಡುಬರುವುದಿಲ್ಲ.

ಅತ್ಯಂತ ಕಡುಬಡವರಿಗೊಂದು ಸೂರು ಒದಗಿಸುವ ಉದ್ದೇಶದಿಂದ ಜಾರಿಗೆ ತಂದಿರುವ ಆಶ್ರಯ ಯೋಜನೆ ಇಲ್ಲಿನ ಜನರಿಗೆ ಆಶ್ರಯ ನೀಡುತ್ತಿಲ್ಲ ಈ ಗೂಳಪ್ಪನವರನ ಎತ್ತುವಳಿಯಿಂದಾಗಿ ಬಡಜನರ ಪಾಲಿಗೆ ಕಂಟಕಪ್ರಾಯವಾಗಿ ಪರಿಣಮಿಸಿದೆ. ಯೋಜನೆಗೆ ಸರಿಯಾದ ಫಲಾನುಭವಿಗಳನ್ನು ಆಯ್ಕೆ ಮಾಡದೇ ದುಡ್ಡು ಕೊಡುವ ಗಿರಾಕಿಗಳ ಹೆಸರಿಗೆ ಮನೆಗಳನ್ನು ಕಟ್ಟಿಸಿ ಕೊಡಲಾಗುತ್ತಿದೆ. ಗ್ರಾಮ ಪಂಚಾಯತಿಯ ಸದಸ್ಯರು ಕಾರ್ಯದರ್ಶಿಗಳು ಒಂದು ಮನೆ ಮಂಜೂರು ಮಾಡಲು ಎರಡು ಸಾವಿರದಿಂದ ಐದು ಸಾವಿರ ರೂಪಾಯಿಗಳವರೆಗೂ ಗೆಬರಿಕೊಂಡು ಫಲಾನುಭವಿಗಳ ಆಯ್ಕೆ ಮಾಡುತ್ತಾರೆ. ಅಲ್ಲದೆ ಬಿಲ್‌ಗಾಗಿ ತಾ.ಪಂ.ಗೆ ಬಂದಾಗ ಇಲ್ಲೂ ಸಾವಿರ ರೂಪಾಯಿಗಳನ್ನು ಪೀಕಲೇಬೇಕು. ಇದು ಇಲ್ಲಿನ ಅಘೋಷಿತ ನಿಯಮ. ಇನ್ನೂ ನುಂಗುವ ಎಲ್ಲ ರೀತಿಯ ಕಲೆಯನ್ನು ಕರಗತ ಮಾಡಿಕೊಂಡಿರುವ ಇಲ್ಲಿನ ಅಧಿಕಾರಿಗಳು ಒಂದು ಸಲ ಕಟ್ಟಿದ ಯಾರದೋ ಮನೆ ಮುಂದೆ ಯಾರ್‍ಯಾರನ್ನೋ ನಿಲ್ಲಿಸಿ ಫೋಟೋ ತೆಗೆಸಿ ಅಥವಾ ಕಂಪ್ಯೂಟರ್‌ನಲ್ಲಿ ನಕಲಿ ಫೋಟೋಗಳನ್ನು ಸೃಷ್ಟಿಸಿ ಬಿಲ್ ತೆಗೆದು ನುಂಗಿಹಾಕುವಂತಹ ನೀಚತನಕ್ಕೂ ಇಳಿಯುತ್ತಿದ್ದಾರೆ. ಇದೆಲ್ಲ ಗೂಳಪ್ಪನವರನ ಕಣ್ಣಮುಂದೆಯೇ ನಡೆಯುತ್ತಿದ್ದರೂ ಆತ ಅದನ್ನು ತಡೆಯುವ ಸಣ್ಣ ಯತ್ನವನ್ನು ಮಾಡುತ್ತಿಲ್ಲ, ಬಂದ ಹಣದಲ್ಲಿ ತನ್ನ ಪಾಲನ್ನು ಪಡೆದು ತನ್ಮಯತೆಯಿಂದ ಶಾಸಕರ ಸೇವೆಯಲ್ಲಿ ತಲ್ಲೀನನಾಗಿದ್ದಾನೆ.

ಬಡ ಜನರ ದುಡಿಯುವ ಕೈಗಳಿಗೆ ಉದ್ಯೋಗವನ್ನು ಖಾತ್ರಿ ಪಡಿಸುತ್ತೇವೆಂದು ಡಂಗೂರ ಸಾರುತ್ತ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಉದ್ಯೋಗ ಖಾತ್ರಿ ಯೋಜನೆಯ ಪಾಡಂತೂ ನೋಡುವುದೇ ಬೇಡ. ಈ ಯೋಜನೆಯ ಹೆಸರಲ್ಲಿ ಹರಿದುಬರುತ್ತಿರುವ ಕೋಟ್ಯಂತರ ರೂಪಾಯಿ ದುಡಿಯುವ ಕೈಗಳಿಗೆ ಕೆಲಸವನ್ನು ಖಾತ್ರಿಪಡಿಸುವ ಬದಲಿಗೆ ತಾಲ್ಲೂಕ್ ಪಂಚಾಯ್ತಿನ ಸುಪರ್ದಿಗೆ ಬರುವ ಎಲ್ಲ ಇಲಾಖೆಗಳ ಅಧಿಕಾರಿಗಳ ಜೇಬು ತುಂಬುವುದನ್ನು ಮಾತ್ರ ಖಾತ್ರಿಪಡಿಸುತ್ತಿದೆ. ಸರಿಯಾಗಿ ಉಸ್ತುವಾರಿ ನೋಡಿಕೊಳ್ಳಬೇಕಿದ್ದ ಈ ಗೂಳಪ್ಪನವರ ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳೊಂದಿಗೆ ಸೇರಿ ಇಡೀ ಯೋಜನೆಯನ್ನೇ ಹಳ್ಳಹಿಡಿಸಿ ಬಿಟ್ಟಿದ್ದಾನೆ. ಅರಣ್ಯ ಇಲಾಖೆಯ ಚೌಗಲಾ, ಜಲಾನಯನ ಇಲಾಖೆಯ ಅಂಬಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಚಮಕೇರಿ ಮುಂತಾದ ಕಿರಾತಕ ಅಧಿಕಾರಿಗಳ ಗುಂಪು ಉದ್ಯೋಗ ಖಾತ್ರಿ ಹೆಸರಿನಲ್ಲಿ ಪುಷ್ಕಳವಾಗಿ ಮೇಯುತ್ತಿದೆ. ಜನರಿಗೆ ಕೆಲಸ ಕೊಡುವ ಹೆಸರಲ್ಲಿ ಯೋಜನೆಗಳಿಗೆ ಮಂಜೂರಾತಿಯನ್ನು ಕಾಮಗಾರಿಯನ್ನು ನಡೆಸಲಾಗುತ್ತಿದೆ. ನಂತರ ಈ ಯೋಜನೆಯಲ್ಲಿ ನೋಂದಾಯಿತ ರೂಪಾಯಿ ಹಣ ತೆಗೆಸಿಕೊಂಡು ಬಂದು ಸಹಿ ಮಾಡಿದ್ದಕ್ಕೆ ನೂರು ರೂಪಾಯಿ ಬಿಡಿಗಾಸು ಕೈಗಿಟ್ಟು ಕಳಿಸುತ್ತಿದ್ದಾರೆ. ಯಾವುದೇ ಇಲಾಖೆಗೆ ಹೋದರೂ ಉದ್ಯೋಗ ಖಾತ್ರಿ ಯೋಜನೆಯದು ಇದೇ ಪಾಡು. ಇದು ಬಡವರಿಗೆ ಕೆಲಸ ಕೊಡುವ ಬದಲು ಅಧಿಕಾರಿಗಳ ಹಗಲು ದರೋಡೆಗೆ ಹುಲ್ಲುಗಾವಲನ್ನೇ ಒದಗಿಸಿದೆ.

ದಲಿತರ ಅಭಿವೃದ್ಧಿಗೆ ಮೀಸಲಾದ ಶೇ.18ರಷ್ಟು ಅನುದಾನ ಯಾವ ಗ್ರಾಮ ಪಂಚಾಯತಿಯಲ್ಲೂ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ಪಂಚಾಯತಿ ಮಟ್ಟದ ಮರಿಪುಢಾರಿಗಳ ಚೇಲಾಗಳನ್ನು ಬಳಸಿಕೊಂಡು ಗುಡಿ ಗುಂಡಾರಗಳನ್ನು ಕಟ್ಟಿ ಅದರಲ್ಲಿ ಬಹುಪಾಲು ಹಣವನ್ನು ನುಂಗಿ ಹಾಕಲಾಗುತ್ತಿದೆ. ಈ ಅನುದಾನದಲ್ಲಿ ದಲಿತ ಕೇರಿಗಳಿಂದ ಆರಂಭಿಸಿ ಸವರ್ಣೀಯರ ಕೇರಿಗಳಲ್ಲಿ ರಸ್ತೆಗಳು ನಿರ್ಮಿಸಲಾಗುತ್ತಿದೆ. ಇದನ್ನು ಪರಿಶೀಲಿಸಬೇಕಾದ ಗೂಳಪ್ಪನವರ ಈ ಅವ್ಯವಹಾರಗಳಲ್ಲಿ ನೇರವಾಗಿ ಭಾಗಿಯಾಗಿದ್ದಾನೆ.

ಈ ಹಿಂದೆ ತಾ.ಪಂ.ನ ಅಧ್ಯಕ್ಷೆಯಾಗಿದ್ದ ದಲಿತ ವರ್ಗದ ಗಿಲಿಕಾ ಮೈತ್ರಿಯನ್ನು ನಾಮಕಾವಸ್ತೆ ಅಧಿಕಾರದಲ್ಲಿರಿಸಿ ಉಪಾಧ್ಯಕ್ಷನಾಗಿದ್ದ ವರ್ಧಮಾನ ನ್ಯಾಮಗೌಡ ಅಧಿಕಾರ ಚಲಾಯಿಸುತ್ತ ಬಂದಿದ್ದ. ಅದೂ ಕಮಿಷನ್ ಗಿರಾಕಿಯೇ. ಹೀಗಾಗಿ ಯಾವ ಯೋಜನೆಗಳೂ ಸಮರ್ಪಕವಾಗಿ ಅನುಷ್ಠಾನಗೊಳ್ಳಲಿಲ್ಲ. ಈಗ ಶಿವಪ್ಪ ಅತಾಲಟ್ಟಿ ಅಧ್ಯಕ್ಷನಾಗಿದ್ದಾನೆ. ಈತನಾದರೂ ಈ ಗೂಳಪ್ಪನವರ ನುಂಗಾಟವನ್ನು ನಿಯಂತ್ರಿಸಬೇಕಿದೆ.

● ಮಹಾಲಿಂಗಪ್ಪ ಆಲಬಾಳ





ನ್ಯೂಜಿಲ್ಯಾಂಡ್‌ನಿಂದ ವಿಶೇಷ ವರದಿ

ಸ್ಟ್ರೇಲಿಯಾದಲ್ಲಿ 'Curry Bashing!'

ವ ಹಕ್ಕುಗಳ ಘೋರ ಉಲ್ಲಂಘನೆಯ ದಾಖಲೆಯನ್ನು ಹೊಂದಿರುವ ಆಸ್ಟ್ರೇಲಿಯಾ 'ಕಿರೀಟ'ಕ್ಕೆ ಇನ್ನೊಂದು 'ಗರಿ'ಯನ್ನು ಸೇರಿಸಿಕೊಳ್ಳುತ್ತಿದೆ. ಕಳೆದ ಹನ್ನೆರಡು ಳುಗಳಲ್ಲಿ ಅಲ್ಲಿಯ ಭಾರತೀಯ ವಿದ್ಯಾರ್ಥಿಗಳ ಮೇಲೆ ಸುಮಾರು ಸಾವಿರದ ರು ಹಲ್ಲೆ (Curry Bashing ಎಂದೂ ಕರೆಯಲಾಗುತ್ತದೆ) ಪ್ರಕರಣಗಳು, ತ್ನಗಳು ನಡೆದಿವೆ ಎಂಬ ವರದಿಗಳನ್ನು ನಿರಾಕರಿಸುವ ಅಥವಾ ಅಂತಹ ಹಲ್ಲೆಗಳಿಗೆ ಂಗೀಯ ದ್ವೇಷವೇ ಕಾರಣ ಎಂಬುದನ್ನು ತಳ್ಳಿ ಹಾಕುವ ತಹತಹದಲ್ಲಿ ಆಸ್ಸಿ ರ ಮಗ್ನವಾಗಿದೆ.

Down Under' ಎಂದು ಕರೆಯಲ್ಪಡುವ ಯಾ ದಕ್ಷಿಣ ಗೋಲದ ತುದಿಯಲ್ಲಿರುವ ರಾಷ್ಟ್ರ. ಹಕ್ಕುಗಳ ಘೋರ ಉಲ್ಲಂಘನೆಯ ದಾಖಲೆಯನ್ನು ರುವ ಈ ದೇಶ ತನ್ನ 'ಕಿರೀಟ'ಕ್ಕೆ ಇನ್ನೊಂದು ನ್ನು ಸೇರಿಸಿಕೊಳ್ಳುತ್ತಿದೆ. ಕಳೆದ ಹನ್ನೆರಡು ತಿಂಗಳು ಅಲ್ಲಿಯ ಭಾರತೀಯ ವಿದ್ಯಾರ್ಥಿಗಳ ಮೇಲೆ ರು ಸಾವಿರದ ನಾನೂರು ಹಲ್ಲೆ (Curry Bash ಂದೂ ಕರೆಯಲಾಗುತ್ತದೆ) ಪ್ರಕರಣಗಳು, ಪ್ರಯತ್ನಗಳು ಎಂಬ ವರದಿಗಳನ್ನು ನಿರಾಕರಿಸುವ ಅಥವಾ ಹಲ್ಲೆಗಳಿಗೆ ಜನಾಂಗೀಯ ದ್ವೇಷವೇ ಕಾರಣ ದನ್ನು ತಳ್ಳಿ ಹಾಕುವ ತಹತಹದಲ್ಲಿ ಆಸ್ಸಿ ಸರಕಾರ ಗಿದೆ. ಅಲ್ಲಿಯ ಭಾರತೀಯ ವಿದ್ಯಾರ್ಥಿಗಳಲ್ಲಿ ಮಂದಿ ಮೆಲ್ಬರ್ನಿನಲ್ಲೇ ಇದ್ದಾರೆ. ಅವರ ಸಂಖ್ಯೆ ತ್ತೈದು ಸಾವಿರ ಎಂಬ ಅಂದಾಜಿದೆ. ಹಾಗಾಗಿ ಯ ದ್ವೇಷದ ಈ ರೀತಿಯ ಅಪರಾಧಗಳಿಗೆ ಕೇಂದ್ರವಾಗಿಬಿಟ್ಟದೆ. ಅಭಿವೃದ್ಧಿ ಹೊಂದಿದ ವೇ ದೇಶದ ವಿಶ್ವವಿದ್ಯಾಲಯಗಳಿಗೆ ಅತ್ಯಧಿಕ ದ ಬರುವುದು ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಂದ. ತಾರಾಷ್ಟ್ರೀಯ' ವಿದ್ಯಾರ್ಥಿಗಳು ಹೆಚ್ಚಿನ ಮಟ್ಟಿಗೆ ದು ಭಾರತದಿಂದ ಮತ್ತು ಚೈನಾದಿಂದ. ಅವರಲ್ಲಿ ತರಷ್ಟೇ ಇರಲು ಸಾಧ್ಯವಿಲ್ಲ, ಶ್ರೀಮಂತರೂ ರೆ. ಅಂತಹ ಭಾರತೀಯ ವಿದ್ಯಾರ್ಥಿಗಳಿಂದ ಆಸ್ಸಿ ಕ್ಕೆ ಬರುತ್ತಿರುವ ಆದಾಯ ಸುಮಾರು ಇಪ್ಪತ್ತು ಕೋಟಿಯಷ್ಟು. ಯಾಕೆಂದರೆ ಈ ಅಂತಾರಾಷ್ಟ್ರೀಯ ಗಳು ಕಟ್ಟುವ ಶುಲ್ಕ ಉಳಿದವರು ತೆರಬೇಕಾದ ನಾಲ್ಕು ಪಟ್ಟು ಜಾಸ್ತಿ. ಈ ಹಲ್ಲೆ ಪ್ರಕರಣಗಳಿಂದ ಮೊಟ್ಟೆಯಿಡುವ ಕೋಳಿಯನ್ನು ಸೀಳುತ್ತಿದ್ದೇವೆಯೆ ಆಸ್ಸಿ ವಿಶ್ವವಿದ್ಯಾಲಯಗಳ ಅಧಿಕಾರಿಗಳು ಆತಂಕ ಕ್ಕೆ ಹಿಸುಕಿಕೊಳ್ಳುತ್ತಿದ್ದರೆ, ಇತ್ತ ಭಾರತದ ಸುದ್ದಿ ಗಳು ಮತ್ತು ರಾಜಕಾರಣಿಗಳು ಮಕ್ಕಳನ್ನು ಮು ಆಸ್ಸಿಗೆ ಕಳುಹಿಸಿರುವ ಭಾರತೀಯ ಶ್ರೀಮಂತ ವರ್ಗದವರಿಗೆ ಹೇಗೆ ಸಹಾಯ ಮಾಡುವುದು ತಲೆ ಕೆಡಿಸಿಕೊಳ್ಳುತ್ತಿವೆ. ಆಸ್ಸಿಗೆ ಹೋಗಿ ಪದವಿ ದ, ದುಡಬೂತಾದ ಸಂಬಳ ತರುವ ಮಲ್ಟಿ ಕಂಪೆನಿಗಳಲ್ಲಿ ಹುದ್ದೆಗಳನ್ನು ಗಿಟ್ಟಿಸಿಕೊಳ್ಳುವ, ಆ ದೇಶದ ಪೌರತ್ವವನ್ನು ಪಡೆದು, ಅಲ್ಲಿಯೇ ದುಕು ಸಾಗಿಸುವ ಕನಸುಗಳನ್ನು ಹೊತ್ತ ಭಾರತೀಯ ಗಳಿಗೆ ಸಹಾಯ ನೀಡಲು ಭಾರತ ಸಾಕಷ್ಟು ಮಾಡುತ್ತಿಲ್ಲ ಎಂದು ಸಕಾರಣವಾಗಿಯೇ ಆಪಾದಿಸ ದೆ. ಈ ಭಾರತೀಯ ವಿದ್ಯಾರ್ಥಿಗಳಲ್ಲಿ ಶೇಕಡಾ ಮಂದಿ ಗುಜರಾತಿನವರಂತೆ. ಹಾಗಾಗಿ ನರೇಂದ್ರ ಅಂತೂ ಕಿಡಿಕಿಡಿಯಾಗಿದ್ದಾರೆ. 2002 ರಲ್ಲಿ ತಮ್ಮ ಗುಜರಾತಿನಲ್ಲಿ ನಡೆದ ನರಮೇಧದ ಬಗ್ಗೆ ದಿವ್ಯಮೌನ ತಾಳಿರುವ, ಅಥವಾ ಸಮರ್ಥಿಸಿ ದ ಈ ಮುಖ್ಯಮಂತ್ರಿ ತಮ್ಮ ದೇಶದ ಶ್ರೀಮಂತ ಗಳ ಮೇಲೆ ಜನಾಂಗೀಯ ದ್ವೇಷದ ಕಾರಣಕ್ಕೆ ದ ಆಕ್ರಮಣಕ್ಕೆ ರೋಷದಿಂದ ಪ್ರತಿಕ್ರಿಯಿಸಿದ್ದಾರೆ.

ಇರಲಿ, ಮಹಾ ದುರಹಂಕಾರದ ಆಸ್ಸಿ ಮಾಡುತ್ತಿರುವುದು ಕ್ಷಮ್ಯವೇನಲ್ಲ. ಹೊರದೇಶಕ್ಕೆ ಹೋಗಿ ವಿದ್ಯಾಭ್ಯಾಸ ಪಡೆದು, ಉತ್ತಮ ಬದುಕು ಸಾಗಿಸುವ ಪ್ರಯತ್ನ ಹಾಗಾದರೆ ಸರಿಯಲ್ಲವೇ ಎಂಬ ಪ್ರಶ್ನೆ ಈ ಲೇಖನದ ವ್ಯಾಪ್ತಿಯ ಆಚೆಗಿರುವಂತದ್ದು. ಜನಾಂಗೀಯ ದ್ವೇಷದ ಪ್ರಕರಣಗಳು ಇಷ್ಟು ಸಲೀಸಾಗಿ ಹೇಗೆ ನಡೆಯಲು ಸಾಧ್ಯವಾಗುತ್ತಿದೆ, ಆಸ್ಸಿ ಸರಕಾರ ಅದಕ್ಕೆ ಕೊಡುತ್ತಿರುವ ಕುಮ್ಮಕ್ಕು ಯಾವ ನೆಲೆಯಿಂದ ಬಂದಿದೆ ಎಂಬುದರತ್ತ ನೋಡುವ ಒಂದು ಪ್ರಯತ್ನ ಮಾತ್ತ ಇದರ ಉದ್ದೇಶ.

ಆಶ್ರಯ ಕೋರಿ ಬಂದರೆ ಸೀದಾ ಸೆರೆಮನೆಗೆ!

"ಭಯೋತ್ಪಾದಕ"ರನ್ನು ಬಂಧಿಸಿಡಲು ಗ್ವಾಂಟನಾಮೋ ನಲ್ಲಿ ಕಾರಾಗೃಹಗಳನ್ನು ನಿರ್ಮಿಸುವ ಸುಮಾರು ಇಪ್ಪತ್ತು ವರುಷಗಳ ಹಿಂದೆಯೇ ಆಸ್ಸಿ ಸರಕಾರ ರಾಜಕೀಯ ಆಶ್ರಯ ಕೋರಿ ಬರುವವರನ್ನು ಅನಿರ್ದಿಷ್ಟ ಕಾಲದ ಮಟ್ಟಿಗೂ ಸೆರೆಯಲ್ಲಿಡಬಲ್ಲ ಕಾಯಿದೆಯನ್ನು ಜಾರಿಗೊಳಿಸಿತ್ತು. ಆಶ್ರಯ ಕೋರಿ ಬಂದವರನ್ನು ಕೈದಿಗಳನ್ನಾಗಿ ಪರಿಗಣಿಸಬಾರದು ಎಂಬ ವಿಶ್ವಸಂಸ್ಥೆಯ ನಿರ್ದೇಶನಕ್ಕೆ ಕ್ಯಾರೆ ಎನ್ನದ ದುರಹಂಕಾರ ಆಸ್ಸಿ ಸರಕಾರದ್ದು. ಈ ಸೆರೆಮನೆಗಳನ್ನು ನಿರ್ವಹಿಸುತ್ತಿದ್ದ ಖಾಸಗಿ ಕಂಪೆನಿಗಳು ಅಂತಾರಾಷ್ಟ್ರೀಯ ಮಾನವ ಹಕ್ಕುಗಳನ್ನು ಗಾಳಿಗೆ ತೂರಿದ್ದವು. 2006 ರಲ್ಲಿ ಆಸ್ಸಿ ಸರಕಾರ ಹನ್ನೊಂದು ವರ್ಷದ ಇರಾನಿ ಬಾಲಕ ಶಯನ್ ಬದ್ರಾಜೆಯನ್ನು ಅವನ ಐದರಿಂದ ಏಳು ವರ್ಷದ ತನಕ ಕಾನೂನುಬಾಹಿರವಾಗಿ ಸೆರೆಯಲ್ಲಿಟ್ಟು ಅನೂಹ್ಯ ರೀತಿಯ ಮಾನಸಿಕ ಆಘಾತಕ್ಕೆ ಒಳಪಡಿಸಿದ್ದಕ್ಕಾಗಿ ನೂರು ಸಾವಿರ ಡಾಲರ್ ಹಣವನ್ನು ದಂಡವಾಗಿ ತೆರಲೇಬೇಕಾದ ಇಕ್ಕಟ್ಟಿಗೆ ಸಿಕ್ಕಿತ್ತು. ಆಘಾತದ ಪರಿಣಾಮವಾಗಿ ಆ ಬಾಲಕ ತಿನ್ನಲೂ ಆಗದೆ, ಮಾತಾಡಲೂ ಆಗದೆ ಜರ್ಜುರಿತನಾಗಿ ಹಲವಾರು ಬಾರಿ ಆಸ್ಪತ್ರೆಯನ್ನು ಸೇರಬೇಕಾಯಿತು. ಸೆರೆಯಲ್ಲಿ ಆತ್ಮಹತ್ಯೆಯ ಪ್ರಯತ್ನಗಳನ್ನು, ದೈಹಿಕ ಮತ್ತು ಮಾನಸಿಕ ಆಘಾತಗಳನ್ನು, ಸ್ವದಂಡನೆಯ ಪ್ರಕರಣಗಳನ್ನು ಕಣ್ಣಾರೆ ಕಂಡಿದ್ದ 2004ರಲ್ಲಿ ಆಸ್ಸಿ ಸರಕಾರ ಆಶ್ರಯ ಕೋರಿ ಬರುವವರಿಗೆ ಸಂಬಂಧ ಪಟ್ಟಂತೆ ಒಂದೇ ದಿನ ಎರಡು ತೀರ್ಪುಗಳನ್ನು ಜಾರಿ ಮಾಡಿತು. ಒಂದು ಕಾರಾಗೃಹಗಳಲ್ಲಿ ಜಾರಿಯಲ್ಲಿದ್ದ ಅಮಾನವೀಯ ವರ್ತನೆಗಳಿಂದ ಕಾರಾಗೃಹಗಳೇ ಕಾನೂನು ಬಾಹಿರವಾಗುವುದಿಲ್ಲ, ಎರಡನೆಯದಾಗಿ ಆಶ್ರಯ ಕೋರಿ ಬಂದವರನ್ನು ಆಸ್ಸಿ ಸರಕಾರ ನಿರಾಕರಿಸಿದ ಪಕ್ಷದಲ್ಲಿ ಅವರು ಬೇರೆ ದೇಶದಲ್ಲಿ ಆಶ್ರಯ ಸಿಗುವ ತನಕವೂ ಅಥವಾ ಅನಿರ್ದಿಷ್ಟ ಕಾಲದ ತನಕವೂ ಅವರನ್ನು ಸೆರೆಯಲ್ಲಿಡುವ ಹಕ್ಕು ತನಗಿದೆ ಎಂಬುದು. ಬಾಕ್ಸ್ಟರ್ ಸೆರೆಮನೆಯಲ್ಲಿ ವಲಸಿಗರನ್ನು ನಡೆಸಿಕೊಳ್ಳುವ ಅಮಾನವೀಯ ರೀತಿಯನ್ನು ಖಂಡಿಸಿ ಹಲವಾರು ಪ್ರತಿಭಟನೆಗಳು, ಗಲಭೆಗಳು ನಡೆದಿದ್ದವು. ಮಾನವ ಹಕ್ಕುಗಳ ಕಾರ್ಯಕರ್ತರು ಈ ಕೇಂದ್ರಗಳ ಅಸ್ತಿತ್ವದ ವಿರುದ್ಧ ನಡೆಸಿದ ಪ್ರದರ್ಶನಗಳು ವ್ಯರ್ಥವಾದವು. ಆಸ್ಸಿಯ ಮುಖ್ಯಧಾರೆ ರಾಜಕೀಯ ನೀತಿ ಹೆಚ್ಚಿನ ಮಟ್ಟಿಗೆ ಬಲಪಂಥೀಯ ಧೋರಣೆಯನ್ನೇ ತಳೆದಿತ್ತು. ಒನ್ ನೇಶನ್ ಆಸ್ಟ್ರೇಲಿಯನ್ ಪಾರ್ಟಿಯ ನಾಯಕಿ ಪೌಲೀನ್ ಹ್ಯಾನ್ಸನ್ 1998 ರಲ್ಲಿ ಕ್ವೀನ್ಸ್ ಲ್ಯಾಂಡಿನ ಚುನಾವಣೆಯನ್ನು ಗೆದ್ದಿದ್ದೇ "ಆಸ್ಟ್ರೇಲಿಯಾವನ್ನು ಏಶಿಯನ್ನರು ಆಕ್ರಮಿಸಿಕೊಳ್ಳುತ್ತಿದ್ದಾರೆ" ಎಂಬ ಭಯವನ್ನು ಹುಟ್ಟುಹಾಕುವುದರ ಮೂಲಕ.

ಸೆಪ್ಟೆಂಬರ್ 11 ರ ನಂತರದ ಆಸ್ಸಿ ಸಮಾಜ

ನೊಬೆಲ್ ಪ್ರಶಸ್ತಿ ವಿಜೇತ ಲೇಖಕ ಜೆ. ಎಮ್. ಕುಟ್ಸೀ ತನ್ನ Diary of a Bad year ಕೃತಿಯಲ್ಲಿ ತನ್ನ ನೆಲದಲ್ಲಿ ಭಯೋತ್ಪಾದಕ ಚಟುವಟಿಕೆ ನಡೆದಿಲ್ಲದಿದ್ದರೂ ಸಹ ಆಸ್ಸಿ ಹೇಗೆ ಸೆಪ್ಟೆಂಬರ್ ಹನ್ನೊಂದರ ಪ್ರಕರಣವನ್ನು ಮಾನವ ಹಕ್ಕುಗಳನ್ನು ಇನ್ನಷ್ಟು ರಾಜಾರೋಷವಾಗಿ ಉಲ್ಲಂಘಿಸುವ ತನ್ನ ಹುನ್ನಾರಕ್ಕೆ ಬಳಸಿಕೊಂಡಿತು ಎಂಬುದರ ಬಗ್ಗೆ ಮಹತ್ವದ ಒಳನೋಟಗಳನ್ನು ನೀಡುತ್ತಾನೆ. ಬಿಳಿಯರಲ್ಲದ ಪ್ರಯಾಣಿಕರು ತನ್ನ ನೆಲದಲ್ಲಿ ಇಳಿದು ಇನ್ನೊಂದು ವಿಮಾನ ಹತ್ತಲೂ ಸಹ ಆಸ್ಸಿ ಸರಕಾರದ ವೀಸಾ ಪಡೆಯಲೇಬೇಕು ಎಂಬ ಕಾಯಿದೆಯನ್ನು ಆಸ್ಸಿ ಸರಕಾರ ಜಾರಿಗೊಳಿಸಿತು. ಯಾವ ಯುರೋಪಿಯನ್ ದೇಶವೂ ಆ ನಿರ್ಬಂಧವನ್ನು ಹೇರಿದಂತಿಲ್ಲ. ಎರಡನೆಯದಾಗಿ, 'ಭಯೋತ್ಪಾದನೆ'ಯನ್ನು ತಡೆಯುವ ದಿಕ್ಕಿನಲ್ಲಿ ಎಂದು ಹೇಳಿಕೊಳ್ಳುತ್ತಾ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಕಾಯಿದೆಗೂ ಬಲಪಂಥೀಯ ಆಸ್ಸಿ ಸರಕಾರ ಅಸ್ತು ಎಂದಿತು. ಕಾಯಿದೆಯ ವಿರುದ್ಧ ಪ್ರತಿಭಟನಾ ನಿಲುವನ್ನು ಹೊಂದಿದ್ದಾರೆ ಎಂಬ ಅಥವಾ 'ಭಯೋತ್ಪಾದನೆಗೆ ಸಮರ್ಥನೆ' ನೀಡುವ ನಿಲುವನ್ನು ಹೊಂದಿದ್ದಾರೆ ಎಂಬ ಆಪಾದನೆಯನ್ನು ಹೊರಿಸಿ ಹಲವಾರು ಮಂದಿಯನ್ನು ಗೃಹಬಂಧನದಲ್ಲಿ ಯಾವ ವಿಚಾರಣೆಯನ್ನೂ ನಡೆಸದೆ ಇರಿಸಲಾಯಿತು. ಇದೆಲ್ಲ 'ಬೆಳವಣಿಗೆ'ಗಳನ್ನು ಗಮನಿಸಿದ ಹಲವಾರು ನಾಗರಿಕ ಹಕ್ಕು ಸಂಸ್ಥೆಗಳು ಆಸ್ಟ್ರೇಲಿಯಾ ಸರಕಾರ ತಪ್ಪು ಹಾದಿಯಲ್ಲಿ ಹೆಜ್ಜೆಯಿಡುತ್ತಿದೆ ಎಂದು ಎಚ್ಚರಿಸಿದ್ದರು. ನಾಗರಿಕ ಹಕ್ಕುಗಳನ್ನು, ಮಾನವ ಹಕ್ಕುಗಳನ್ನು ರಕ್ಷಿಸಬಲ್ಲ ಕಾಯಿದೆಗಳನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸಲಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ್ದರು. ಬೆಂಗಳೂರು ಮೂಲದ ಡಾ. ಹನೀಫ್ ಅವರ ಪ್ರಕರಣದಲ್ಲಿ ಆಸ್ಟ್ರೇಲಿಯಾದ ಪೊಲೀಸ್ ವ್ಯವಸ್ಥೆ ವರ್ತಿಸಿದ ರೀತಿ ಅತ್ಯಂತ ಹೇಯವಾಗಿತ್ತು. ಮಿಂಚಿನ ವೇಗದಲ್ಲಿ ಡಾ. ಹನೀಫ್ ಅವರ ಉದ್ಯೋಗ ಅನುಮತಿ ದಾಖಲೆಯನ್ನು ರದ್ದುಗೊಳಿಸಿ, ಆಸ್ಸಿಯ ಅತ್ಯಂತ ಹಳೆಯ ಕಾರಾಗೃಹವೆನ್ನಿಸಿಕೊಂಡ ವಿಲ್ಲಾವುಡ್ ಸೆರೆಮನೆಯಲ್ಲಿ ಅವರನ್ನು ಅನಿರ್ದಿಷ್ಟ ಕಾಲದ ತನಕ ಬಂಧಿಸಿಟ್ಟದ್ದು, ಹೇಬಿಯಸ್ ಕಾರ್ಪಸ್ ಸವಲತ್ತನ್ನೂ ನಿರಾಕರಿಸಿದ್ದು ಆ ವ್ಯವಸ್ಥೆಯ ಕೆಲವು ಮುಖಗಳು ಮಾತ್ರ. ಇಲ್ಲಿಯ ಮಾನವ ಹಕ್ಕು ಸಂಸ್ಥೆಗಳು ಡಾ. ಹನೀಫ್ ಅವರ ಸಹಾಯಕ್ಕೆ ಬಂದ ಮೇಲೆ ಇಲ್ಲಿಯ ಸುದ್ದಿ ಮಾಧ್ಯಮಗಳು, ಮತ್ತು ನಂತರ ಭಾರತ ಸರಕಾರ ಹೇರಿದ ಒತ್ತಡಕ್ಕೆ ಮಣಿದು ಡಾ. ಹನೀಫ್ ಅನಿರ್ದಿಷ್ಟ ಸೆರೆವಾಸದಿಂದ ಪಾರಾಗುವಂತಾಯಿತು.



ಜಾಗತೀಕರಣ ಮತ್ತು ಅನ್ಯದ್ವೇಷ ಸಂಸ್ಕೃತಿ

ವಲಸಿಗರ ಹಕ್ಕುಗಳನ್ನು ರಕ್ಷಿಸುವ ವಿಷಯದಲ್ಲಿ ಆಸ್ಸಿ ಸರಕಾರ ತಳೆದಿರುವ ತಟಸ್ಥ ಧೋರಣೆ ಸಂಕಷ್ಟದ ಸಮಯದಲ್ಲಿ, ಅದರಲ್ಲೂ ಪ್ರಸ್ತುತ ಆರ್ಥಿಕ ಹಿಂಜರಿತದಂತ ಸಂದರ್ಭದಲ್ಲಿ, ಅಲ್ಲಿಯ ಅಸಹಿಷ್ಣು ಜನರಿಗೆ ಭಾರತೀಯ ವಿದ್ಯಾರ್ಥಿ ಸಮುದಾಯದಂತಹ ದುರ್ಬಲ ವರ್ಗದ ಮೇಲೆ ಹರಿಹಾಯುವ ಕುಮ್ಮಕ್ಕು ನೀಡಿದಂತಿದೆ. 2001 ರಲ್ಲಿ ಇಂಗ್ಲೆಂಡಿನಲ್ಲಿ ನಡೆದ ಜನಾಂಗೀಯ ದ್ವೇಷದ ಪ್ರಕರಣಗಳ ಬಗ್ಗೆ ಬರೆಯುತ್ತಾ ಎ. ಶಿವಾನಂದನ್ ತಮ್ಮ Poverty is the New Black ಕೃತಿಯಲ್ಲಿ ಜಾಗತೀಕರಣ ಹುಟ್ಟು ಹಾಕಿರುವ ಅನ್ಯದ್ವೇಷದ ಸಂಸ್ಕೃತಿಯ ಬಗ್ಗೆ ಬರೆಯುತ್ತಾರೆ.

"ನಿರಾಶ್ರಿತರನ್ನು, ಆಶ್ರಯಕೋರಿ ಬರುವವರನ್ನು ಹೊರಗಿಡಲು ಅನ್ಯದ್ವೇಷವನ್ನು, ಭಯವನ್ನೂ ಸಮರ್ಥವಾಗಿ ಬಳಸಿಕೊಳ್ಳಲಾಗುತ್ತಿದೆ. 'ಅವರೆಲ್ಲ' ಹೊರಗಿನವರು. ಪಾಶ್ಚಾತ್ಯ ಸಂಪತ್ತನ್ನು ಲೂಟಿ ಹೊಡೆಯಲು ಬಂದವರು, ಪಾಶ್ಚಿಮಾತ್ಯ ದೇಶಗಳ ಅನನ್ಯತೆಯನ್ನು ಕಲುಷಿತಗೊಳಿಸಲು ಬಂದವರು ಎಂಬ ಪರಿಕಲ್ಪನೆಯನ್ನು ತುಂಬ ವ್ಯವಸ್ಥಿತವಾಗಿ ಹರಡಲಾಗುತ್ತಿದೆ. ಹೀಗೆ ಬೇರೆ ಜನಾಂಗದವರನ್ನು ಅನ್ಯವಾಗಿಸಿ, ಪಿಶಾಚೀಕರಿಸುವ ಪ್ರಯತ್ನಕ್ಕೆ ಜನಾಂಗೀಯ ಮತ್ತು ಸಾಂಸ್ಕೃತಿಕ ಅಸಹಿಷ್ಣುತೆಯೇ ಕಾರಣದಂತೆ ಕಂಡುಬಂದರೂ, ನಿಜವಾದ ಕಾರಣಗಳು ಮಾತ್ರ ಆರ್ಥಿಕ ನೆಲೆಗಟ್ಟಿನಿಂದ ಬಂದಂತಹವೇ. ಅಂತರಾಷ್ಟ್ರೀಯ ಆರ್ಥಿಕ ದುರ್ಬಲ ವರ್ಗವೊಂದನ್ನು ಹುಟ್ಟು ಹಾಕುವ, ಅದನ್ನು ಯಥಾಸ್ಥಿತಿಯಲ್ಲಿಡುವ ಹುನ್ನಾರವೇ."

ಜಗತ್ತು ಜಾಗತೀಕರಣವಾಗುತ್ತಿದ್ದಂತೆ ಕಂಡುಬರುವಾಗಲೇ ತೀವ್ರ ಬಲಪಂಥೀಯ ಪಕ್ಷಗಳು ಬೇರೆ ಬೇರೆ ದೇಶಗಳಲ್ಲಿ ಸಹ ಅಧಿಕಾರಕ್ಕೆ ಬಂದಿವೆ. ಬ್ರಿಟಿಷ್ ನ್ಯಾಷನಲಿಸ್ಟ್ ಪಾರ್ಟಿ, ಸ್ವಿಟ್ಜರ್ಲೆಂಡಿನ ಪೀಪಲ್ಸ್ ಪಾರ್ಟಿ, ನ್ಯೂಜಿಲೆಂಡಿನ ACT ಪಾರ್ಟಿ, ಕೆನಡಾದ ಕನ್ಸರ್ವೇಟಿವ್ ಪಾರ್ಟಿ ಈ ರೀತಿಯ ಅನ್ಯಜನಾಂಗ ಅಸಹಿಷ್ಣುತೆ ಸಿದ್ಧಾಂತದತ್ತ ವಾಲಿದಂತವು. ಜಾಗತೀಕರಣ ಅಲ್ಲಿಯ ಸಂದರ್ಭಗಳಲ್ಲಿ ಯಾವ ರೀತಿಯ ಜನಾಂಗೀಯ ದ್ವೇಷವನ್ನು ಪ್ರಚೋದಿಸುತ್ತಿದೆ ಎಂಬುದನ್ನು ತೀವ್ರ ಸಂಶೋಧನೆಯಿಂದ ಅರ್ಥ ಮಾಡಿಕೊಳ್ಳಬೇಕಾಗಿದೆ.

ಆಸ್ಸಿಯಲ್ಲಿ ನಡೆಯುತ್ತಿರುವ ಈ ಜನಾಂಗೀಯ ದ್ವೇಷದ, ಜಾಗತೀಕರಣದ ಹಿಂಸೆಯ ಪ್ರಕರಣಗಳಿಂದ ಹೊಮ್ಮಿದ ಒಂದು ಪಾಸಿಟಿವ್ ಅಂಶವೆಂದರೆ ಸಿಡ್ನಿಯಲ್ಲಿ ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಹಲವಾರು ಸಾಂಸ್ಕೃತಿಕ ಅಲ್ಪಸಂಖ್ಯಾತ ಸಮುದಾಯಗಳು ಮತ್ತು ಪ್ರಗತಿಪರ ಆಸ್ಸಿಯರು ಒಟ್ಟುಗೂಡಿದ್ದು. ಹೊರದೇಶದಲ್ಲಿರುವ ಭಾರತೀಯರು ಸಾಮಾನ್ಯವಾಗಿ ಹಿಂಜರಿಕೆಯಿಂದಲೋ, ಅನನ್ಯತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದಲೋ, 'ಅಗ್ರಹಾರೀಕರಣ' ದ (ghettoization) ಪ್ರಕ್ರಿಯೆಯತ್ತ ವಾಲುತ್ತಾರೆ. ಹಾಗಾಗಿಯೇ ಸುಲಭವಾಗಿ ತಮ್ಮನ್ನು ದೌರ್ಜನ್ಯಕ್ಕೆ ಹೊಡೆತಕ್ಕೆ ಈಡುಗೊಳಿಸಿಕೊಳ್ಳುತ್ತಾರೆ ಎಂಬ ಒಂದು ವಾದವಿದೆ. ಈ ಪ್ರಕರಣ ಆಸ್ಸಿಯಲ್ಲಿರುವ ಶ್ರೀಮಂತ ಭಾರತೀಯ ವಿದ್ಯಾರ್ಥಿಗಳಿಗೆ ತಮ್ಮದೇ ನೆಲದಲ್ಲಿ ಸವರ್ಣೀಯರಿಂದ ಹಲವಾರು ಬಗೆಯ ದೌರ್ಜನ್ಯಗಳಿಗೆ ತುತ್ತಾಗುವ ದಲಿತರ ಪರಿಸ್ಥಿತಿಯ ಬಗ್ಗೆ ಕೊನೆಯ ಪಕ್ಷ ಯೋಚಿಸುವಂತೆ ಮಾಡಬಲ್ಲುದೆ?

ವರುಷದ ಹಿಂದೆ ನ್ಯೂಜಿಲೆಂಡಿಗೆ ಬರುವ ಹಾದಿಯಲ್ಲಿ ಸಿಂಗಪೂರಿನಲ್ಲಿ ಹನ್ನೆರಡು ಗಂಟೆಯ ನಂತರ ಮೆಲ್ಬರ್ನಿಗೆ ಹೋಗುವ ವಿಮಾನವನ್ನು ಹತ್ತಲು ಸಾಲಿನಲ್ಲಿ ನಿಂತಿದ್ದಾಗ "ಆಸ್ಸಿಯ ವೀಸಾವಿಲ್ಲವೇ, ಹಾಗಾದರೆ ಮುಂದೆ ಹೋಗುವ ಹಾಗಿಲ್ಲ" ಎಂದು ತಕ್ಷಣ ನಮ್ಮನ್ನು ನಿಲ್ಲಿಸಿ, ಸುತ್ತ ಪೊಲೀಸರು ಬಂದು, ನಮ್ಮನ್ನು, ನಮ್ಮ ಪಾಸ್‌ಪೋರ್ಟುಗಳನ್ನು ಎಲ್ಲ ಕೋನಗಳಿಂದ ಕ್ಲಿಕ್ಕಿಸಿದಾಗ ಕಕ್ಕಾಬಿಕ್ಕಿಯಾಗಿದ್ದೆವು. ನಿಲ್ದಾಣದಲ್ಲಿ ಇಳಿದು ಇನ್ನೊಂದು ವಿಮಾನ ಹತ್ತಲೂ ವೀಸಾ ಬೇಕೆ ಎಂದು ಬೆಚ್ಚಿಬಿದ್ದಿದ್ದೆವು. ಬೆಂಗಳೂರಿನಲ್ಲಿ ನಮಗೆ through check-in ಕೊಟ್ಟು ಹಾದಿ ತಪ್ಪಿಸಿದ್ದ ಜೆಟ್ ಏರ್‌ವೇಸ್ ಜೊತೆ "ಅಪ್ಪರಾಣೆ ಆಸ್ಟ್ರೇಲಿಯಾ ನಮಗೆ ಬೇಕಾಗಿಲ್ಲ, ಸೀದಾ ನ್ಯೂಜಿಲೆಂಡಿಗೆ ಕಳುಹಿಸುವ ಏರ್ಪಾಡು ಮಾಡಿ" ಎಂದು ಜಗಳವಾಡಿ ನ್ಯೂಜಿಲೆಂಡ್ ತಲುಪಿದ್ದೆವು. ಆಸ್ಸಿಯನ್ನು ಹಾದುಹೋಗುವ ಪ್ರಯಾಣಿಕರೂ ಸಹ ವೀಸಾ ತೆಗೆದುಕೊಳ್ಳಲೇಬೇಕು ಎಂಬ ವಿಚಿತ್ರ ಅಪ್ಪಣೆಯನ್ನು ಕೊನೆಯ ಪಕ್ಷ ಚೆಕ್‌ಇನ್ ಮಾಡಿಸುವಾಗಲಾದರೂ ತಿಳಿಯಪಡಿಸಿ ಎಂದು ಆ ಏಜೆಂಟರನ್ನು ಆಗ್ರಹಿಸಿದ್ದೆವು. ಎಂಟು ತಿಂಗಳ ನಂತರ ಇಲ್ಲಿಗೆ ಬಂದು ಪರಿಚಯವಾದ ಸ್ನೇಹಿತೆಯೊಬ್ಬಳು ತನ್ನ ಎರಡು ಸಣ್ಣ ಮಕ್ಕಳನ್ನು ಹೊತ್ತು ಸಿಂಗಾಪೂರಿನ ಏರ್‌ಪೋರ್ಟಿನಲ್ಲಿ ಹನ್ನೆರಡು ಗಂಟೆಯ ಕಾದ ನಂತರ ಅದೇ ಮೆಲ್ಬರ್ನಿಗೆ ವಿಮಾನ ಹತ್ತುವ ಮೂರು ಗಂಟೆಯ ಮುಂಚೆ ಕೌಂಟರಿನ ಸುಂದರಿ "ನೀನು ಆಸ್ಸಿಯ ಟ್ರಾನ್ಸಿಟ್ ವೀಸಾ ತೆಗೆದುಕೊಂಡಿಲ್ಲ. ನಿನ್ನ ಮಕ್ಕಳೇನೋ ಅಮೆರಿಕದ ಪ್ರಜೆಗಳು, ಹೋಗಬಹುದು. ಆದರೆ ನಿನ್ನ ಇಂಡಿಯನ್ ಪಾಸ್‌ಪೋರ್ಟ್ ಇಟ್ಟುಕೊಂಡು ನೀನು ಹೋಗುವ ಹಾಗಿಲ್ಲ" ಎಂದಳಂತೆ. ಇತ್ತ ಹೆಂಡತಿಯನ್ನು ಕರೆತರಲು ಮೆಲ್ಬರ್ನಿಗೆ ಹೋಗಿದ್ದ ಅವಳ ಅಮೆರಿಕನ್ ಪ್ರಜೆ ಇಂಡಿಯನ್ ಮೂಲದ ಗಂಡನನ್ನು "ಒಂದೇ ದಿನದ ಮಟ್ಟಿಗೆ ಮೆಲ್ಬರ್ನಿಗೆ ಬಂದೆಯಾ? ಯಾಕೆ?" ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ವಿಶೇಷ ತನಿಖೆಗೆ ಒಳಪಡಿಸಿದ್ದರು!

ಅಂದಹಾಗೆ ಆಸ್ಸಿಯಲ್ಲಿ ಭಾರತೀಯ ವಿದ್ಯಾರ್ಥಿಗಳ ಮೇಲೆ ನಡೆಯುತ್ತಿರುವ ಹಲ್ಲೆ ಪ್ರಕರಣಗಳ ಬಗ್ಗೆ ನ್ಯೂಜಿಲೆಂಡ್ ಟಿವಿಯಲ್ಲಿ ಯಾವ ಸುದ್ದಿಯೂ ಇಲ್ಲ. ಈ ಮೌನದ ರಾಜಕೀಯವೇನು ಎಂಬುದು ಸ್ಪಷ್ಟವಿಲ್ಲ.

● ಹರಿ ಮತ್ತು ಸುಕನ್ಯಾ ಕನಾರಳ್ಳಿ

ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು 25



ಅಕ್ಷರ ರೂಪ: ಅಕ್ಷತಾ ಕೆ.

ಶೌಚಾಲಯ-ಗ್ರಂಥಾಲಯ ನಿರ್ಮಲ ಕರ್ನಾಟಕ

ಜನತಾ ಮನೆಗಳ ನಿರ್ಮಾಣವಾದ ಮೇಲೆ ಭಗವತಿಕೆರೆಯಲ್ಲಿ ಹಲವು ಕುಟುಂಬಗಳು ಕಾಯಂ ನೆಲೆ ಕಂಡುಕೊಂಡು ಭಗವತಿಕೆರೆ ಕ್ಯಾಂಪ್ ಆಗಿ ಪರಿವರ್ತನೆಯಾಯ್ತು. ಸರ್ಕಾರ ಅಕ್ಷರ ತುಂಗಾ ಯೋಜನೆ ಪ್ರಾರಂಭಿಸಿದಾಗ ನಾನು ಮತ್ತು ಶ್ರೀದೇವಿ ಕ್ಯಾಂಪ್ ನವರಿಗೆ ಓದುಬರಹ ಕಲಿಸಿಕೊಡಲು ಅವರಿದ್ದಲ್ಲಿಗೆ ದಿನಾ ಸಂಜೆ ಹೋಗಿ ಬರುತ್ತಿದ್ದೆವು. ಇನ್ನು ಕ್ಯಾಂಪ್‌ಗೆ ವಿದ್ಯುತ್ ಬಂದಿರಲಿಲ್ಲವಾದ್ದರಿಂದ ನಾವು ಲಾಟೀನ್ ದೀಪ ತೆಗೆದುಕೊಂಡು ಹೋಗಿ ಅದರ ಬೆಳಕಿನಲ್ಲಿ ಕಲಿಸುತ್ತಿದ್ದೆವು. ಸಮಸ್ಯೆ ದೀಪದ್ದಾಗಿರಲಿಲ್ಲ, ಬದಲಿಗೆ ಶೌಚದ್ದಾಗಿತ್ತು. ಸಂಜೆಯ ಮಬ್ಬು ಕವಿದೊಡನೆ ದಾರಿ ಬದಿಯಲ್ಲೆ ಎಲ್ಲ ಶೌಚಕ್ಕೆ ಕೂರುತಿದ್ದರು. ಯಾರ ಮನೆಯಲ್ಲೂ ಕಕ್ಕಸ್ ಇರಲಿಲ್ಲ. ಮಲೆನಾಡಿನಲ್ಲಿ ಹುಟ್ಟಿ ಬೆಳೆದ ನಮಗೆ ಮೊದಲ ಬಾರಿಗೆ ಈ ಸಮಸ್ಯೆ ಢಾಳಾಗಿ ಕಣ್ಣಿಗೆ ಬಡಿಯತೊಡಗಿತು. ಮಲೆನಾಡಿನಲ್ಲಾದರೆ ತುಂಬಾ ಗಿಡ ಮರಗಳಿರುವುದರಿಂದ ಅದರ ಬುಡದಲ್ಲಿ ಶೌಚಕ್ಕೆ ಹೋಗ್ತಾರೆ. ಅದೊಂದು ಸಮಸ್ಯೆಯೇ ಅಲ್ಲ. ಇಲ್ಲಿ ಹಾಗಲ್ಲ, ಬಟಾಬಯಲು. ದೂರದ ಗುಡ್ಡಕ್ಕೆ ಹೋಗಕ್ಕೆ ಕರೆಂಟಲ್ಲವಾದ್ದರಿಂದ ದಾರಿ ಮೇಲೆಯೇ ಶೌಚಕ್ಕೆ ಕೂರೋರು. ಅಕ್ಷರ ಕಲಿಸೋಕಂತ ಹೋದ ನಮಗೆ ಕಕ್ಕಸ್ ಮಾಡ್ತಾ ಕೂತಿರೋ ದೃಶ್ಯ ಕಣ್ಣಿಗೆ ಬೀಳೋದು. ಅಸಹನೀಯವಾದ ವಾಸನೆಗೆ ಮೂಗು ಮುಚ್ಚಕೊಂಡು ಓಡಾಡೋ ಪರಿಸ್ಥಿತಿ ಇತ್ತು. ಶುಚಿ ಯಾಗಿರಬೇಕಪ್ಪ ಮನೆ ಮುಂದೆಲ್ಲ ಹೀಗೆ ಕೂರಬಾರದು ಅಂದ್ರೆ ಮತ್ತೆಲ್ಲಿ ಹೋಗಾನ ಅಯ್ನೋರೆ ಅನ್ನೋ ಪ್ರಶ್ನೆ ಅವರಿಂದ ಎದುರಾಗ್ತಿತ್ತು.

ಇದಕ್ಕೇನಾದ್ರೂ ಪರಿಹಾರ ಹುಡುಕಬೇಕೆಂದು ಕೊಳ್ಳುತ್ತಿರುವಾಗ ಶೆಟ್ಟಿಗಾರ್ ಎಂಬ ಆನವೇರಿ ಕೆನರಾ ಬ್ಯಾಂಕ್‌ನ ಮ್ಯಾನೇಜರ್ ಪರಿಚಯ ಆದ್ರು. ಮೂಲತಃ ಕುಂದಾಪುರದವರಾದ ಅವರ ಜೊತೆ ಈ ಸಮಸ್ಯೆಯನ್ನು ಪ್ರಸ್ತಾಪ ಮಾಡಿದಾಗ ಅವರಿದ್ದೋರು "ಮಾರಾಯ್ರೆ ದಿನಾ ಮುಂಜಾನೆ ಶಿವಮೊಗ್ಗದಿಂದ ಆನವೇರಿಗೆ ಬರೋ ದಾರಿಯುದ್ದಕ್ಕೂ ನಂಗೆ ಈ ದೃಶ್ಯವೇ ಕಣ್ಣಿಗೆ ಬೀಳೋದು. ಕೆಲವೊಂದು ಸರ್ತಿ ಅದರ ಮೇಲೆ ಬೈಕ್ ಓಡಿಸಬೇಕಾದ, ಸಾಲ ವಾಪಸ್ ಕೇಳಲು ಕೆಲವೊಂದು ಮನೆಗೆ ಹೋದಾಗ ಅದನ್ನೇ ಮೆಟ್ಟಕೊಂಡು ಓಡಾಡಬೇಕಾಗಿ ಎಲ್ಲ ಬಂದಿದೆ. ಎಂತ ಗಲೀಜು ಮಾರಾಯ್ರೆ'' ಎಂದು ತಮ್ಮ ಕುಂದಾಪುರ ಕನ್ನಡದಲ್ಲಿ ತಮ್ಮ ಅನುಭವ ಹೇಳಿದರು. ಇದೇ ಸಂದರ್ಭ ಎಂದುಕೊಂಡ ನಾನು "ಕಕ್ಕಸ್ ಕಟ್ಟಸೋಕೆ ನಿಮ್ಮ ಬ್ಯಾಂಕ್‌ನಿಂದ ಸಾಲ ಕೊಡಿಸಲು ಆಗತ್ತಾ?'' ಎಂದು ಕೇಳಿದೆ. ಅವರಿದ್ದೋರು "ಬೆಳೆ ಬೆಳೆಯಲಿಕ್ಕೆ ಸಾಲ ಕೊಡೋದು, ಮನೆ ಕಟ್ಟಸೋಕೆ ಸಾಲ ಕೊಡೋದು ಎಲ್ಲ ಕೇಳಿದ್ದೆ. ಆದರೆ ಕಕ್ಕಸ್ ಕಟ್ಟಸೋಕೆ ಸಾಲ ಕೊಡೋ ವ್ಯವಸ್ಥೆ ಇಲ್ಲ. ಒಂದ್ವೇಳೆ ಸಾಲ ಕೊಡಿಸಿದೆ ಎಂದುಕೊಳ್ಳಿ, ರೀಪೇಮೆಂಟ್ ಹೇಗೆ ಮಾಡ್ತಾರೆ?'' ಅಂದ್ರು. "ಕಕ್ಕಸ್ ಗುಂಡಿನೇ ರೀಪೇಮೆಂಟ್. ಒಂದು ಕುಟುಂಬದಲ್ಲಿ ನಾಕೈದು ಜನರಿದ್ದೇ ಇರ್ತಾರೆ. ಎಂಟು, ಹತ್ತು ವರ್ಷದಲ್ಲಿ ಕಕ್ಕಸ್ ಗುಂಡಿ ತುಂಬೇ ತುಂಬುತ್ತೆ. ಅದನ್ನು ಗೊಬ್ಬರ ಮಾಡಿ ಕೊಳ್ಳೋಕೆ ಬರತ್ತೆ. ಕಕ್ಕಸ್ ಗುಂಡಿನೆ ರೀಪೇಮೆಂಟ್. ಇಷ್ಟು ಪ್ರಾಮಾಣಿಕವಾಗಿ ಇನ್ಯಾವುದಾದರೂ ರೀಪೇಮೆಂಟ್ ಆಗತ್ತೇನ್ರಿ?'' ಎಂದೆ.

ಅಷ್ಟೊತ್ತಿಗಾಗಲೇ ಕಕ್ಕಸ್ ಗುಂಡಿ ಅಗೆದು ಅದರಲ್ಲಿನ ಕಪ್ಪು ಮಣ್ಣು ಸುಫಲಾದ್ದಕ್ಕಿಂತ ಒಳ್ಳೆ ಗೊಬ್ಬರ ಆಗತ್ತೆ ಎಂದೆಲ್ಲ ನಾನು ಪ್ರಯೋಗ ಮಾಡೇ ಕಂಡುಕೊಂಡಿದ್ದೆ. ಆದರೆ ನನ್ನ ಮಾತನ್ನು ಕೇಳಿದ ಶೆಟ್ಟಿಗಾರ್ "ಅದೇನೋ ಸರಿ, ಆದರೆ ಈ ರೀತಿ ರೀಪೇಮೆಂಟ್ ವ್ಯವಸ್ಥೆ ಕಾರ್ಯಸಾಧುವಲ್ಲ, ಆದರೂ ಕಕ್ಕಸ್ ಕಟ್ಟಸೋಕೆ ಸಾಲ ಕೊಡಲು ಏನಾದ್ರೂ ವ್ಯವಸ್ಥೆ ಮಾಡ್ತೀನಿ'' ಎಂದು ಅವರ ಮುಖ್ಯ ಕಚೇರಿಗೆ ಈ ಬಗ್ಗೆ ಬರೆದು ಸ್ವಲ್ಪ ದಿನದಲ್ಲೆ ಸಾಲ ಮಂಜೂರು ಮಾಡಿಸಿದರು.

ಭಗವತಿಕೆರೆಯಲ್ಲಿ ಒಂದೊಂದಕ್ಕೆ 1800 ರೂಪಾಯಿಯಂತೆ ಖರ್ಚು ಮಾಡಿ ಶೌಚಾಲಯ ಕಟ್ಟಸಲಾಯಿತು. ಬೇಸಿನ್, ಪೈಪ್, ಕಕ್ಕಸ್ ಗುಂಡಿ ಮತ್ತು ಮೂರುಗೋಡೆ ಮತ್ತೆ ಒಂದು ಬಾಗಿಲಿನ ಕೋಣೆ ಕಟ್ಟಸಲಾಯಿತು. ದುಡ್ಡು ಸಾಲಲಿಲ್ಲವಾಗಿ ಮೇಲ್ಛಾವಣಿ ಮಾಡಲು ಹೋಗಲೇ ಇಲ್ಲ. ಇಷ್ಟೆಲ್ಲ ಮಾಡಿದ ಮೇಲೂ ಕೆಲವರು "ಮನೆಯೊಳಗೆ ಕಕ್ಕಸ್ ಮಾಡುವುದಾ? ನಮ್ಮಿಂದ ಸಾಧ್ಯವಿಲ್ಲ" ಎಂದರು. ಕೆಲವರು "ನಮಗಲ್ಲಿ ಕೂತರೆ ಕಕ್ಕಸ್ ಬರೋದೆ ಇಲ್ಲ'' ಅಂದ್ರು. "ನೋಡ್ರಪ್ಪಾ, ಇದು ಮನೆ ಅಲ್ಲ, ಇದು ಕಕ್ಕಸ್ ಮನೆ. ಅದನ್ನ ಮಾಡಕ್ಕಂತ್ಲೇ ಇರೋದು'' ಅಂತೆಲ್ಲ ಸಮಜಾಯಿಷಿ ಕೊಟ್ಟರೂ ಕೆಲವರು ಕಕ್ಕಸ್ ಕಟ್ಟಸಿಕೊಳ್ಳಲು ಒಪ್ಪಲೇ ಇಲ್ಲ. "ಅದರೊಳಗೆ ಕೂತರೆ ನಮಗೆ ಬರೋದೆ ಇಲ್ಲ'' ಅನ್ನೋರಿಗೆ "ಯಾಕೆ ಬರೋದಿಲ್ಲ? ನೀವು ಮೊದಲು ಅದರೊಳಗೆ ಕೂತ್ಕಳಿ; ಆಮೇಲೆ ಹೇಳಿ'' ಅಂತೆಲ್ಲ ಹೇಳಿ ಒಪ್ಪಿಸಲಾಯಿತು. ತಾವರೆನಾಯ್ಕ ಅಂತಿದ್ದ, ಅವನಿಗಂತೂ "ನೀ ಮೊದಲು ಅದರೊಳಗೆ ಕೂತ್ಕೋ. ನೀ ಕೇಳಿದ್ದೆಲ್ಲ ಸಪ್ಲೆ ಮಾಡ್ತೀನಿ. ಬೀಡಿ, ಬೆಂಕಿ ಪಟ್ಟಣ ಏನಂದ್ರೆ ಅದು ಕೊಡ್ತೀನಿ'' ಎಂದು ಪುಸಲಾಯಿಸಿದರೂ ಅವನು ಶೌಚಾಲಯ ಕಟ್ಟಸಿಕೊಳ್ಳಲಿಕ್ಕೆ ಒಪ್ಪಲೆ ಇಲ್ಲ. ಅವನಂತೆ ಮತ್ತೆ ಕೆಲವರು ಇದೇ ಕಾರಣ ಕೊಟ್ಟು ಶೌಚಾಲಯ ಕಟ್ಟಸಿಕೊಳ್ಳಲೇ ಇಲ್ಲ.

ಹೀಗೆಲ್ಲ ಪ್ರಹಸನಗಳು ನಡೆಯುತ್ತಾ ಇರುವಾಗ ಜನತಾ ಸರ್ಕಾರ ಅಧಿಕಾರಕ್ಕೆ ಬಂದು ಪಟೇಲರು ಉಪ ಮುಖ್ಯಮಂತ್ರಿಗಳಾದರು. ಸಮಾಜವಾದಿ ಹಿನ್ನೆಲೆಯ ಎಂ.ಪಿ. ಪ್ರಕಾಶ್ ಗ್ರಾಮೀಣಾಬಿವೃದ್ಧಿ ಸಚಿವರಾದರು. ಪಟೇಲರನ್ನು ಒಮ್ಮೆ ಭೇಟಿ ಮಾಡಿದಾಗ ಅವರ ಬಳಿ ಶೌಚಾಲಯದ ವಿಷಯ ಪ್ರಸ್ತಾಪ ಮಾಡಿದೆ. ಅಲ್ಲೆ ಇದ್ದ ಎಂ.ಪಿ. ಪ್ರಕಾಶ್ "ಶಾಮಣ್ಣೋರೆ, ನೀವು ನಿಮ್ಮೂರಿನ ಸಮಸ್ಯೆ ಹೇಳ್ತೀರಿ. ನಮ್ಮೂರಿನ ಕಥೆ ಕೇಳಿ. ಸಂಜೆ ಮೇಲೆ ನಮ್ಮೂರಿನ ರಸ್ತೆಯಲ್ಲಿ ಕಾರಲ್ಲಿ ಹೋಗ್ತಾ ಇದ್ದರೆ ಕಾರಿನ ಬೆಳಕು ಕಂಡ ಕೂಡಲೇ ದಾರಿ ಪಕ್ಕದಲ್ಲಿ ಕಕ್ಕಸ್‌ಗೆ ಕೂತವರು ಅದೇ ಸ್ಥಿತಿಯಲ್ಲಿ ಎದ್ದೆದ್ದು ನಮಸ್ಕಾರ ಹೊಡಿತಿರ್ತಾರೆ. ಇವತ್ತಿನವರೆಗೂ ಅದನ್ನೆಲ್ಲ ನೋಡ್ಕೊಂಡು ಸುಮ್ಮನೇನೆ ಇದ್ವಿ. ನೀವು ಹೇಳಿದ ಮೇಲೆ ನೋಡಿ ಅದರ ಪರಿಹಾರದ ಮಾರ್ಗದ ಬಗ್ಗೆ ಹೊಳೆದಿದ್ದು'' ಎಂದರು. ಪಟೇಲ್ರು, ಪ್ರಕಾಶ್ ಪರಸ್ಪರ ಇದರ ಬಗ್ಗೆ ಚರ್ಚೆ ನಡೆಸಿ "ಒಂದು ಸಮಿತಿ ಮಾಡಿಕೊಂಡು ಈ ಬಗ್ಗೆ ಒಂದು ವರದಿ ತಯಾರಿಸಿ ಕೊಡಿ. ನಾವದನ್ನು ಶಾಸನ ಸಭೆಯಲ್ಲಿಟ್ಟು ಪಾಸ್ ಮಾಡಿಸ್ತೀವಿ'' ಎಂದು ನನಗೆ ಹೇಳಿದರು.

ತೇಜಸ್ವಿ, ದೇವನೂರು ಮಹಾದೇವ, ಎಚ್.ಎಲ್. ಕೇಶವಮೂರ್ತಿ, ವೈದೇಹಿ, ಕೆ.ವಿ.ಅಕ್ಷರ ಮತ್ತಿತರರು ಈ ಸಮಿತಿಯಲ್ಲಿದ್ದರು. ಬೆಂಗಳೂರಿನಲ್ಲಿ ಸಭೆ ಮಾಡಿ ವರದಿಯನ್ನು ಸರ್ಕಾರಕ್ಕೆ ಕೊಟ್ಟೆವು. ಪ್ರಕಾಶ್ ಅವರೇ ಮುಂದೆ ನಿಂತು ಈ ಯೋಜನೆ ಜಾರಿಯಾಗುವಂತೆ ನೋಡಿಕೊಂಡರು. ನಿರ್ಮಲ ಕರ್ನಾಟಕ ಹೆಸರಿನಲ್ಲಿ ಯೋಜನೆ ಜಾರಿಯಾಯಿತು. ಮನೆಗೊಂದು ಕಡ್ಡಾಯವಾಗಿ ಶೌಚಾಲಯ ಕಟ್ಟಸಿಕೊಡುವ ಉದ್ದೇಶದ ಈ ಯೋಜನೆಗೆ ಮೂಲ ಪ್ರೇರಣೆಯಾಗಿದ್ದು ನಮ್ಮ ಭಗವತಿಕೆರೆ ಕ್ಯಾಂಪ್ ಎಂಬ ಬಗ್ಗೆ ನನಗೆ ಬಹಳ ಹೆಮ್ಮೆ ಇದೆ. ಪ್ರಕಾಶ್ ಅವರಂತೂ ಈ ಯೋಜನೆ ಜಾರಿಗೆ ತರುವ ಮೊದಲು ಭಗವತಿಕೆರೆಗೆ ಭೇಟಿಕೊಟ್ಟು ಇಲ್ಲಿ ನಾವು ಕಟ್ಟಸಿದ ಶೌಚಾಲಯಗಳನ್ನು ನೋಡಿಕೊಂಡು ಹೋಗಿದ್ದರು.



ಜೆ.ಹೆಚ್.ಪಟೇಲ್


ಚಿತ್ರದುರ್ಗದ ಶಿವಮೂರ್ತಿ ಶರಣರು ಪಕ್ಕದ ಸನ್ಯಾಸಿಕೋಡುಮಗ್ಗೆಯ ಬಳಿಯ ಹೊಸೂರಿನ ದೇವಸ್ಥಾನದ ಉದ್ಘಾಟನೆಗೆ ಬಂದವರು "ಇಲ್ಲಿಗೆ ಸಮೀಪದ ಭಗವತಿಕೆರೆ ಎಂಬ ಊರಿನಲ್ಲಿ ಎಲ್ಲರ ಮನೆಯಲ್ಲೂ ಶೌಚಾಲಯವಿದೆಯಂತಲ್ಲ? ಮೊದಲು ಶೌಚಾಲಯ ನಂತರ ದೇವಾಲಯ ಎಂದು ಬೋರ್ಡ್ ಹಾಕಿದ್ದಾರಂತೆ? ನಾನು ನೋಡಬೇಕು'' ಎಂದು ಆ ಕಾರ್ಯಕ್ರಮದ ಆಯೋಜಕರಿಗೆ ಹೇಳಿ ರೈತ ಸಂಘದ ಕಾರ್ಯದರ್ಶಿ ಬಸವರಾಜಪ್ಪನವರನ್ನು ಕರೆದುಕೊಂಡು ನಮ್ಮೂರಿಗೆ ಬಂದು ಇದನ್ನೆಲ್ಲ ನೋಡಿ ಬಹಳ ಸಂತೋಷಪಟ್ಟಿದ್ದರು. ಮೊದಲಿಗೆ ಶೌಚಾಲಯ ಕಟ್ಟಸಿಕೊಳ್ಳಲು ಹಿಂಜರಿದವರು, ಅಲ್ಲಿ ಕೂತರೆ ಬರೋದೆ ಇಲ್ಲ ಅಂತಿದ್ದವರು ಎಲ್ಲ ಒಂದೆರಡು ವರ್ಷದಲ್ಲೆ ಶೌಚಾಲಯ ವ್ಯವಸ್ಥೆಗೆ ಹೊಂದಿಕೊಂಡರು.

ಅಂತಾ ತಾವರೇನಾಯ್ಕನೇ ಏನು ಮಾಡಿದರೂ ಕಕ್ಕಸ್ ಕಟ್ಟಸಿಕೊಳ್ಳಲು ಒಪ್ಪದೇ ಹೋದವನು ನಾಲ್ಕೈದು ವರ್ಷದ ನಂತರ ಅವನಾಗೆ ಬಂದು "ಏನಾದರೂ ಮಾಡಿ, ಆದಷ್ಟು ಬೇಗ ನಮ್ಮ ಮನೆಗೆ ಒಂದು ಕಕ್ಕಸ್ ಕಟ್ಟಸಿಕೊಡಿ'' ಎಂಬ ಅಹವಾಲು ಮುಂದಿಟ್ಟ. ಯಾಕೆಂದರೆ ತಾವರೇನಾಯ್ಕ ತನ್ನ ಮಗನಿಗೆ ಅದೇ ತಾನೇ ಮದುವೆ ಮಾಡಿದ್ದ. ಮನೆಗೆ ಬಂದ ಸೊಸೆ "ಶೌಚಾಲಯದಲ್ಲೆ ನನಗೆ ಹೋಗಿ ರೂಢಿ ಇರೋದು. ನನ್ನ ತವರು ಮನೇಲಿ ಕಕ್ಸ್ ಇ[...] ಕಕ್ಸ್ ಇಲ್ಲದ ಮನೇಲಿ ನಂಗಿರೋಕೆ ಸಾಧ್ಯ ಇ[...]'' ಎಂದು ಹಠ ಹಿಡಿದು ಕೂತಿದ್ದಳು. ಯಾವಾಗ ಸೊ[...] ನಮ್ಮನೇಲಿ ಕಕ್ಸ್ ಇದೆ ನಿಮ್ಮನೇಲಿ ಇಲ್ಲ ಎಂದಳೋ[...] ಆಗ ತಾವರೇನಾಯ್ಕನಿಗೆ ಶೌಚಾಲಯ ಕಟ್ಟಸಿಕೊಳ್ಳುವುದು[...] ಅವನ ಘನತೆಯ, ಮರ್‍ಯಾದೆಯ ಪ್ರಶ್ನೆಯಾಗಿ ಕಂಡುಬಂ[...] ಹೀಗೆ ತಾವರೇ ನಾಯ್ಕನೂ ಕಕ್ಸ್ ಕಟ್ಟಸಿಕೊಳ್ಳುವಂತಾ[...]


ಪ್ರತಿ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಒಂದು ಗ್ರಂಥಾ[...]ಲಯ ಇರಲೇ ಬೇಕು ಎಂಬುದು ನನ್ನ ನಿಲುವಾಗಿತ್ತು[...] ಮೈದೊಳಲು ಊರಿನಲ್ಲಿ ನಾನೊಂದು ದೃಶ್ಯ ನೋಡಿದ್[...] ಒಂದು ಬೆಳಿಗ್ಗೆ ಯಾರೋ ಕೃಷಿಕ ಗಂಡ ಹೆಂಡತಿ ಜೋ[...] ಎತ್ತು ಹೊಡೆದುಕೊಂಡು ಗದ್ದೆಗೆ ಹೋಗ್ತಾ ಇದ್ದರು[...] ದಾರಿಯಲ್ಲಿ ಚಿಕ್ಕದೊಂದು ಲೈಬ್ರರಿ ಇತ್ತು, ಗಂಡ ಲೈಬ್ರ[...]ರಿಯ ಎದುರಿಗೆ ಬರುತಿದ್ದಂತೆ ಹೆಂಡತಿಯ ಕೈಗೆ ತ[...] ಕೈಯಲ್ಲಿದ್ದ ಎತ್ತಿನ ಹಗ್ಗವನ್ನು ವರ್ಗಾಯಿಸಿ "ಹಿಡ್ಕೊಂಡ[...] ಇಲ್ಲೆ ನಿಂತಿರು, ಬಂದುಬಿಟ್ಟೆ'' ಅಂತ ಲೈಬ್ರರಿಗೆ ಹೋ[...] ಐದು ನಿಮಿಷದಲ್ಲಿ ಆ ದಿನದ ವಾರ್ತಾ ಪತ್ರಿಕೆಯನ್[...] ತಿರುವಿ ಹಾಕಿ ವಾಪಾಸ್ ಬಂದ. ಹೀಗೆ ಓದುವ ಹವ್ಯಾ[...] ಹಳ್ಳಿಗರಲ್ಲಿ ಬೆಳೆಯಬೇಕೆಂದರೆ ಪ್ರತಿ ಊರಲ್ಲಿ ಒಂದ[...] ಗ್ರಂಥಾಲಯ ಇರಲೇ ಬೇಕು.

ಪಟೇಲರಿರುವಾಗ ಏನೇ ವಿಚಾರ ಹೊಳೆದರೂ[...] ಅದನ್ನು ಕಾರ್ಯಗತ ಮಾಡಿ ಎಂದು ನೇರವಾಗಿ ಅವರನ್[...] ಕಂಡು ಹೇಳಲು ಸಾಧ್ಯವಿತ್ತು. ಮನೆಗೊಂದು ಶೌಚಾಲಯ[...] ಊರಿಗೊಂದು ಗ್ರಂಥಾಲಯ ಇರಬೇಕು ಎಂಬುದು[...] ನನ್ನ ವಿಚಾರವಾಗಿತ್ತು. ಶೌಚಾಲಯ ಯೋಜನೆ ಜಾರಿ[...]ಯಾಗಿತ್ತು ಹಾಗೆಯೇ ಗ್ರಂಥಾಲಯದ ವಿಚಾರವನ್ನು[...] ಹೇಳಿದ ಕೂಡಲೇ ಅದಕ್ಕೆ ಸ್ಪಂದಿಸಿದ ಪಟೇಲರು ಪ್ರತಿ[...] ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಒಂದು ಗ್ರಂಥಾಲಯ[...] ಸ್ಥಾಪನೆಗೆ ಅನುಮತಿ ನೀಡಿದರು. ಗ್ರಾಮೀಣ ಗ್ರಂಥ[...]ಪಾಲಕರಿಗೆ ಅದುವರೆಗೆ 300 ರೂ. ಗೌರವಧನ[...] ರೂಪದಲ್ಲಿ ನೀಡುತ್ತಿದ್ದರು. ಅದನ್ನು ಪಟೇಲರ ಸರ್ಕಾರ 850 ರೂ.ಗಳಿಗೆ ಏರಿಸಿತು. ಒಂದೆ ವರ್ಷದಲ್ಲಿ ರಾಜ್ಯದಲ್ಲಿ 4000ಕ್ಕಿಂತ ಹೆಚ್ಚು ಲೈಬ್ರರಿಗಳು ನಿರ್ಮಾಣವಾದವು.

ಪಟೇಲರ ನಂತರ ಬಂದ ಎಸ್.ಎಂ.ಕೃಷ್ಣ ಸರ್ಕಾರ ನಿರ್ಮಲ ಕರ್ನಾಟಕ ಯೋಜನೆಯನ್ನು ಕೈಬಿಟ್ಟಿತು. ಆ[...] ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವ ಘೋರ್ಪಡೆಯವರನ್ನು ಭೇಟಿ ಮಾಡಿ "ಯಾಕೆ ಇಂತಹ ಒಳ್ಳೆಯ ಯೋಜನೆ ಕೈ ಬಿಟ್ಟರಿ?'' ಎಂದು ಕೇಳಿದರೆ "ನಿರ್ಮಲ ಕರ್ನಾಟಕ ಯೋಜನೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ನಮಗೆ ವರದಿ ಬಂದ ಹಿನ್ನಲೆಯಲ್ಲಿ ಅದನ್ನು ಕೈಬಿಟ್ಟೆವು'' ಎಂದರು. ನನಗೊಂದು ಕ್ಷಣ ಏನು ಉತ್ತರ ಕೊಡಬೇಕೆಂದೇ ತಿಳಿಯಲಿಲ್ಲ. ಏಕೆಂದರೆ ಕಕ್ಕಸ್ ನಿರ್ಮಾಣಕ್ಕೆ ಸರ್ಕಾರದಿಂದ ಕೊಡುವ ಬೇಸಿನ್, ಪೈಪ್‌ಗಳು, ತೋಡಿಸಿ ಕೊಡುವ ಗುಂಡಿ ಇವೆಲ್ಲ ಇನ್ಯಾವುದಕ್ಕೆ ಉಪಯುಕ್ತವಾಗುತ್ತವೆ ಅಥವಾ ಇದನ್ನು ಯಾರಿಗೆ ಮಾರ ಬಹುದು ಎಂದು ನನಗೆ ಹೊಳೆಯಲಿಲ್ಲ. ಅದನ್ನೇ ಆ ಮಂತ್ರಿಗಳಿಗೆ ಕೇಳಿದೆ. "ಪೈಪ್, ಬೇಸಿನ್ ಎಲ್ಲ ಯಾರಿಗೆ ಮಾರಬಹುದು? ಅಣ್ಣ[...]ನಿಗೆ ಮಂಜೂರಾದ ಕಕ್ಕಸ್‌ನ್ನು ತಮ್ಮ ಕಟ್ಟಸಿಕೊಳ್ಳಬಹುದು ಅಷ್ಟೆ. ಅದನ್ನೇ ಭ್ರಷ್ಟಾಚಾರ ಎಂದರೆ ಹೇಗಾಗುತ್ತದೆ?'' ಎಂದು ಆ ಮಂತ್ರಿಗಳಿಗೆ ಕೇಳಿದರೆ "ಅದೆಲ್ಲ ನಮಗೆ ಗೊತ್ತಿಲ್ಲ. ಈ ಯೋಜನೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ನಮಗೆ ವರದಿ ಬಂದಿದೆ. ಅದಕ್ಕೆ ಯೋಜನೆ ತಡೆ ಹಿಡಿದು ನಾವು ಕ್ರಮ ತೆಗೆದುಕೊಂಡಿದೀವಿ'' ಎಂಬ ಉತ್ತರ ಅವರ ಬಳಿ ಸಿದ್ಧವಿತ್ತು. ನಿರ್ಮಲ ಕರ್ನಾಟಕ ಯೋಜನೆಯದು ಈ ಕಥೆಯಾದರೆ ಗ್ರಾಮೀಣ ಗ್ರಂಥಾಲಯದ ಗ್ರಂಥಪಾಲಕರ ಸಂಬಳದಲ್ಲಿ ಇಷ್ಟು ವರ್ಷದಲ್ಲಿ ತುಸು ಮಟ್ಟಿನ ಏರಿಕೆಯಾಗಿದ್ದು ಬಿಟ್ಟರೆ ನ್ಯಾಯಾಲಯದ ಆದೇಶವಿದ್ದಾಗ್ಯೂ ಅವರಿಗೆ ಸರ್ಕಾರಿ ಸಂಬಳ ಕೊಡಲು ಸರ್ಕಾರ ಒಪ್ಪಿಲ್ಲ. ಈ ಎಲ್ಲ ವಿಚಾರಗಳನ್ನು ಹೇಳಿ ಕಾರ್ಯಗತ ಮಾಡಿಸೋಣ ಎಂದರೆ ಪಟೇಲರೂ ಇಲ್ಲ...



ಎಂ.ಪಿ.ಪ್ರಕಾಶ್



ಭಗವತಿಕೆರೆಯಲ್ಲಿ ಒಂದೊಂದಕ್ಕೆ 1800 ರೂಪಾಯಿಯಂತೆ ಖರ್ಚು ಮಾಡಿ ಶೌಚಾಲಯ ಕಟ್ಟಸಲಾಯಿತು. ಇಷ್ಟೆಲ್ಲ ಮಾಡಿದ ಮೇಲೂ ಕೆಲವರು "ಮನೆಯೊಳಗೆ ಕಕ್ಕಸ್ ಮಾಡುವುದಾ? ನಮ್ಮಿಂದ ಸಾಧ್ಯವಿಲ್ಲ'' ಎಂದರು. ಕೆಲವರು "ನಮಗಲ್ಲಿ ಕೂತರೆ ಕಕ್ಕಸ್ ಬರೋದೆ ಇಲ್ಲ" ಅಂದ್ರು. "ನೋಡ್ರಪ್ಪಾ, ಇದು ಮನೆ ಅಲ್ಲ, ಇದು ಕಕ್ಕಸ್ ಮನೆ. ಅದನ್ನ ಮಾಡಕ್ಕಂತ್ಲೇ ಇರೋದು" ಅಂತೆಲ್ಲ ಸಮಜಾಯಿಷಿ ಕೊಟ್ಟರೂ ಕೆಲವರು ಕಕ್ಕಸ್ ಕಟ್ಟಿಸಿಕೊಳ್ಳಲು ಒಪ್ಪಲೇ ಇಲ್ಲ.

...ಗಳ ಆಡಿದೇಟಿಗೆ ಬ್ಯಾರೆ ಹೋಗಕ್ಕೆ ಅವುರೇನು ದಳದೋರೆ?



...ೋಡಿದ ಮುಚ್ಚಿದ ವಾತಾವರಣ, ಭಾರಿ ಮಳೆಯ ...ವಿ ತೋರಿದ ಮುಗಿಲು ತುಂತುರು ಹನಿಗೆ ...ನಾಗಿದ್ದು ನೋಡಿದ ಕಾಳಮಾವ,

...ಮುಂಗಾರು ಮಳೆ ಅಂದ್ರೆ ಯಂಗುಯ್ಯಬೇಕು. ...ಪಿ ಹರಿಯಂಗೆ ಹ್ವಡಿಬೇಕಪ್ಪ, ಅದುಬುಟ್ಟು ...ದಂಗೆ ಮಾಡ್ತ ಅದಲ್ಲಯ್ಯಾ" ಎಂದ.

...ದೊಂತರ ಬಜೆಪಿ ಜಗಳದಂಗಾಯ್ತು" ಎಂದ

...ಊ ಕಂಡ್ರ. ಏನೋ ಆಯ್ತು ಅನ್ನಂಗೆ ಕೂಗಾಡಿದ್ರು, ...ವಾದ್ರಪ್ಪ" ಎಂದ ಸೀರ.

...ಪರಿಯ ಮುರಿಯ ಜಗಳ ಆಡಿಕಂಡು ಬ್ಯಾರೆ ...ಅವುರೇನು ದೇಳದೋರೇನೊ ಮಾವ? ದಳದೋರು ... ಜಗಳ ಆಡಿದ್ರೆ ಸಾಕಾಗಿತ್ತು, ಅಂಗಿಹರಕಂಡು, ...ತಿ, ತೆಳ್ಳಾಡಿ ಇಟೊತ್ತಿಗೆ ಅವುರತ್ತಗೆ, ಇವುರಿತ್ತಗೆ ...ಗೋರು. ಬಜೆಪಿಲಿ ಅಂತದ್ಯಲ್ಲ ನ್ಯಡಿಯದಿಲ್ಲ ..." ಎಂದ ಕಾಳಮಾವ.

...ದ್ಯಾಕ್ ನ್ಯಡಿಯದಿಲ್ಲಾ?" ಎಂದಳು ಜುಮ್ಮಿ.

...ಬಜೆಪಿಲಿ ಬರೀ ರಾಜಕಾರಣಿಗಳಷ್ಟೇ ಇಲ್ಲ ಕಣೇ. ... ಅನ್ನೊ ಕಾರ್ಯಕರ್ತರ ಪಡೆ ಅದೆ. ಅವುರ ... ಧರ್ಮಗುರುಗಳವುರೆ. ಅವುರು ಬಂದು ಜಗಳ ...ಟ್ತಿರೆ. ಈಶ್ವರಪ್ಪ ಇನ್ನು ಜಾಸ್ತಿ ಮಾತಾಡಿದ ಅಂದ್ರು ...ಪೇಜಾವರ ಶ್ರೀಗೇಳಿದ್ರೆ ಅವುರೇ ಅವುನ ಬಾಯಿ ...ಟ್ತರೆ, ಗೊತ್ತೆ?"

...ಯ ಲು ಸೀ ಮ

ಕಟ್ಟೆಪುರಾಣ

▸▸ ಬಿ. ಚಂದ್ರೇಗೌಡ

...ಂಗೇ ಅನ್ನು."

...ಊ ಮತ್ತೆ ಈಶ್ವರಪ್ಪ ಪೇಜಾವರನ ಪಾಲಿಗೆ ಸಾಕಿರೊ ...ಬ್ಬಂಗೆ. ಪೇಜಾವರ ಯಾರಿಗೆ ಡಿಕ್ಕಿ ವಡಿ ಅಂತ ...ಬ ಅವುರಿಗೋಗಿ ಡಿಕ್ಕಿ ವಡಿತನೆ ಈಶ್ವರಪ್ಪ ಗೊತ್ತೆ?"

...ಂಗರೀಗ ಎಡೂರಪ್ಪನಿಗೆ ಡಿಕ್ಕಿ ಹ್ವಡದವುನಲ್ಲ, ... ಪೇಜಾವರ ಹೇಳಿಕೊಟ್ಟಿದ್ನೆ?" ಎಂದ ಸೀರ.

...ಲ್ಲ, ಅಂಗೇನು ಹೇಳಿಕೊಟ್ಟಿಲ್ಲ. ಏನಪ್ಪಾ ಅಂದ್ರೆ ...ರಪ್ಪ ಮಗನ್ನ ಚುನಾವಣೆಗೆ ನಿಲ್ಸಿ ಮಾಡಿರೊ ...ಪತ ನೋಡಿ ಹೆದ್ರಿಕಂಡು ಮಾತಾಡ್ತವುನೆ, ಅಷ್ಟೆಯಾ."

...ಡೂರಪ್ಪ ಏನನಾಹುತ ಮಾಡಿದ್ದನ್ನ?"

...ಡೂರಪ್ಪ ಮಗನ್ನ ನಿಲ್ಲಿಸಿದ್ದು ಅಲ್ದೆ ಗೆಲ್ಲಲೇಬೇಕು ...ನಾರಿ ದುಡ್ಡು ಖರ್ಚು ಮಾಡಿದ್ನಂತೆ. ಮುಂದೆ ...ಪ್ರ ಎಮ್ಮೆಲ್ಲೆ ಯಲಕ್ಷನ್ನಿಗೆ ನಿಂತಾಗ ಅಷ್ಟೇ ಖರ್ಚು ಮಾಡಬೇಕಾಯ್ತದೆ ಅನ್ನದು ಅವುನ ಕೊರಗು."

"ಓಹೊಹೊ ಅಂಗೆ. ಆಗ ಐನೂರು ಕೊಟ್ರಿ, ಈಗ ಬರೀ ನೂರು ಕೊಡ್ತಿರಲ್ಲ ಅಂತ ಓಟು ಮಾಡೋರು ಕೇಳಂಗಾಯ್ತದೆ ಅನ್ನದು ಈಸ್ಬುರಪ್ಪನ ತಕರಾರು ಅನ್ನು" ಎಂದ ಕಾಳಮಾವ.

"ಊ ಕಣ ಮಾವ. ಲೀಡ್ರುಗಳಿಗೆ ಲಕ್ಷಾಂತ್ರಪಾಯಿ ಕೊಟ್ರು, ಓಟು ಮಾಡೋರಿಗೆ ಸಾವುರಾರುಪಾಯಿ ಕೊಟ್ರು, ಹ್ಯಂಡ ಹಂಚಿದ್ರೂ ಲೀಡ್ಯಾಕ್ ಬರಲಿಲ್ಲ ಅಂದ್ರೆ, ಎಡೂರಪ್ಪನ ಮಗ ನಿಂತಿದ್ಮೆ ಲೀಡು ಬರಲಿಲ್ಲ ಅಂತ ಈಸ್ವರಪ್ಪ ಅಂದವುನೆ. ಆ ಮಾತಿಗೆ ಎಡೂರಪ್ಪ ಇವತ್ತಿಗೂ ಉತ್ತರ ಕೊಟ್ಟಿಲ್ಲ."

"ನೋಡುಮತ್ತೆ ಅವುನ್ಯಂಗವುನೆ."

"ತಪ್ಪು ಮಾಡಿದೋನು ಮಾತಾಡಕ್ಕಾದತೇ? ಆಡಿದ್ರೂ ಆಡಿದ ಮಾತ್ಯಲ್ಲ ತಪ್ಪಾಯ್ತವೆ. ಅದ್ಕೆ ಸುಮ್ಮನವುನೆ."

"ಈಸ್ಬುರಪ್ಪನೂ ಧೈರ್ಯಗಾರ ಬುಡು" ಎಂದ ಸೀರ.

"ಧೈರ್ಯಗಾರ ಅಂದ್ರೆ ಅದಂಗಲ್ಲ ಕಣಮಾವ ಆಗಿರದು. ಎಡೂರ ಈಸ್ಬುರುಂದು ಏನೂ ನ್ಯಡಿದಂಗೆ ಮಾಡಿದ್ದನಂತೆ. ಶಿವಮೊಗ್ಗದಲ್ಲಿ ಏನೇ ಆಗಬೇಕಾದ್ರು ಯಲ್ಲ ಎಡೂರಪ್ಪನ ಮಕ್ಕಳತ್ರಕೋದರಂತೆ. ಈಸ್ಬುರಪ್ಪನ್ನ ಕ್ಯಾರೆ ಅನ್ನೋದಿಲವಂತೆ. ಉರಿಯತ್ತಕುಲವೆ ಅವುನಿಗೆ?"

"ಅತ್ತದೆಯ ಬುಡು."

"ನಾವು ನೋಡ್ತಯಿರೊ ಜಗಳವೇ ಬ್ಯಾರೆ. ನಿಜವಾಗಲೂ ಆಗಿರದೆ ಬ್ಯಾರೆ ಕಣಮಾವ."

"ಎಜ್ಜಾಟ್ಟಿ ಕರಟ್ ಕಣೊ ಉಗ್ರಿ. ಎಡೂರಪ್ಪ ಈಶ್ವರಪ್ಪನ ಜಗಳ ನೋಡಿ ನನಿಗೆ ಪ್ಲ್ಯಾಶ್ ಬ್ಯಾಕ್ ಹ್ವಳಿತು" ಎಂದುಕೊಂಡು ವಾಟಿಸ್ಸೆ ಬಂದ.

"ನಿಂದ್ಯಾವುದಪ್ಪ ಹಳೆ ಪ್ಲ್ಯಾಶ್ ಬ್ಯಾಕು?"

"ಹಿಂದೆ ರಾಮಕೃಷ್ನ ಹ್ಯಗಡೆ ಮುಖ್ಯಮಂತ್ರಿ. ದ್ಯಾವೇಗೌಡ್ರು ಪಿಡಬ್ಲು ಮಂತ್ರಿ. ಆಗ ದ್ಯಾವೇಗೌಡ್ರು ಏನಂದಿದ್ರಪ್ಪಾ ಅಂದ್ರೇ ಹೆಗಡೆ ನೀರಾವರಿ ಕ್ಯಲಸಕ್ಕೆ ದುಡ್ಡು ಕೊಡ್ತಾಯಿಲ್ಲ ಅದ್ಕೆ ನಾನು ಬ್ಯಾರೆ ಹೋಯ್ತಿನಿ ಅಂದ್ರು. ಆದ್ರೆ ಅದು ನಿಜವಾದ ಕಾರಣ ಆಗಿರಲಿಲ್ಲ."

"ನಿಜವಾದ ಕಾರಣ ನಿನಿಗೊತ್ತು ಅನ್ನು?" ಎಂದ ಕಾಳಮಾವ.

"ಗೊತ್ತಿತ್ತು ದ್ವಡಪ್ಪ ಜನತಾ ಪರಿವಾರದೋರು ಹೆಗಡೆನ ಮುಖ್ಯಮಂತ್ರಿ ಮಾಡಿದಾಗ ಹೆಗಡೆ ಏನಂದಿದ್ದಾ ಅಂದ್ರೆ, ಇದ್ಯಲ್ಲನೂ ಸರಿ ಮಾಡಿ ಕೇಂದ್ರಕೋಯ್ತಿನಿ ಅಂದಿದ್ದ. ಆದ್ರೆ ಇಲ್ಲೇ ತಳ ಊರಿದ. ಆಗ ದ್ಯಾವೇಗೌಡ್ರು ನೀರಾವರಿ ಸುದ್ದಿ ತಗದು ಜಗಳವಾಡಿಕಂಡು ದೂರ ಹೋಗಿ, ಸೋತು ಸುಣ್ಣಾಗಿ, ಅತ್ಯಕೆ ಬಂದಾಗ ಕರ್ನಾಟಕದ ಯಾವುದೇ ಮುಖ್ಯಮಂತ್ರಿಗಿಂತ ಹೆಗಡೆನೆ ಜಾಸ್ತಿ ನೀರಾವರಿಗೆ ದುಡ್ಡು ಕೊಟ್ರು ಅಂದ್ರು. ಇದಕೇನೇಳ್ತಿಯಪ್ಪ?"

"ಅಂಗಂದನೇನ್ನ?" ಎಂದಳು ಜುಮ್ಮಿ.

"ನಾನೆ ನನ್ನ ಕಿವಿಯಾರ ಕೇಳಿದೆ ಕಣಕ್ಕ. ಅಗೋ ಅಂಗೆ ಈಶ್ವರಪ್ಪನ ಅಧಿಕಾರವ ಎಡೂರಪ್ಪ ತನ್ನ ಮಕ್ಕಳಿಗೆ ಕೊಟ್ಟವುನೆ. ಅದೂ ಅಲ್ದೆ ಇಂಧನ ಖಾತೆವಳಿಕೂ ಕೈ ಹಾಕ್ತಯಿದ್ದನಂತೆ. ಆ ಕಡೆ ಗಣಿ ರೆಡ್ಡಿಗಳು ಗರಂ ಆಗಿರದ ನೋಡಿದ ಈಶ್ವರಪ್ಪ, ಸರಿಯಾದ ಆಯಕಟ್ಟಿನ ಜಾಗಕ್ಕೆ ಗುದ್ದಿ ದಕ್ಕಿಸಿಗಂಡ. ಎಡೂರಪ್ಪ ತೇಲಗಣ್ಣು ಮೇಲಗಣ್ಣು ಮಾಡಿಕಂಡು ಸುಮ್ಮನಾದ ಅತ್ತಗೆ."

"ಅಂಗರಿನ್ನು ಜಗಳ ಆಡಿಕಂಡೆ ಕಾಲನೂಕ್ತರೆ ಅನ್ನು" ಎಂದ ಕಾಳಮಾವ.

"ಅಂದ್ರೆ ಜಗಳವ ಬಹಿರಂಗವಾಗೆ ಆಡದೆಯಿರಬವುದು, ಮುಸಮೆ ಮುಂದುವರಿತದೆ. ಆದ್ರೂ ಸರಕಾರ ಮಾತ್ರ ಕೆಡಿಕಳದಿಲ್ಲ."

"ಉಗ್ರಿನೂ ಅಂಗೆ ಅಂದನಲ್ಲಾ?"

"ನಿಜ ಕಣಕ್ಕ. ಬಜೆಪಿಗೆ ಅಧಿಕಾರ ಸಿಕ್ಕಿರದೇ ಪಸ್ಟೈಂ. ಅಂತದ್ರುಲಿ ಬುಡ್ತರ ಅವುರು?"

"ಕುಮಾರಸ್ವಾಮಿ ಇಲ್ಲಿದ್ರೆ ಎತ್ತಿ ಯಸ್ತಬುಡೋನಲ್ವೆ" ಎಂದ ಸೀರ.

"ಯಸಿದೆಯಿದ್ರುವೆ ಬಜೆಪಿಗಳ ನಿದ್ದೆ ಕೆಡಿಸಿರೋನು ಕಣಚಿಗಪ್ಪ. ಏನು ಮಾಡ್ತಿ, ಅವುನು ಡೆಲ್ಲಿನೆ ಆರಿಸಿಗಂಡ. ಅದಕ್ಕೆ ಒಂದು ಕಾರಣ ಅದೆ. ಅದ ಈಗ್ಲೆ ಹೇಳದಿಲ್ಲ ನಾನು."

"ಅದೇನೇಳ್ಳ" ಎಂದಳು ಜುಮ್ಮಿ.

"ಅದು ಸೆಕ್ಸ್ ಪ್ರಾಬ್ಲಮ್ಮು ಕಣಕ್ಕ. ನಮ್ಮ ಕುಮಾರಣ್ಣ ಕರ್ನಾಟಕದಲ್ಲೇ ಇದ್ರೆ ಯಿರೋಯಿನ್ ಜ್ವತೆ ಡುಯೆಟ್ ಸಾಂಗ್ ಹೇಳಕ್ಕಾಗದಿಲ್ಲ. ಡೆಲ್ಲಿಲಾದ್ರೆ ದಾರಾಳವಾಗಿ ಹೇಳಿಕಂಡು ತಿರಗಬವುದು. ಅದ್ಕೆ ಡೆಲ್ಲಿ ಸೆಲೆಕ್ಟ್ ಮಾಡಿಕಂಡ್ರು."

"ಅದೇನು ಸರಿಯಾಗೇಳ್ಳ."

"ಸರಿಯಾಗೇ ಹೇಳಿದ್ನಲ್ಲಕ್ಕ. ಕುಮಾರಣ್ಣ ಕರ್ನಾಟಕದಲ್ಲಿದ್ರೆ ನಮ್ಮ ರಾಧಕ್ಕನ್ನ ಸರಿಯಾಗಿ ಮಾತಾಡಸಕ್ಕಾಗದಿಲವಂತೆ. ಯಾಕಪ್ಪ ಅಂದ್ರೆ ನಿನ್ನಂಥೋರು, ಈ ಉಗ್ರಿ ಅಂಥೋರು ಪ್ರೇಮಿಗಳು ಪಾರ್ಕಲ್ಲಿ ಮಾತಾಡದನ್ನ ಸಯಿಸದಿಲ್ಲ, ಅದ್ಕೆ ಕುಮಾರಣ್ಣ ಡೆಲ್ಲಿ ಸೆಲೆಕ್ಟ್ ಮಾಡಿಕಂಡು ಹೋದ್ರು. ಅಲ್ಲಾದ್ರೆ ರಾಧಕ್ಕ ಮೀನಕ್ಕಾರ ಜೊತೆ ತಿರಗಾಡಿಕಂಡು, ಅನಿತಕ್ಕಾರ್ನ ಮರಿಬವುದು. ಅಲವೇನೊ ಉಗ್ರಿ, ನೀನೆ ಹೇಳೊ?"

"ರಾಧಕ್ಕೇನೂ ಸರಿ, ಮೀನಕ್ಕಾರೂ?"

"ಯಾರಾದ್ರು ಆಗಬವುದು. ರಾಧಕ್ಕ ಬರೋದು ಲೇಟಾದ್ರೆ ಬತ್ತರಲ್ಲ ಅವುರೆ ಮೀನಕ್ಕ. ನಮ್ಮ ದ್ವಡಪ್ಪನಿಗಾಗ್ಲೆ ಸಿಟ್ಟು ಬತ್ತಾ ಅದೆ."

"ಬ್ಯರ್ಕೆ ಬಡ್ಡೆತ್ತುದ್ದಲವೆ ನೀನು?"

"ಅಂಗಂದ್ರೆ ಬ್ರಿಲಿಯಂಟ್ ಬಡ್ಡಿ ಮಗ ಅಂತ ದ್ವಡಪ್ಪ ಅದೇನಾರ ಆಗ್ಲಿ, ಸಿದರಾಮಯ್ಯ ಕಡಿಗೂ ವಿಧಾನಸಭೆ ವಿರೋಧ ಪಕ್ಷದ ನಾಯಕ ಆದ. ಚಿಕ್ಕಣ್ಣ ಸ್ವೀಟೇನು ಮಾಡ್ತಿಯಪ್ಪ ಇವತ್ತು?"

"ನಾನೇನು ಸೀಟ್ ಮಾಡನ್ನ?" ಎಂದ ಚಿಕ್ಕಣ್ಣ ಅಸಹನೆಯಿಂದ.

"ಸಿದ್ದರಾಮಯ್ಯ ವಿರೋಧಪಕ್ಷದ ನಾಯಕಾದ ಕಣೊ."

"ಅವುನು ನಾಯಕಾದ್ರೆ ನನಿಗೇನೂ? ಮನೆತಕ್ಯೋದ್ರೆ ಏನಾರ ಮಾತಾಡಿಸ್ತನೆ, ಒಂದು ಲೋಟ ಕಾಫಿಕೊಟ್ಟನೆ?"

"ಮನೆತಕ್ಯೋದೇಟಿಗೆ ಮಾತಾಡಸಕ್ಕೆ ಅವುನ ಮನಿಯೇನು ಬಜೆಪಿ ಆಪೀಸೇನೊ?"

"ಬಜೆಪಿಗಳು ಈಗ ಯಾರ್ನು ಮಾತಾಡಸದಿಲವಂತೆ ಕಣೊ. ಮದ್ಲಿಗೆ ಹೋದೇಟಿಗೆ ಮಾತಾಡಿಸಿ ಕಳಸೋರಂತೆ. ಈಗ ಅವುರು ಕ್ಯಾರೆ ಅನ್ನದಿಲ್ಲ" ಎಂದ ಉಗ್ರಿ.

"ಯಾಕನ್ನದಿಲ್ಲ ಗೊತ್ತೇನೊ? ಇವುನು ಈಸ್ಬುರಪ್ಪನ ಕಡಿಯೋನಾದ್ರೆ ಅಥವ ಎಡೂರಪ್ಪನ ಬಳಗಾಗಿದ್ರೆ ಅಥವಾ ರೆಡ್ಡಿಗಳ ಕಡೆ ಕಳ್ಳ ಆಗಿದ್ರೆ ಅಂತ ಅನುಮಾನಗೊಂಡು ಬಜೆಪಿ ಆಫೀಸಲ್ಲಿ ಯಾರೋದ್ರು ಮಾತಾಡದಿಲವಂತೆ. ಅಂತೂ ಯಲ್ಲಾ ಪಾರ್ಟಿ ಕಾಯಿಲೆನೂ ಬಜೆಪಿಗೆ ಬತ್ತಲ್ಲ ಅದೇ ಒಂಥರ ಸಮಾಧಾನ."

" !?" ■

...ಪ್ಪಿಂಗ್' ಶ್ರೀನಿವಾಸ್

...ಮೊನ್ನೆ ಮುಗಿದ ಬೆಂಗಳೂರು ಕುದುರೆ ರೇಸ್‌ನಲ್ಲಿ ...ರ್ ಛಾಂಪಿಯನ್‌ಶಿಪ್ ಪಡೆದ ಡಿ.ಎಚ್. ಶ್ರೀನಿವಾಸ್... ...ರ್ ಅಂದರೆ ಕುದುರೆಯ ವಯಸ್ಸು, ಶಕ್ತಿ, ಹಿನ್ನೆಲೆ ...ಎಲ್ಲದರ ಲೆಕ್ಕಹಾಕಿ ಇದು ಗೆಲ್ಲುತ್ತೆ ಎಂದು ಪತ್ರಿಕೆಗಳಲ್ಲಿ ...ಯುವ ಮನುಷ್ಯ, ಡಿ.ಎಚ್. ಶ್ರೀನಿವಾಸ್ 'ಸಂಜೆವಾಣಿ' ... 'ದಿನಸುಡರ್' ಪತ್ರಿಕೆಗಳಿಗೆ ಈ ಟಿಪ್ಸ್ ನೀಡುವವರು. ... ವರ್ಷದ ಅವರೇ ಹೇಳುವಂತೆ "ನಾನೂ ಮಾಧ್ಯ ...ಧಾನಿ ಪಿ.ವಿ. ನರಸಿಂಹರಾವ್ ಮಾಧ್ಯ, ಆತನಿಗೆ ...ತ ಹದಿನೈದು ದಿನ ಹೆಚ್ಚು ವಯಸ್ಸು–ಆ ಮುಖ ..., ಒಂಚೂರಾದ್ರೂ ಜೀವ ಕಳೆ ಇದೆಯಾ ಛೇ!"

...ಯನಾಡು, ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಮುಂತಾದ ...ಗಳಲ್ಲೆಲ್ಲ ಇದ್ದ ಶ್ರೀನಿವಾಸ್ ಅವರ ಕುದುರೆಪ್ರೇಮ, ...ಪ್ರೇಮ, ಮಗುವಿನ ಮುಗ್ಧತೆ ಮತ್ತು ಜಾಣತನ ...ದರೆ ಆಶ್ಚರ್ಯವಾಗುತ್ತದೆ. ಆದರೆ ಅವರು ಈ ಸಲ ...ದ ಶಂಭೂಕಲ್ಯಾಂಡಿಕ್, ಇಂಡಿಯಾನಾ ಪೊಲೀಸ್, ...ಂಗ್ ವಿಶನ್..... ಅವು ಗೆಲ್ಲುತ್ತಿದ್ದಾಗ ಈ ಎಪ್ಪತ್ತು ...ದ ಶ್ರೀನಿವಾಸ್ ಅವುಗಳನ್ನು ಕರೆಯುತ್ತಿದ್ದುದನ್ನು, ...ನ್ನಿಸುತ್ತಿದ್ದುದನ್ನು, ಕುಣಿಯುತ್ತಿದ್ದುದನ್ನು ನೀವು ನೋಡಬೇಕಿತ್ತು. ರಂಜನೆಗಾಗಿ ... ಕ್ರೀಡೆಯಲ್ಲಿ ಕರಗುವುದಕ್ಕಾಗಿ ಎಂದಾದರೊಮ್ಮೆ ನಾವು ಹೋಗುವ ಈ ... ಎಂಥೆಂಥವರಿಗೆ ಎಂತೆಂಥ ಜೀವ ಕೊಡಬಲ್ಲುದು, ಹಾಗೆಯೇ ತಲೆನೋವು ...ಬಲ್ಲುದು!

-ಆಗಸ್ಟ್ 11, 1991




'ಪುರುಷ'ಗಳು

ನಮ್ಮ ಪಂಡಿತರು ಸರಳವಾದ ವಿಷಯವನ್ನು ಹೇಗೆ ಜಟಿಲಗೊಳಿಸುತ್ತಾರೆ!

ನಾನು ಮೊನ್ನೆ ತಮಾಷೆಗೆ ಉತ್ತಮ ಪುರುಷ, ಪ್ರಥಮ ಪುರುಷ, ಮಧ್ಯಮ ಪುರುಷರಲ್ಲಿ ಯಾವುದು **first person**, ಯಾವುದು **third person** ಎಂದು ಕೇಳಿದೆ. ಪಂಡಿತನೇ ಗೊಂದಲಗೊಂಡು ತಡವರಿಸತೊಡಗಿದ. ನಾನು, ನೀನು, ಅವನು–ಎಂಬ ಮೂರು ಪುರುಷಗಳು ಸುಲಭ; **first, second, third person**ಗಳು. ಅದನ್ನೇ ಪ್ರಥಮ ಪುರುಷ, ಉತ್ತಮ ಪುರುಷ, ಮಧ್ಯಮ ಪುರುಷ ಎಂದು ನೋಡಿ... ನಿಮಗೆ ತಲೆಕೆಟ್ಟುಹೋಗುತ್ತದೆ.

ಈ ದೇಶಕ್ಕೆ ಬಂದೊಡನೆ ಬಾಬರ್, ನಾದಿರ್ ಶಾ ಮುಂತಾದವರಲ್ಲಿ ವಿಚಿತ್ರ ಗೊಂದಲ, ಆತಂಕ ಶುರುವಾಯಿತಂತೆ. ಇಲ್ಲಿಯ ಜನ ಇರಬೇಕಾದದ್ದಕ್ಕಿಂತ ಹೆಚ್ಚು ವಿಧೇಯವಾಗಿ, ಸಹಜಮಾನವರಿಗಿಂತ ಹೆಚ್ಚು ಪಿತೂರಿಕಾರರಾಗಿ, ತಮ್ಮ ದೊರೆಯ ವಿರುದ್ಧವೇ ಪಿಸುಮಾತಿನಲ್ಲಿ ಚಾಡಿ ಹೇಳುವವರಾಗಿ ಕಂಡರಂತೆ. ನಾದಿರ್ ಶಾನ ಸಾಮಾನ್ಯ ಸೈನಿಕ ಕೂಡ ಇಲ್ಲಿಯ ಜನರ ಸಹವಾಸದಿಂದ ಪುಟಾಣಿ ದೊರೆಯಂತೆ ಬೀಗತೊಡಗಿದನಂತೆ. ಅದಿರಲಿ. ಈ ವಿಷಯವನ್ನೇ ವರ್ಣಿಸುವ 'ದಿಲ್ಲಿ' ಎಂಬ ಖುಷ್‌ವಂತ್‌ಸಿಂಗ್ ಅವರ ಪುಸ್ತಕದತ್ತ ಒಮ್ಮೆ ಕಣ್ಣು ಹಾಕಿ. ಅಲ್ಲಿ ಪರಿವಿಡಿ ಇದೆ. ಆದರೆ ಅಧ್ಯಾಯದ ಪುಟಸಂಖ್ಯೆ ಅಚ್ಚಾಗಿಲ್ಲ; ಪರಿವಿಡಿಯ ವಿಷಯ ಪುಟಗಳಲ್ಲಿ ಅಚ್ಚಾಗಿಲ್ಲ. ಪಿಕಾದರ್, ಪೆಂಗ್ವಿನ್ ಪ್ರಕಾಶಕರು ಭಾರತಕ್ಕೆ ಬಂದೊಡನೆ ಹೇಗೆ ಇಲ್ಲಿಯ ಸೋಮಾರಿತನ, ದಡ್ಡತನ ಪಡೆದುಕೊಳ್ಳುತ್ತಾರೆ!



ಪ್ರಥಮ ಪುರುಷ **first person** ಆದರೆ ಉತ್ತಮ ಪುರುಷ ಹೇಗೆ **third** ಅಥವಾ **second person**? ವ್ಯಾಕರಣ ಬರೆಯುವವರು ವೈಚಾರಿಕತೆ ಮತ್ತು ನೆನಪಿಗಾದರೂ ಪ್ರಾಮುಖ್ಯ ಕೊಡಬೇಲ್ಲವೆ?

ಇದರ ವಿವರಣೆ ನಿಘಂಟುಗಳಲ್ಲಿ ಕೂಡ ಇಲ್ಲ!


-ಆಗಸ್ಟ್ 18, 1991

▸▸▸ 2

ವ್ಯವಹಾರದ ಮುಖಂಡನನ್ನಾಗಿ ಮಾಡಿದೆ ಎಂದರೆ ಆಫ್ರನ್ ಮುಸ್ಲಿಮರ ಬಗ್ಗೆ ಒಬಾಮಾಗೆ ಎಷ್ಟೊಂದು ಮಮತೆಯಿದೆ ಎಂಬುದು ಗೊತ್ತಾಗುತ್ತದಲ್ಲವೇ?


ಇರಾಕ್: "2012ಕ್ಕೆ ಮುಂಚೆ ಅಮೆರಿಕ ಸೇನೆ ಹಿಂತಿರುಗುವುದಿಲ್ಲ"

ಒಬಾಮಾ ಪ್ರಕಾರ ಅಮೆರಿಕ ಮತ್ತು ಮುಸ್ಲಿಂ ಜಗತ್ತಿನ ಬಾಂಧವ್ಯವನ್ನು ಕೆಡಿಸಿರುವ ಮತ್ತೊಂದು ಅಂಶ ಅಮೆರಿಕ ಇರಾಕ್‌ಅನ್ನು ಆಕ್ರಮಿಸಿರುವುದು. ಹಾಗಿದ್ದಲ್ಲಿ ಮತ್ತೊಂದು ದೇಶದ ಮೇಲೆ ಆಕ್ರಮಣ ಮಾಡಿ ಆ ದೇಶದ ಅಧ್ಯಕ್ಷನನ್ನು ಕೊಂದಿದ್ದರ ಬಗ್ಗೆ ಒಬಾಮಾ ತನ್ನ ಭಾಷಣದಲ್ಲಿ ವಿಷಾದ ವ್ಯಕ್ತಪಡಿಸಿದರೇ? ಖಂಡಿತಾ ಇಲ್ಲ. ಬದಲಿಗೆ ಒಬಾಮಾ ಸಹ ಸದ್ದಾಂನನ್ನು ಕೊಂದ ನಂತರ ಬುಷ್ ಹೇಳಿದಂತೆ "ಸದ್ದಾಂ ಹುಸೇನ ನಂತ ನಿರಂಕುಶಾಧಿಕಾರಿಯಿಂದ ವಿಮೋಚನೆ ಗೊಂಡು ಇರಾಕಿನ ಜನ ಮೊದಲಿಗಿಂತ ಹೆಚ್ಚು ನೆಮ್ಮದಿಯಿಂದಿದ್ದಾರೆ ಎಂದು ನಾನು ಭಾವಿಸುತ್ತೇನೆ" ಎಂದು ಹೇಳುತ್ತಾ ಅಮೆರಿಕದ ಆಕ್ರಮಣವನ್ನು ಸಮರ್ಥಿಸಿ ಕೊಂಡಿದ್ದಾರೆ. ಕನಿಷ್ಠ ಬುಷ್ 2011ಕ್ಕೆ ಅಮೆರಿಕ ಸೇನೆ ಇರಾಕಿಂದ ಕಾಲ್ತೆಗೆಯುತ್ತದೆ ಎಂದು ಹೇಳಿದ್ದ. ಆದರೆ ಒಬಾಮಾ ತನ್ನ ಭಾಷಣದಲ್ಲಿ ಈ ಅವಧಿಯನ್ನು 2012ರ ತನಕ ವಿಸ್ತರಿಸಬಹುದೆಂಬ ಸೂಚನೆ ನೀಡಿದ್ದಾರೆ. ಹಾಗಿದ್ದ ಮೇಲೆ ಒಬಾಮಾ ಇರಾಕಿನ ಜನರಿಗೆ ಚಂದಮಾಮ ಹೇಗಾಗುತ್ತಾನೆ?


ಜನರಲ್ ಮೆಕ್‌ಕ್ರಿಸ್ಟಲ್

ಪ್ಯಾಲೆಸ್ತೀನ್: "ಇಸ್ರೇಲ್ ನಮ್ಮ ಸ್ನೇಹಿತ-ಪ್ಯಾಲೆಸ್ತೀನೀಯರು ಹಿಂಸೆ ಕೈಬಿಡಬೇಕು"

ಒಬಾಮಾರ ಭಾಷಣದಲ್ಲಿ ಅತ್ಯಂತ ಆತ್ಮ ವಂಚನೆ ಯಿಂದ ಕೂಡಿದ್ದು ಇಸ್ರೇಲ್-ಪ್ಯಾಲೇಸ್ತಿನ್ ಸಂಘರ್ಷದ ಬಗ್ಗೆ ಆತನ ನಿಲುವು. 1967ರಿಂದಲೂ ಇಸ್ರೇಲ್



ಅಮೆರಿಕದ ಕುಮ್ಮಕ್ಕಿನೊಂದಿಗೆ ಪ್ಯಾಲೆಸ್ತೀನಿಯರ ಪ್ರದೇಶವನ್ನು ಆಕ್ರಮಿಸುತ್ತಾ ಬಂದಿರುವುದನ್ನು ಇಡೀ ಜಗತ್ತೇ ಖಂಡಿಸುತ್ತಾ ಬಂದಿದೆ. ಅದರಲ್ಲೂ ಇತ್ತೀಚಿನ ವರ್ಷಗಳಲ್ಲಿ ಇಸ್ರೇಲ್ ಪ್ಯಾಲೆಸ್ತೀನಿಯರ ಎಲ್ಲಾ ಜಾಗದಲ್ಲೂ ಇಸ್ರೇಲಿ ಸೆಟಲ್‌ಮೆಂಟುಗಳನ್ನು ನಿರ್ಮಿಸುತ್ತಿದೆ. ಜರ್ಮನ್ ಗೋಡೆಯಂತೆ ಎರಡೂ ಪ್ರದೇಶಗಳನ್ನು ಬೇರ್ಪಡಿಸುವ ರೀತಿ ನೂರಾರು ಮೈಲಿಯುದ್ದದ ಗೋಡೆಯನ್ನು ಕಟ್ಟಿದೆ. ದಯದಾಕ್ಷಿಣ್ಯವಿಲ್ಲದೆ ಪ್ಯಾಲೆಸ್ತೀನಿಯರು ವಾಸ ಮಾಡುವ ಪ್ರದೇಶಗಳ ಮೇಲೆ ಯುದ್ಧ ಟ್ಯಾಂಕರುಗಳಿಂದ ಮತ್ತು ಬಾಂಬುಗಳಿಂದ ದಾಳಿ ನಡೆಸುತ್ತಾ ಹಸುಕಂದಮ್ಮಗಳನ್ನೂ, ನಿರಾಯುಧರನ್ನು ಕೊಂದು ಹಾಕುತ್ತಿದೆ. ಯುವಕರನ್ನು ಭಯೋತ್ಪಾದನೆಯ ಹೆಸರಲ್ಲಿ ನಿರ್ದಯವಾಗಿ ಕೊಲ್ಲುತ್ತಾ ಬಂದಿದೆ. ಇವೆಲ್ಲಕ್ಕೂ ಅಮೆರಿಕದ ಸಂಪೂರ್ಣ ಬೆಂಬಲ ಮತ್ತು ಸೇನಾ ಸಹಕಾರವಿದೆ. ಒಬಾಮಾಗೆ ನಿಜಕ್ಕೂ ಇದರ ಬಗ್ಗೆ ಪಶ್ಚಾತ್ತಾಪವಿದ್ದರೆ ಯಾವ ಕ್ರಮಗಳನ್ನು ಕೈಗೊಳ್ಳದಿದ್ದರೂ. ಪರವಾಗಿಲ್ಲ ತಮ್ಮ ಕಾವ್ಯಾತ್ಮಕ ಭಾಷಣದ ಕೆಲವು ಸಾಲುಗಳನ್ನು ಇಸ್ರೇಲಿ ಭಯೋತ್ಪಾದನೆಯನ್ನು ಖಂಡಿಸಲು ಬಳಸಬಹುದಿತ್ತು, ಆದರೆ ಒಬಾಮಾ ತಮ್ಮ ಭಾಷಣದುದ್ದಕ್ಕೂ ಹೇಗೆ ಯೆಹೂದಿಗಳು ಇತಿಹಾಸದಲ್ಲಿ ಅತ್ಯಂತ ಬರ್ಬರ ದೌರ್ಜನ್ಯಕ್ಕೆ ತುತ್ತಾಗಿದ್ದರೆಂದು ಕಣ್ಣೀರು ಸುರಿಸಿದರೆ ವಿನಃ ವರ್ತಮಾನದಲ್ಲಿ ಇಸ್ರೇಲಿಯರು ನಡೆಸುತ್ತಿರುವ ಬೀಭತ್ಸ ಹತ್ಯಾಕಾಂಡದ ಬಗ್ಗೆ ಚಕಾರವೆತ್ತಲಿಲ್ಲ, ಬದಲಿಗೆ "ಪ್ಯಾಲೆಸ್ತೀನೀಯರು ಹಿಂಸೆಯನ್ನು ಕೈಬಿಡಬೇಕು" ಎಂಬ ಸಲಹೆ ನೀಡಿದರು. ಅದರರ್ಥ ಪ್ಯಾಲೇಸ್ತೀನೀಯರು ಮರುಮಾತಿಲ್ಲದೆ ಇಸ್ರೇಲಿ ಭಯೋತ್ಪಾದನೆಯನ್ನು ಒಪ್ಪಿಕೊಳ್ಳಬೇಕು.

ಇದಲ್ಲದೆ ಈ ಸಂಘರ್ಷ ಬಗೆಹರಿಯಬೇಕಾದರೆ ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ಎಂಬ ಎರಡು ದೇಶಗಳು ಸೃಷ್ಟಿಯಾಗಬೇಕು ಎಂದು ಹೇಳಿದರಾದರೂ ಅದನ್ನು ಇಸ್ರೇಲಿ ನಾಯಕತ್ವ ಕಳೆದ ತಿಂಗಳಷ್ಟೆ ಸಾರಾಸಗಟಾಗಿ ನಿರಾಕರಿಸಿರುವ ಬಗ್ಗೆ ಏನೂ ಹೇಳಲಿಲ್ಲ. ಮಾತ್ರವಲ್ಲ, ಕಳೆದ ತಿಂಗಳು ಅಮೆರಿಕ-ಇಸ್ರೇಲ್ ಮಾತುಕತೆಯ ನಂತರವೂ ಪ್ಯಾಲೆಸ್ತೀನ್ ಪ್ರದೇಶದಲ್ಲಿ ಇಸ್ರೇಲ್ 20ಕ್ಕೂ ಹೆಚ್ಚು ಹೊಸ ಸೆಟಲ್‌ಮೆಂಟ್‌ಗಳನ್ನು ನಿರ್ಮಿಸಿರುವ ಬಗ್ಗೆ ಹೊಸ ಆಕ್ಷೇಪಣೆಯನ್ನಾಗಲೀ, ಈ ಉಲ್ಲಂಘನೆಯ ಬಗ್ಗೆ ಕ್ರಮ ಜರುಗಿಸುತ್ತೇವೆಂದಾಗಲೀ ಹೇಳಲಿಲ್ಲ, ಇದೇ ಬಗೆಯ ಒಪ್ಪಂದವನ್ನು ಅರಬ್ ದೇಶವೊಂದು ಉಲ್ಲಂಘಿಸಿದ್ದರೆ ಅಮೆರಿಕದ ಧೋರಣೆ ಇದೇ ರೀತಿ ಇರುತ್ತಿತ್ತೇ? ಎಲ್ಲಕ್ಕಿಂತ ಹೆಚ್ಚಾಗಿ ಇಸ್ರೇಲ್ ಈ ಭೂಪ್ರದೇಶದಲ್ಲಿ ಅಮೆರಿಕದ ಆಪ್ತಮಿತ್ರ ನೆಂದು ಒಬಾಮಾ ಸಹ ತಮ್ಮ ಭಾಷಣದಲ್ಲಿ ಘೋಷಿಸಿದರು. ಹೀಗಿದ್ದರೂ ಒಬಾಮಾನಲ್ಲಿ ಮುಸ್ಲಿಂ ಜಗತ್ತು ಹೊಸ ಸ್ನೇಹಿತನನ್ನು ಹೇಗೆ ಕಾಣಲು ಸಾಧ್ಯ?

ಆದ್ದರಿಂದಲೇ ಈ ಭಾಷಣದ ಬಗ್ಗೆ ಪ್ರತಿಕ್ರಿಯೆ ನೀಡುತ್ತಾ ಜಗತ್ತಿನ ಪ್ರಖ್ಯಾತ ಚಿಂತಕ ನೋಮ್ ಚೋಮ್‌ಸ್ಕಿಯವರು "ಇಸ್ರೇಲ್-ಪ್ಯಾಲೆಸ್ತೀನ್ ವಿವಾದದ ಬಗ್ಗೆ ಒಬಾಮಾರವರು ಮಾತನಾಡುತ್ತಾ ಪರಸ್ಪರರು ಒಬ್ಬರ ಮೇಲೆ ಒಬ್ಬರು ದೂರು ಹೊರಿಸುವಂತ ಪದ್ಧತಿ ಅನುಸರಿಸಬಾರದು ಅಥವಾ ಈ ಸಂಘರ್ಷವನ್ನು ಒಂದು ಕಡೆಯಿಂದ ಮಾತ್ರ ನೋಡದೆ ಎರಡೂ ಕಡೆಯಿಂದ ನೋಡಬೇಕು ಎಂದು ಹೇಳಿದ್ದಾರೆ. ಆದರೆ ಇದಕ್ಕೆ ಮೂರನೇ ಮುಖವೂ ಒಂದಿದೆ. ಅದು ಅಮೆರಿ ಕದ್ದು. ಏಕೆಂದರೆ ಅದೇ ಈ ಸಂಘರ್ಷ ಮುಂದುವರೆದು ಕೊಂಡು ಬರುವಲ್ಲಿ ಪ್ರಮುಖ ಪಾತ್ರವಹಿಸಿದೆ. ಹೀಗಾಗಿ ಈ ಸಂಘರ್ಷದಲ್ಲಿ ಅಮೆರಿಕದ ಪಾತ್ರವೇನಾದರೂ ಬದಲಾಗಬಹುದೇ ಎಂಬ ಬಗ್ಗೆ ಒಬಾಮಾ ಯಾವುದೇ ಸೂಚನೆಯನ್ನೂ ಕೊಟ್ಟಿಲ್ಲ" ಎಂದು ಅಭಿಪ್ರಾಯ ಪಡುತ್ತಾರೆ. ಹಾಗಿದ್ದಲ್ಲಿ ಒಬಾಮಾ ಈ ವಿವಾದ ಬಗೆಹರಿಯಲು ಇಸ್ರೇಲ್ ಸಮ್ಮತಿಯಿರದ "ಎರಡು ದೇಶಗಳ ಸಿದ್ಧಾಂತವನ್ನು" ಏಕೆ ಮುಂದಿಟ್ಟರು ಎಂಬ ಪ್ರಶ್ನೆಗೆ ಉತ್ತರ ನೀಡುತ್ತಾ "ಇದಕ್ಕೆ ಉತ್ತರವನ್ನು ಒಬಾಮಾ ಸರ್ಕಾರದ ವಿದೇಶ ವ್ಯವಹಾರದ ಸಂಸದರ ಸಮಿತಿಯ ಅಧ್ಯಕ್ಷನಾದ ಜಾನ್ ಕೆರ್ರಿ ಅತ್ಯಂತ ಸ್ಪಷ್ಟವಾಗಿ ನೀಡುತ್ತಾರೆ. ಇದರ ಹಿಂದಿನ ಒಬಾಮಾ ಸರ್ಕಾರದ ಉದ್ದೇಶವೇನೆಂದರೆ ಅಮೆರಿಕಕ್ಕೆ ಈಗ ಬಹುಮುಖ್ಯ ಶತ್ರು ದೇಶವಾಗಿ ಪರಿಣಮಿಸಿರುವ ಇರಾನ್ ವಿರುದ್ಧ ಇಸ್ರೇಲ್ ಮತ್ತು ಇತರ ಸುಧಾರಣಾವಾದಿ ಅರಬ್ ದೇಶಗಳ ಮೈತ್ರಿಕೂಟ ವನ್ನು ಹುಟ್ಟುಹಾಕುವುದೇ ಆಗಿದೆ. ಇಲ್ಲಿ ಸುಧಾರಣಾವಾದಿ ಅರಬ್ ದೇಶಗಳೆಂದರೆ ಅಮೆರಿಕದ ಆದೇಶಗಳನ್ನು ಒಪ್ಪಿಕೊಳ್ಳುವ ಅರಬ್ ದೇಶಗಳೆಂದೇ ಅರ್ಥ" ಎಂದು ಸ್ಪಷ್ಟವಾಗಿ ಒಬಾಮಾ ಸರ್ಕಾರದ ಒಳ ಉದ್ದೇಶಗಳನ್ನು ಬಯಲಿಗೆಳೆಯುತ್ತಾರೆ. ಹೀಗಾಗಿ ಒಬಾಮಾನ ಪಾರಿವಾಳ ಮುಖವಾಡದ ಹಿಂದೆ ಯುದ್ಧಕೋರ ಗಿಡುಗನಿಲ್ಲವೇ?

ಇರಾನ್: "ನಿಶಸ್ತ್ರೀಕರಣಗೊಳ್ಳಿ...ಇಲ್ಲವೇ..."

ಮುಸ್ಲಿಂ ಜಗತ್ತಿಗೆ ಅಮೆರಿಕದ ಬಗ್ಗೆ ತಪ್ಪು ತಿಳಿವಳಿಕೆಯ ಹಿಂದಿರುವ ಮತ್ತೊಂದು ವಿಷಯವೆಂದರೆ ಇರಾನ್ ಬಗ್ಗೆ ಅಮೆರಿಕದ ನೀತಿ ಎಂಬುದು ಒಬಾಮಾ ಅಭಿಪ್ರಾಯ. ಆದರೆ ತಮ್ಮ ಕೈರೋ ಭಾಷಣದಲ್ಲಿ ಇರಾನ್ ಬಗ್ಗೆ ಒಬಾಮಾ ಮಾತಾಡಿದ್ದೆಲ್ಲಾ ಅದು ಅಣ್ವಸ್ತ್ರ ರಾಷ್ಟ್ರವಾಗುವುದರಿಂದ ಎದುರಾಗುವ ಅಪಾಯದ ಬಗ್ಗೆ ಮಾತ್ರ. "ಬೇರೆ ವಿಷಯದಲ್ಲಿ ಏನೇ ಇದ್ದರೂ ಅಣ್ವಸ್ತ್ರ ವಿಷಯದಲ್ಲಿ ಮಾತ್ರ ನಮ್ಮ ದೇಶ ಸ್ಪಷ್ಟ ನಿಲುವನ್ನು ತೆಗೆದುಕೊಂಡಿದೆ. ಯಾವ ದೇಶಗಳು ಅಣ್ವಸ್ತ್ರವನ್ನು ಹೊಂದುವುದನ್ನು ನಾವು ನೋಡುತ್ತಾ ಕೂರಲು ಸಾಧ್ಯವಿಲ್ಲ" ಎಂದಿದ್ದಾರೆ. ಆದರೆ ಇದೇ ಅಮೆರಿಕವೇ ಇಸ್ರೇಲ್ ದೇಶಕ್ಕೆ ಅಣ್ವಸ್ತ್ರವನ್ನು ರವಾನಿಸಿದ್ದು ಮತ್ತು ಇಸ್ರೇಲ್ ಅದೇ ಮದದಿಂದಲೇ ಸುತ್ತಮುತ್ತಲ ಅರಬ ದೇಶಗಳನ್ನು ಬೆದರಿಸುತ್ತಿರುವುದು. ಅದರ ಬಗ್ಗೆ ಒಬಾಮಾ ಹೇಳಿದ್ದೆಲ್ಲಾ ಇಷ್ಟೆ: "ಯಾವ ದೇಶವೂ ಅಣ್ವಸ್ತ್ರ ಹೊಂದಬಾರದೆಂಬುದೇ ನಮ್ಮ ಉದ್ದೇಶ". ಆದರೆ ಇರಾನ್ ಅಣ್ವಸ್ತ್ರ ತಯಾರಿಸಿದರೆ ಸಹಿಸಲು ಸಾಧ್ಯವಿಲ್ಲ-ಇಸ್ರೇಲ್ ಅಣ್ವಸ್ತ್ರ ಹೊಂದಿದ್ದರೂ ಪರವಾಗಿಲ್ಲ, ಇದೇ ಬುಷನ ಇಬ್ಬಗೆಯ ನೀತಿಯೂ ಆಗಿತ್ತು, ಇದನ್ನೇ ಒಬಾಮಾ ಕೂಡಾ ಪುನರುಚ್ಚರಿಸಿದ್ದಾರೆ. ಆದರೆ ಇದರ ಹಿಂದಿನ ಉದ್ದೇಶ ಬೇರೆಯೇ ಇದೆ. ಇರಾನ್ ಸುತ್ತ ದಲ್ಲಾಳಿ ಅರಬ್ ದೇಶಗಳ ಮತ್ತು ಇಸ್ರೇಲ್ ಕೂಟ ರಚಿಸಿ ಅದನ್ನು ಬಗ್ಗು ಬಡಿಯುವ ಉದ್ದೇಶದಿಂದಲೇ ಒಬಾಮಾ ಮಧ್ಯಪ್ರಾಚ್ಯ ಪ್ರವಾಸ ಕೈಗೊಂಡಿದ್ದೆಂದು ಹಲವು ವಿಶ್ಲೇಷಕರು ಹೇಳುತ್ತಾರೆ. ಹೀಗಾಗಿ ಇರಾನ್ ಬಗ್ಗೆ ಒಬಾಮಾ ಭಾಷಣದುದ್ದಕ್ಕೂ ಇದ್ದದ್ದು ಮುಸುಕು ಯುದ್ಧದ ಮಾತುಗಳೇ! ಯುದ್ಧಕೋರನ ಬಾಯಲ್ಲಿ ಶಾಂತಿಮಂತ್ರ ಕಂಡು ಬೆರಗಾಗುವವರನ್ನು ಏನೆಂದು ಕರೆಯಬೇಕು?

ಪ್ರಜಾತಂತ್ರ ಮತ್ತು ಧಾರ್ಮಿಕ ಸ್ವಾತಂತ್ರ್ಯ: ಒಳಗೊಂದು ಹೊರಗೊಂದು!


ಮುಸ್ಲಿಂ ಜಗತ್ತು ಮತ್ತು ಅಮೆರಿಕದ ಸಂಬಂಧಗಳನ್ನು ಬಾಧಿಸುತ್ತಿರುವ ಮತ್ತೊಂದು ಪ್ರಮುಖ ಅಂಶ ಪ್ರಜಾತಂತ್ರ ಮತ್ತು ಧಾರ್ಮಿಕ ಸ್ವಾತಂತ್ರ್ಯ ಎಂದು ಒಬಾಮಾ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. "ಜನರಿಂದಲೇ ಆಯ್ಕೆಗೊಳ್ಳುವ ಮತ್ತು ಕಾನೂನಿನ ಆಡಳಿತವನ್ನು ಎತ್ತಿ ಹಿಡಿಯುವ ದೇಶಗಳು ಸ್ಥಿರವಾಗುಳಿಯುತ್ತವೆ. ನಾಗರಿಕರು ಬಯಸಿದಂತೆ ಬದುಕುವ ಸ್ವಾತಂತ್ರ್ಯ ನೀಡುವುದು ಕೇವಲ ಅಮೆರಿಕನ್ ಮೌಲ್ಯಗಳಲ್ಲ, ಅದು ಮಾನವೀಯ ಮೌಲ್ಯ" ಎಂದು ಒಬಾಮಾ ಅಪ್ಪಟ ಪ್ರಜಾತಂತ್ರವಾದಿಯಂತೆ ಭಾಷಣ ಮಾಡಿದ್ದಾರೆ. ಆದರೆ ಕೈರೋಗೆ ಬರುವ ಮುಂಚೆ ಒಬಾಮಾ ಮಾಡಿದ್ದೇನು? ಒಬಾಮಾ ತನ್ನ ಪ್ರಜಾತಾಂತ್ರಿಕ ಸ್ನೇಹವನ್ನು ಮುಂದುವರೆಸುವ ಖಾತರಿ ಕೊಟ್ಟು ಬಂದಿದ್ದು ಅರಬ್ ದೇಶಗಳಲ್ಲಿ ಎಲ್ಲರಿಗಿಂತ ಹೆಚ್ಚು ವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡುತ್ತಿರುವ ಸೌದಿ ಅರೇಬಿಯಾದ ರಾಜ ಅಬ್ದುಲ್ಲಾನಿಗೆ. ಮತ್ತು ಈಜಿಪ್ಟ್ ದೇಶದ ಸರ್ವಾಧಿಕಾರಿ ಹೊಸ್ನಿ ಮುಬಾರಕ್‌ನಿಗೆ. ಕೈರೋ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡುವ ಹಿಂದಿನ ದಿನವೂ ಸಹ ಮುಬಾರಕ್‌ನ ಸರ್ವಾಧಿಕಾರಿ ಸರ್ಕಾರ 200ಕ್ಕೂ ಹೆಚ್ಚು ವಿದೇಶಿ ವಿದ್ಯಾರ್ಥಿಗಳನ್ನು ವಿನಾಕಾರಣ ಬಂಧಿಸಿ ಜೈಲಿಗೆ ದೂಡಿತ್ತು.

ಇನ್ನು ಸೆಪ್ಟೆಂಬರ್ 11 ರ ನಂತರ ಅಮೆರಿಕದೊಳಗೆ ಪರಧರ್ಮ ಸಹಿಷ್ಣುತೆ ಇಲ್ಲದಂತೆ ಮಾಡುವ ಪೇಟ್ರಿಯಟ್ ಕಾಯಿದೆಯನ್ನು ಜಾರಿ ಮಾಡಲಾಗಿದೆ. ಇದರ ಪ್ರಕಾರ ಸರ್ಕಾರ ಭಯೋತ್ಪಾದಕ ಸಂಘಟನೆ ಎಂದು ಘೋಷಿಸುವ ಸಂಘಟನೆಗೆ "ಭೌತಿಕ ಸಹಾಯ", "ತರಬೇತಿ" ಕೊಡುವುದನ್ನು ಮಾತ್ರವಲ್ಲದೆ ಯಾವುದೇ "ಪರಿಣಿತ ಸಲಹೆ, ಸಹಕಾರ ಅಥವಾ ಸೇವೆ"ಗಳನ್ನು ಒದಗಿಸುವುದೂ ಸಹ ಶಿಕ್ಷಾರ್ಹ ಅಪರಾಧವಾಗುತ್ತದೆ. ಇದು, ಸರ್ಕಾರ ಸಕಾರಣವಾಗಿ ಅಥವಾ ವಿನಾಕಾರಣವಾಗಿ ನಿಷೇಧಿಸುವ ಯಾವುದೇ ಸಂಘಟನೆಗೆ ದೋಷಮುಕ್ತಗೊಳ್ಳಲು ಸಹಾಯ ಮಾಡುವುದನ್ನೂ ಕಾನೂನು ಸಲಹೆ ಸಹಕಾರ ನೀಡುವುದನ್ನೂ ಸಹ ನಿಷೇಧಿಸುತ್ತದೆ. 2001ರ ಸೆಪ್ಟೆಂಬರ್ 11ರ ನಂತರ ಈ ಕಾಯಿದೆಯಿಂದ ಅತ್ಯಂತ ಬಾಧೆಗೊಳ ಗಾದವರು ಮುಸ್ಲಿಮರು. ಅಮೆರಿಕದ ಕೆಳಗಿನ ನ್ಯಾಯಾ ಲಯಗಳು ಈ ಕಾಯಿದೆಯನ್ನು ಸಂವಿಧಾನಬಾಹಿರ ಎಂದು ಘೋಷಿಸಿದ್ದವು. ಆದರೆ ಒಬಾಮಾರ ಸರ್ಕಾರ ಒಬಾಮಾ ಕೈರೋಗೆ ಪ್ರವಾಸ ಕೈಗೊಳ್ಳುವ ಸ್ವಲ್ಪ ಮುಂಚೆ ಈ ನ್ಯಾಯಾಲಯಗಳ ನಿರ್ಧಾರವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದೆ!

ಇದು ಕವಿ ಹೃದಯಿ, ಪ್ರಜಾತಂತ್ರವಾದಿ, ಶಾಂತಿದೂತ ಒಬಾಮಾರ ಅಸಲಿ ರೂಪ. ಹಾಗಿದ್ದಲ್ಲಿ ಒಬಾಮಾನಂತ ಒಬಾಮಾ ಶಾಂತಿದೂತನ ಮುಖವಾಡ ಏಕೆ ಧರಿಸ ಬೇಕಾಗಿದೆ? ಇದಕ್ಕೆ ಅಮೆರಿಕನ್ ಸಾಮ್ರಾಜ್ಯವಾದದ ಅತ್ಯಂತ ಪ್ರಮುಖ ಪ್ರತಿಪಾದಕ ಬ್ರೆಜೆಜಿನ್‌ಸ್ಕಿ 2007ರಲ್ಲೇ ಒಂದು ಸ್ಪಷ್ಟ ಉತ್ತರ ನೀಡಿದ್ದರು. "ಪ್ರಪಂಚದ ಉಳ್ಳವರು ಅದರಲ್ಲೂ ವಿಶೇಷವಾಗಿ ಅಮೆರಿಕ ಜಗತ್ತಿನಲ್ಲಿ ಹೆಚ್ಚುತ್ತಿರುವ ರಾಜಕೀಯ ಪ್ರಜ್ಞೆಯ ಬಗ್ಗೆ ಎಚ್ಚರದಿಂದಿರಬೇಕು. ಹೆಚ್ಚುತ್ತಿರುವ ತಾರತಮ್ಯ ಮತ್ತು ಅಸಮಾನತೆಯನ್ನು ಮನುಕುಲ ಹೆಚ್ಚು ಕಾಲ ಸಹಿಸುವುದಿಲ್ಲ, ಪ್ರಾಯಶಃ ಮುಂದಿನ ದಶಕಗಳಲ್ಲಿ ನಾವು ಅತ್ಯಂತ ಹೆಚ್ಚು ಜಾಗರೂಕವಾಗಿರಬೇಕಾದ ಅಪಾಯವಿದೆ." ಬ್ರೆಜೆಜಿನ್‌ಸ್ಕಿ ಪ್ರಕಾರ "ಒಬಾಮಾಗೆ ಈ ಸವಾಲು ಅರ್ಥವಾಗಿದೆ. ಇಂದು ಜಗತ್ತಿಗೆ ಹೊಸ ಮುಖದ, ಹೊಸ ದಿಕ್ಕಿನ, ಅದರಲ್ಲಿ ಅಮೆರಿಕಕ್ಕೆ ಹೊಸ ಪಾತ್ರವನ್ನು ನಿರ್ವಚನ ಮಾಡುವ ಅಗತ್ಯವಿದೆ... ಆದ್ದರಿಂದಲೇ ಈ ಹೊಸ ಸನ್ನಿವೇಶದಲ್ಲಿ ಒಬಾಮಾ ಅತ್ಯಂತ ಪರಿಣಾಮಕಾರಿಯಾಗಿದ್ದಾನೆ ಮತ್ತು ಮೇಲುಗೈ ಪಡೆದಿದ್ದಾನೆ. ಇಂದು ಐತಿಹಾಸಿಕವಾಗಿ ಸುಸಂಬದ್ಧವಾದದ್ದು ಯಾವುದು ಮತ್ತು ಜಗತ್ತಿನೊಂದಿಗೆ ಅಮೆರಿಕ ಯಾವ ಸಂಬಂಧವನ್ನು ಹೊಂದಿರಬೇಕು ಎಂಬ ಬಗ್ಗೆ ಒಬಾಮಾನಿಗೆ ಸ್ಪಷ್ಟ ಅರಿವಿದೆ.".

ಇದು ಸಿಹಿ ಮಾತುಗಳ ಹಿಂದೆ ಮರೆಯಾಗಿರುವ ಕಹಿ ಸತ್ಯಗಳು. ಮಧ್ಯಪ್ರಾಚ್ಯದ ಚಂದಿರನನ್ನು ಕದ್ದು ಕಗ್ಗತ್ತಲಿಗೆ ದೂಡಿದವರೇ ಅಮೆರಿಕನ್ನರು. ಈಗ ಅವರೇ ಒಬಾಮಾನೇ ಚಂದಮಾಮನೆಂದು ನಂಬಿಸಲು ಹೊರಟಿದ್ದಾರೆ. ಅಮಾಸೆಯ ಕತ್ತಲಲ್ಲಿ ಬೆಳದಿಂಗಳಿದೆ ಎಂಬ ಭ್ರಮೆ ಬಿತ್ತುತ್ತಿದ್ದಾರೆ. "ಎಲ್ಲಿಯವರೆಗೆ ಆಳುವ ವರ್ಗಗಳ ಪ್ರತಿ ಭರವಸೆ, ಘೋಷಣೆಗಳ ಹಿಂದೆ ಒಂದು ಸ್ಪಷ್ಟ ವರ್ಗ ಹಿತಾಸಕ್ತಿಯನ್ನು ಗುರುತಿಸಲು ಶೋಷಿತ ಜನತೆ ವಿಫಲವಾಗುತ್ತಿರುತ್ತಾರೋ ಅಲ್ಲಿಯ ತನಕ ಅವರು ವಂಚನೆ ಮತ್ತು ಆತ್ಮವಂಚನೆಯ ರಾಜಕೀಯ ಬಲಿಪಶುಗಳಾಗುತ್ತಲೇ ಇರುತ್ತಾರೆ" ಎಂಬ ಲೆನಿನ್ ಮಾತು ಎಷ್ಟು ಸತ್ಯ! ■

ಸ್ಪಷ್ಟೀಕರಣ



'ಲಂಕೇಶ್ ಪತ್ರಿಕೆ'ಯ ಮೇ 19, 2004ರ ಸಂಚಿಕೆಯಲ್ಲಿ 'ಬಿಎಸ್‌ಪಿ - ನೀಲಿ ಚೆಡ್ಡಿಗಳು' ಎಂಬ ವರದಿ ಪ್ರಕಟವಾಗಿತ್ತು, ಅದರಲ್ಲಿ ಬಹುಜನ ಸಮಾಜ ಪಕ್ಷದ ಸಿದ್ಧಾಂತವನ್ನೂ, ಅದರ ಅವಕಾಶವಾದಿ ಧೋರಣೆಯನ್ನೂ ಮತ್ತು ದೇಶದ ಕೆಲವೆಡೆ ಅದು ಕೋಮುವಾದಿ ಶಕ್ತಿಗಳೊಂದಿಗೆ ಕೈಜೋಡಿಸಿ ಶತಶತಮಾನಗಳಿಂದ ಈ ದೇಶದಲ್ಲಿ ದಮನ ಮತ್ತು ದೌರ್ಜನ್ಯಕ್ಕೆ ಗುರಿಯಾಗಿರುವ ದಲಿತ ಸಮುದಾಯವನ್ನು ದಾರಿ ತಪ್ಪಿಸುತ್ತಿರುವ ರೀತಿಯನ್ನೂ ವಿವರಿಸಲಾಗಿತ್ತು.

ಆದರೆ ಅದೇ ವರದಿಯಲ್ಲಿ ಅಂದು ಬಿಎಸ್‌ಪಿಯ ರಾಜ್ಯಾಧ್ಯಕ್ಷರಾಗಿದ್ದ ಬಿ. ಗೋಪಾಲ್ ಅವರ ಬಗ್ಗೆಯೂ ಕೆಲ ಆರೋಪಗಳನ್ನು ಮಾಡಲಾಗಿತ್ತು, 2004ರ ವಿಧಾನಸಭಾ ಚುನಾವಣೆಯಲ್ಲಿ ಆನೇಕಲ್‌ನಿಂದ ಸ್ಪರ್ಧಿಸಿದ್ದ ಗೋಪಾಲ್ ಅವರು ಭಾರತೀಯ ಜನತಾ ಪಕ್ಷಕ್ಕೆ ಅನುಕೂಲವಾಗಲೆಂದು ಆ ಪಕ್ಷದ ಅನಂತಕುಮಾರ್ ಮತ್ತು ನಾರಾಯಣಸ್ವಾಮಿ ಪರ ಪ್ರಚಾರ ಮಾಡಿದ್ದಾರೆಂದೂ, ಅದಕ್ಕಾಗಿ ಅವರಿಗೆ 25 ಲಕ್ಷ ರೂಪಾಯಿಗಳನ್ನು ನೀಡಲಾಗಿದೆ ಎಂಬ ಸುದ್ದಿ ಇದೆ ಎಂದೂ ಪ್ರಕಟಿಸಲಾಗಿತ್ತು.


ಆದರೆ ವಾಸ್ತವವಾಗಿ ಗೋಪಾಲ್ ಅವರು ದಲಿತರ ಪರವಾಗಿ ಹೋರಾಟ ಮಾಡಿಕೊಂಡು ಬಂದಿರುವವರು; ತಾವಿದ್ದ ರಾಜಕೀಯ ಪಕ್ಷದ ಸಿದ್ಧಾಂತಕ್ಕೆ ಬದ್ಧರಾಗಿದ್ದವರು, ಎಲ್ಲಾ ಜಾತಿಯ ಬಡವರ ಉದ್ಧಾರದ ಬಗ್ಗೆ ಕಾಳಜಿ ವಹಿಸಿದವರು.

ಬಿಎಸ್‌ಪಿ ಪಕ್ಷವನ್ನು ವಿಶ್ಲೇಷಿಸುವಾಗ ಗೋಪಾಲ್ ಅವರ ಬಗ್ಗೆ ಆಧಾರ ರಹಿತ ಆರೋಪ ಮಾಡಿದ್ದಕ್ಕೆ ಮತ್ತು ಆ ಮೂಲಕ ಅವರ ಮನಸ್ಸಿಗೆ ನೋವು ಮತ್ತು ವರ್ಚಸ್ಸಿಗೆ ಧಕ್ಕೆ ಉಂಟು ಮಾಡಿದ್ದಕ್ಕೆ ನಾವು ಈ ಮೂಲಕ ವಿಷಾದ ವ್ಯಕ್ತಪಡಿಸುತ್ತೇವೆ.


ಬಿ. ಗೋಪಾಲರು ತಮ್ಮ ದಲಿತ ಮತ್ತು ಬಡವರ ಪರ ಕಾಳಜಿಯನ್ನು ಮುಂದುವರೆಸುತ್ತಾ ತಮ್ಮ ಈ ಹೋರಾಟದಲ್ಲಿ ಯಶಸ್ಸು ಕಾಣಲಿ ಎಂದು ಆಶಿಸುತ್ತೇವೆ.

-ಸಂಪಾದಕಿ

ಪ್ರತೀಕಾರದ ಪರಾಕಾಷ್ಠೆ



...ಬೌಂಡರಿಯಲ್ಲಿ ...ಬರಗೂರು



...ಕಮರ್ಷಿಯಲ್ ಚಿತ್ರಗಳ ನಿರ್ದೇಶಕರು ತಮ್ಮ ಸಿನಿಮಾದ ...ಸೋಲು-ಗೆಲುವುಗಳ ಲೆಕ್ಕಾಚಾರದಲ್ಲಿ ಮುಳುಗಿಹೋಗಿರುತ್ತಾರೆ. ...ದರೆ ಇದ್ಯಾವುದರ ಗೊಡವೆಗೂ ಹೋಗದೆ, ಒಂದರ ಹಿಂದೆ ...ದು ಸಿನಿಮಾವನ್ನು ಮಾಡುತ್ತಾ, ಸಾಹಿತ್ಯ ಸಾಮಾಜಿಕ ಚರ್ಚೆಗಳಲ್ಲಿ ...ಗಿಯಾಗಿ ಎಂದಿಗೂ ತಮ್ಮ ಬತ್ತಳಿಕೆ ಬರಿದಾಗದಂತೆ ಎಚ್ಚರ ...ಸುವವರು ಬರಗೂರು ರಾಮಚಂದ್ರಪ್ಪ.

ಇಂಥ ಬರಗೂರರು ಬೌಂಡರಿಯಲ್ಲಿನ ಪ್ರಶ್ನೆಗಳ ಚೆಂಡಿಗೆ ಉತ್ತರವೆಸೆದದ್ದು ಹೀಗೆ:

ಕಥೆಗಾರ ಬರಗೂರರು ಮರೆಯಾಗಿದ್ದಾರಲ್ಲ?

ಬರೆಯಬೇಕು ಅಂದುಕೊಂಡ ಕಥೆಗಳನ್ನೆಲ್ಲಾ 'ಸಿನಿಮಾ ಮಾಡಿದರೆ' ಹೇಗೆ ಎಂದು ...ಯೋಚಿಸಿ, ಅದನ್ನು ದೃಶ್ಯರೂಪಕ್ಕೆ ಇಳಿಸುತ್ತಿರುವುದರಿಂದ ಕಥೆಗಳು ಬರೆಯಲು ಸಾಧ್ಯವಾಗುತ್ತಿಲ್ಲ. ...ಮಾ ಸಹವಾಸದಿಂದ ಕಥೆಗಳೊಂದಿಗೆ ಕಾದಂಬರಿಗೂ ಅವಕಾಶವಾಗಿಲ್ಲ. ಹೀಗಾಗಿ ...ಆರು ವರ್ಷದ ಹಿಂದೆ ಬರೆದ 'ಶಬರಿ' ಆದ ಮೇಲೆ ಈವರೆಗೂ ಯಾವ ಕಾದಂಬರಿಯನ್ನೂ ...ದಿಲ್ಲ.

ಕಾವ್ಯವೂ ದೂರವಾಯಿತೇಕೆ?

ಹೌದು, ಇತ್ತೀಚೆಗೆ ಪದ್ಯಗಳನ್ನೂ ರಚಿಸಲು ಸಾಧ್ಯವಾಗಿಲ್ಲ. ಕಳೆದ ಬಾರಿ ಪ್ರಜಾವಾಣಿಯ ...ಪಾವಳಿ ವಿಶೇಷಾಂಕಕ್ಕಾಗಿ ಪದ್ಯವೊಂದನ್ನು ಬರೆದಿದ್ದೆ. ಮತ್ತೆ ಈ ಬಾರಿ ಕೂಡ ಪ್ರಜಾವಾಣಿಗಾಗಿ ...ದು ಪದ್ಯ ಬರೆದಿದ್ದೇನೆ. ಹೀಗಾಗಿ ನನ್ನದು ವರ್ಷಕ್ಕೊಮ್ಮೆ ಬರೆಯುವ 'ದೀಪಾವಳಿ ...'ವಾಗಿಬಿಟ್ಟಿದೆ!

ಕಥೆ, ಕಾದಂಬರಿ- ಎರಡರಲ್ಲಿ ಬರಹಗಾರನಿಗೆ ಯಾವುದರಲ್ಲಿ ಹೆಚ್ಚು ಖುಷಿ?

ಕಥೆಗಳು. ಸಣ್ಣಕಥೆಗಳಿಗೆ ತನ್ನದೇ ಆದ ಚೌಕಟ್ಟಿರುತ್ತದೆ. ಅದನ್ನು ಮೀರಲು ಸಾಧ್ಯವಿರುವುದಿಲ್ಲ. ...ರೆ ಕಾದಂಬರಿಯ ಕ್ಯಾನ್‌ವಾಸ್ ದೊಡ್ಡದು. ಅದನ್ನು ಎಷ್ಟು ಬೇಕಾದರೂ ವಿಸ್ತರಿಸಬಹುದಾದ ...ತಂತ್ರವಿರುತ್ತದೆ. ಹೀಗಾಗಿ ಒಬ್ಬ ಬರಹಗಾರನಿಗೆ ಕಾದಂಬರಿ ಬರೆಯುವುದರಲ್ಲೇ ಹೆಚ್ಚು ...ಷಿ.

'ಉಗ್ರಗಾಮಿ' ಯಾರು? ಏನು?

'ಉಗ್ರಗಾಮಿ'ಯನ್ನು ಬಿಡುಗಡೆಗೆ ಸಿದ್ಧಗೊಳಿಸಿದ್ದೇನೆ. ಒಂದೇ ಒಂದು ರಾತ್ರಿಯಲ್ಲಿ ...ಯುವ ಕಥೆಯಿದು. ಒಂದು ಊರನ್ನು ಪ್ರವೇಶಿಸುವ 'ಉಗ್ರ'ನೊಬ್ಬನನ್ನು ಬೆನ್ನಟ್ಟಿಬರುವ ...ಲೀಸರು, ಆತನ ಕುಟುಂಬದೊಳಗಿನ ಒತ್ತಡಗಳು, ಆತನ ಮಾನಸಿಕ ತುಮುಲಗಳ ...ವೆ ಉಗ್ರತ್ವವಿರುವುದು ಆತನ ಮನಸ್ಸಿನಲ್ಲಾ ಅಥವಾ ವ್ಯವಸ್ಥೆಯಲ್ಲಾ ಅಥವಾ ಆವನದ್ದೇ ...ರಿಯಲ್ಲಾ? ಎಂಬುದನ್ನು ನಿರೂಪಿಸುವ ಸಿನಿಮಾ 'ಉಗ್ರಗಾಮಿ'.

ಮುಂದಿನ ಸಿನಿಮಾ?

ನನ್ನ ವಿನಂತಿಯೇ ಇಲ್ಲದೆ ಕುವೆಂಪು ವಿವಿಗೆ ಪಠ್ಯವಾದದ್ದು 'ಶಬರಿ' ಕಾದಂಬರಿ. ಈಗ ...ೇ 'ಶಬರಿ'ಯನ್ನ ಸಿನಿಮಾ ಮಾಡುವ ಸಿದ್ಧತೆಯಲ್ಲಿದ್ದೇನೆ. ■

ಮೆಚ್ಚಿ ಬಂತು ಮೆಚ್ಚಿ

ಸುಂದರ್‌ರಾಜ್ ಮತ್ತು ಪ್ರಮಿಳಾ ಜೋಷಾಯ್ ಪುತ್ರಿ ಮೇಘನಾ ರಾಜ್‌ಗೆ ಕಡೆಗೂ ಕನ್ನಡದಲ್ಲೊಂದು ಛಾನ್ಸು ಸಿಕ್ಕಿದೆ. ಈಗಷ್ಟೇ ಧನುಷ್ ಅಭಿನಯದ ತಮಿಳು ಚಿತ್ರವೊಂದರಲ್ಲಿ ನಾಯಕಿಯಾಗಿ ನಟಿಸಿಬಂದಿರುವ ಮೇಘನಾ ಈ ಹಿಂದೆ ಯೋಗರಾಜ್ ಭಟ್ಟರ 'ಲಗೋರಿ'ಯಲ್ಲಿ ಪುನೀತ್ ಜೊತೆ ನಾಯಕನಟಿಯಾಗಿ ನಟಿಸಬೇಕಿತ್ತು. ಆದರೆ ಆರಂಭಕ್ಕೆ ಮುನ್ನವೇ 'ಲಗೋರಿ' ಲಟಕ್ ಎಂದಿದ್ದರಿಂದ ಮೇಘನಾಳ ಕನಸೂ ನುಚ್ಚುನೂರಾಗಿತ್ತು.

ಈಗ ಲೂಸ್ ಮಾದ ಯೋಗೇಶ್ ನಾಯಕನಾಗಿರುವ 'ಪುಂಡ' ಚಿತ್ರಕ್ಕೆ ಮೇಘನಾ ನಾಯಕಿಯಾಗಿದ್ದಾಳೆ. ಪುನೀತ್ ಜೊತೆ ನಟಿಸುವ ಭಾಗ್ಯವಿಲ್ಲದಿದ್ದರೂ ಲೂಸ್ ಮಾದನೊಂದಿಗೆ ಕುಣಿಯುವ ಅದೃಷ್ಟ ಮೇಘನಾಳಿಗೆ ಒಲಿದಿದೆ!

ಯಾಕೆಂದರೆ ಲೂಸ್ ಮಾದ ಕೂಡ ಕನ್ನಡದ ಸದ್ಯದ ಸೂಪರ್ ಸ್ಟಾರ್!!



ಆಫ್ ದಿ ರೆಕಾರ್ಡ್

ಕಾಸರಗೋಡು ಗಣೇಶರನ್ನೇ ಯಾಮಾರಿಸಿದ ಹುಬ್ಬಳ್ಳಿಯ ಬಸಯ್ಯ!


ಅವತ್ತು ಜೂನ್ 4ರ ಗುರುವಾರ.

ಬೆಳಿಗ್ಗೆ ಸುಮಾರು ಹತ್ತೂವರೆ ಗಂಟೆಯಿರಬಹುದು.

ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್‌ಸ್ಟಾಂಡಿನಲ್ಲಿ 'ಮೈಸೂರು ಮಲ್ಲಿಗೆ'ಗಳದ್ದೇ ಕಲರವ. ಬಸ್ ನಿಲ್ದಾಣಗಳಲ್ಲಿನ ಪ್ರಯಾಣಿಕರ ಮಾಮೂಲಿ ಧಾವಂತ, ಸ್ಪರ್ಧೆಗೆ ಬಿದ್ದಂತೆ ಅವಸರ ಪಡುತ್ತಿದ್ದ ಬಸ್ಸುಗಳು....

ಬಸ್ ಸ್ಟ್ಯಾಂಡಿನ ಒಂದು ಮೂಲೆಯಲ್ಲಿ ಕುಳ್ಳಗೆ, ಗಡ್ಡ ಬಿಟ್ಟು, ತನ್ನ ಬಲಗೈಗೆ ವಾಚು ಕಟ್ಟಿಕೊಂಡಿದ್ದ ವ್ಯಕ್ತಿ ತಮ್ಮ ಸ್ನೇಹಿತರೊಂದಿಗೆ ಮತ್ತ್ಯಾರದ್ದೋ ಬರುವಿಕೆಗಾಗಿ ಕಾದುನಿಂತಿದ್ದರು. ಹಾಗೆ ನಿಂತಿದ್ದವರು ಬೇರೆ ಯಾರೂ ಅಲ್ಲ, ಹಿರಿಯ ಪತ್ರಕರ್ತ ಗಣೇಶ್ ಕಾಸರಗೋಡು. ಗಣೇಶ್ ಕಾಸರಗೋಡು ಅವರ ಬರವಣಿಗೆ ಬಹುತೇಕ ಚಿತ್ರಾಸಕ್ತ ಓದುಗರಿಗೆ ಪರಿಚಯವಿರುತ್ತದೆ. ಆದರೆ ಅವರ ಆಕಾರ ಪುಟ್ಟದಾಗಿರುವುದರಿಂದಲೋ ಏನೋ ಸಾಕ್ಷಾತ್ ಅವರೇ ಎದುರಿಗೆ ಬಂದು ನಿಂತರೂ ಕೂಡ ಗುರುತು ಹಿಡಿಯುವುದು ಸ್ವಲ್ಪ ಕಷ್ಟ.

ಆದರೂ ಅವರು ನಿಂತಿದ್ದಲ್ಲಿಗೇ ಸರಬರನೆ ಬಂದು ನಿಂತ ವ್ಯಕ್ತಿ ಒಮ್ಮೆಲೇ 'ಸಾರ, ನಾನು ನಿಮ್ಮ ಅಭಿಮಾನಿ. ನಿಮ್ಮ ಬರವಣಿಗೆ ಭಾರೀ ಛಲೋ ಐತ್ರೀ ಸರ' ಎಂದಿದ್ದಾನೆ. ಇದ್ದಕ್ಕಿದ್ದ ಹಾಗೆ ತನ್ನ ಎದುರಿಗೆ ಬಂದು ನಿಂತು ಉತ್ತರ ಕನ್ನಡ ಭಾಷೆಯಲ್ಲಿ ತನ್ನನ್ನು ಹೊಗಳುತ್ತಿದ್ದ ಈ ವ್ಯಕ್ತಿಯ ಮಾತು ಕೇಳಿ ಕಾಸರಗೋಡು ಒಂದುಕ್ಷಣ ಶಿಲೆಯಂತಾಗಿದ್ದಾರೆ. ತಕ್ಷಣ ಸಾವರಿಸಿಕೊಂಡು ಎದುರಿಗಿದ್ದವನನ್ನು ಮೇಲಿಂದ ಕೆಳಕ್ಕೆ ಒಮ್ಮೆ ನೋಡಿದ್ದಾರೆ. ಅವರ ಎದುರಿಗೆ ನಿಂತಿದ್ದ ಆ ಯುವಕನ ಬಟ್ಟೆಗೆ ಇಡೀ ಜೀವಮಾನದಲ್ಲೇ ಇಸ್ತ್ರಿಯ ಕಾವು ತಗುಲಿರಲಿಲ್ಲ, ನೂರಾ ಎಂಟು ಹೊಲಿಗೆಗಳು ಎದ್ದು ಕಾಣುವಂತಿದ್ದ ಮೆಟ್ಟುಗಳು, ಗುಟ್ಕಾದ ದುರಾಕ್ರಮಣದಿಂದ ಪಾಳುಬಿದ್ದಿದ್ದ ಹಲ್ಲುಗಳು, ಕ್ಷೌರವೇ ಕಾಣದೆ ಕಂಗಾಲಾಗಿದ್ದ ಅವನ ಮುಖ.... ಇವೆಲ್ಲದರ ಜೊತೆಗೆ ಹಿಂದಿನ ರಾತ್ರಿಯೇ ಆತನ ಉದರದಲ್ಲಿ ಅಡಕಗೊಂಡ 'ಪರಮಾತ್ಮ'ನ ಪರಿಮಳ ಇನ್ನೂ ಘಮಘಮಿಸುತ್ತಲೇ ಇತ್ತು.



ಎಷ್ಟೇ ಆದರೂ ಕಾಸರಗೋಡು ಅವರು ಕಷ್ಟದಲ್ಲಿರುವ ಕಲಾವಿದರ ಕಥಾನಕವನ್ನು ಬರೆಯುವ ಪತ್ರಕರ್ತರಲ್ಲವೆ? ತಕ್ಷಣ ಆತನನ್ನು ಇನ್ನೂ ಹತ್ತಿರಕ್ಕೆ ಕರೆದು ಹೆಗಲ ಮೇಲೆ ಕೈಯಿಟ್ಟು 'ಏನಯ್ಯಾ ನಿನ್ನೆಸ್ರು? ಯಾವೂರು?' ಎಂದಿದ್ದಾರೆ. 'ಬಸಯ್ಯ ಹಿರೇಮಠ, ಹುಬ್ಬಳ್ಳಿಯಾಂವ ಸರ. ಪುಸ್ತಕ ಬಂಡಲ್ ಕಟ್ಟೋ ಕೆಲ್ಸ ಮಾಡ್ತೀನ್ರಿ' ಎಂದಿದ್ದಾನೆ.

ಈ ಮಧ್ಯೆ ಕಾಸರಗೋಡು ಮತ್ತು ಬಸಯ್ಯನ ಮಾತಿಗೆ ಎರಡು ಮೊಬೈಲ್ ಕರೆಗಳು ಅಡ್ಡಪಡಿಸಿದರೂ ಇಬ್ಬರ ಸಂಭಾಷಣೆ ಮತ್ತೆ ಮುಂದುವರಿದಿದೆ. 'ಏನಯ್ಯಾ ನನ್ನ ಬಗ್ಗೆ ಇಷ್ಟೊಂದು ತಿಳಿದುಕೊಂಡಿದ್ದೀಯಾ. ನನ್ನ ಬಗ್ಗೆ ನಿಮ್ಮ ಹುಬ್ಬಳ್ಳಿ ಮಂದೀಗೆಲ್ಲಾ ಒಂದಷ್ಟು ಹೇಳು. ನಾನೀಗ 'ಪೊರ್ಕಿ' ಸಿನಿಮಾ ಪ್ರೊಡ್ಯೂಸರ್ ಕೂಡ'' ಎಂದವರೇ ಅಲ್ಲೇ ಇದ್ದ ತಮ್ಮ ಕಾರಿನ ಬಳಿ ಕರೆದೊಯ್ದು ಅದರ ಡಿಕ್ಕಿ ತೆಗೆದು ಅದರೊಳಗಿಂದ ರವಿಚಂದ್ರನ್ ಬಗೆಗಿನ ಪುಸ್ತಕ ಹಾಗೂ 'ಹೇಗಿದ್ದ ಹೇಗಾದ ಗೊತ್ತಾ' ಎಂಬ ಪುಸ್ತಕದ ಪ್ರತಿಗಳೆರಡನ್ನು ಬಸಯ್ಯನ ಕೈಗಿಟ್ಟು ಕಳಿಸಿದ್ದಾರೆ.

ವಿಪರ್ಯಾಸವೆಂದರೆ, ಈ ಬಸಯ್ಯ 'ಹೇಗಿದ್ದನೋ ಹಾಗಲ್ಲದವನು' ಎಂಬುದು ಮಾತ್ರ ಕಾಸರಗೋಡರಿಗೆ ತಿಳಿಯಲೇ ಇಲ್ಲ.

ಅಸಲಿಗೆ ಆತನ ನಿಜ ಹೆಸರು ಬಸಯ್ಯ ಹಿರೇಮಠ ಅಂತೂ ಅಲ್ಲ. ಆತನದ್ದು ಪುಸ್ತಕದ ಬಂಡಲ್ ಕಟ್ಟುವ ಕೆಲಸವಂತೂ ಮೊದಲೇ ಅಲ್ಲ.

ವ್ಯವಸ್ಥೆಯ ದೋಷಗಳನ್ನು, ಕೆಲವೊಮ್ಮೆ ಪತ್ರಿಕೆ-ಪತ್ರಕರ್ತರ ನ್ಯೂನತೆಗಳನ್ನು ತನ್ನ ಕೊಂಕು ಸಾಲುಗಳಲ್ಲಿ ಬರೆಯುತ್ತಾ ತನ್ನದೇ ವಿನೂತನ ಶೈಲಿಯ ಬರಹಗಳಿಂದ ಬಹಳಷ್ಟು ಪ್ರಗತಿಪರರ ಗಮನ ಸೆಳೆದಿರುವ ''ಬಸಯ್ಯ ಹಿರೇಮಠ'' ಕೂಡ ಒಬ್ಬ ಪತ್ರಕರ್ತ ಹಾಗೂ ಬರಹಗಾರ!!

ಬಹುಶಃ ಗಣೇಶ್ ಕಾಸರಗೋಡರಿಗೆ ''ಬಸಯ್ಯ ಹಿರೇಮಠ''ನ ಸಂಪೂರ್ಣ ಪೂರ್ವಾಪರ ಸಿಕ್ಕರೆ, ಅವರ 'ಹೇಗಿದ್ದ ಹೇಗಾದ ಗೊತ್ತಾ' ಪುಸ್ತಕದ ಮತ್ತೊಂದು ಅಧ್ಯಾಯವಾದೀತು. ಅಷ್ಟು ದೊಡ್ಡ ಕತೆ ಆ 'ಬಸಯ್ಯ ಹಿರೇಮಠ'ನದ್ದು. ■



'ಆಪ್ತಮಿತ್ರ' ಚಿತ್ರದ ಯಶಸ್ಸಿನ ನಂತರ ಮನೆ ಕಟ್ಟಿ, ಆ ಮನೆಯೊಳಗಡೆ ಅವಿತುಕೊಂಡಿರುವ ದ್ವಾರಕೀಶ್ ಮತ್ತೊಮ್ಮೆ ಸಿನಿಮಾ ಮಾಡುವ ಸಾಧ್ಯತೆ ಇದೆ.

''ನೀವು ಸಿನಿಮಾ ಮಾಡಿದರೆ ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ 75 ಲಕ್ಷ ರೂ. ಬಂಡವಾಳವನ್ನು ನೀಡುತ್ತೇವೆ'' ಎಂದು ದ್ವಾರಕೀಶ್ ಅವರಿಗೆ ವಾರ್ತಾ ಮತ್ತು ಪ್ರಚಾರ ಇಲಾಖೆಯ ...ೇಶಕರಾದ ವಿಶುಕುಮಾರ್ ಮೊನ್ನೆ ಸಮಾರಂಭವೊಂದರಲ್ಲಿ ಆಮಿಷ ...ದ್ದಾರೆ.

...ಭಾರತೀಯ ಭಾಷಾ ಅಕಾಡೆಮಿಯಿಂದ ಮೊನ್ನೆ ಮೊನ್ನೆಯಷ್ಟೇ ನಿವೃತ್ತಿ ...ಪಡಿದ ಲಿಂಗದೇವರು ಹಳೆಮನೆ ಅವರ ಡಿವಿಡಿ ಬಿಡುಗಡೆಯ ಸಮಾರಂಭದಲ್ಲಿ ...ಕೀಶ್ 'ಕರ್ನಾಟಕ ವೈಭವ' ಚಿತ್ರದ ಬಗ್ಗೆ ಪ್ರಸ್ತಾಪಿಸಿ ''ಪುಟ್ಟಣ್ಣ ಕಣಗಾಲ್‌ರವರ ...ಗಿದ್ದ ಈ ಚಿತ್ರವನ್ನು ಮಾಡಬೇಕೆನಿಸುತ್ತಿದೆ'' ಎಂದು ತಮ್ಮ ಆಶಯವನ್ನು ...ಪಡಿಸಿದರು. ಅದಕ್ಕೆ ಸ್ಪಂದಿಸಿದ ವಿಶುಕುಮಾರ್ ''ದ್ವಾರಕೀಶ್ ತಮ್ಮ ...ಕಾಲದಲ್ಲಿ 'ಕರ್ನಾಟಕ ವೈಭವ'ದಂತಹ ಚಿತ್ರ ಮಾಡಲಿ, ಅದಕ್ಕೆ ವಾರ್ತಾ ...ತ್ತು ಪ್ರಚಾರ ಇಲಾಖೆಯಿಂದ ಬಂಡವಾಳ ಒದಗಿಸುವ ಯೋಜನೆ ...ಲ್ಲಿದೆ'''ಎಂದರು.

...ವಿಶೇಷವೆಂದರೆ ಇಂತಹ ಚಿತ್ರವೊಂದಕ್ಕೆ ಸರ್ಕಾರ 75 ಲಕ್ಷ ನೀಡುತ್ತದೆ ...ಂ ಗೊತ್ತಾಗಿದ್ದೇ ಅಂದು. ಈ ಯೋಜನೆಯನ್ನು ನಮ್ಮ ಗಾಂಧಿನಗರದ ...ರ ನಿರ್ದೇಶಕರು 'ಸದುಪಯೋಗ' ಮಾಡಿಕೊಳ್ಳುತ್ತಾರೋ ನೋಡೋಣ.




ಜಯಮಾಲಾ ಅವರು ಚೇಂಬರ್‌ನ ಚುನಾವಣೆಯನ್ನು ಘೋಷಿಸಿದ್ದಾರೆ. ಆದರೆ ಈ ಬಾರಿ ಅಧ್ಯಕ್ಷ ಸ್ಥಾನಕ್ಕೆ ಏರಲು ಯಾರಿಗೂ ಉತ್ಸಾಹವೇ ಇಲ್ಲದಂತೆ ಕಾಣಿಸುತ್ತಿದೆ. ಚೇಂಬರ್ ರೂಲ್ಸ್ ಪ್ರಕಾರ ಈ ಅಧ್ಯಕ್ಷ ಸ್ಥಾನ ಸರದಿಯಲ್ಲಿ ಚೇಂಬರ್‌ನ ಬೇರೆ ಬೇರೆ ವಿಭಾಗಕ್ಕೆ ಹೋಗುತ್ತದೆ. ಈ ಬಾರಿ ಅಧ್ಯಕ್ಷರಾಗುವ ಸರದಿ ಹಂಚಿಕೆದಾರರದ್ದು.

ಕಳೆದ ವರ್ಷ ಸುವರ್ಣ ಮಹೋತ್ಸವ ಕಾರ್ಯಕ್ರಮ ಇದ್ದುದರಿಂದ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳಲು ಸಿಕ್ಕಾಪಟ್ಟೆ ಪೈಪೋಟಿ, ಲಾಬಿ ನಡೆದಿತ್ತು. ಆ ಸಮಾರಂಭ ಹೋಗಿರುವುದರಿಂದ ಈ ಬಾರಿಯ ಅಧ್ಯಕ್ಷರಾಗುವವರಿಗೆ ಮಿಂಚಲು ಯಾವುದೇ ಅವಕಾಶಗಳಿಲ್ಲ. ಆದುದರಿಂದ ಈ ಬಾರಿ ಎಲ್ಲರಿಗೂ ನಿರಾಸಕ್ತಿ.

ಸ್ವತಃ ಜಯಮಾಲಾ ಅವರಿಗೂ ಮತ್ತೆ ಅಧ್ಯಕ್ಷೆಯಾಗುವ ಆಸೆ ಇಲ್ಲ. ಹೀಗಾಗಿ ಚೇಂಬರ್ ಚುನಾವಣೆ ಯಾವುದೇ ಸದ್ದುಗದ್ದಲ, ಗಲಾಟೆ-ವಿವಾದಗಳಿಲ್ಲದೇ ತೆರೆಮರೆಯಲ್ಲೇ ಮುಗಿದುಹೋಗಬಹುದು. ಆದರೆ ಒಂದಂತೂ ನಿಜ. ಹೊಸ ಸಮಿತಿ ಬಂದಾಕ್ಷಣ ಅಮೃತ ಮಹೋತ್ಸವವನ್ನು ಆಚರಿಸಿದ ಹಳೇ ಕಮಿಟಿಯ ಶೈಲಿಯನ್ನು ಪ್ರಶ್ನಿಸಿ ರಂಪ ಮಾಡುವ ಎಲ್ಲಾ ಸಾಧ್ಯತೆಯಂತೂ ಗಾಂಧಿನಗರದಲ್ಲಿ ಕೇಳಿಬರುತ್ತಿದೆ. ಆದುದರಿಂದ ತಮ್ಮ ಹಿತೈಷಿಗಳೇ ಅಧಿಕಾರ ವಹಿಸಿಕೊಳ್ಳಲಿ ಎಂಬುದು ಈಗಿನ ಸಮಿತಿ ಸದಸ್ಯರ ಮನದಾಸೆ. ■

...ಚಾರದಲ್ಲಿ ಜಗ್ಗೇಶ್



...ವರಸ ನಾಯಕ ಜಗ್ಗೇಶ್ ಈಗ ಡೋಲಾಯಮಾನ ...ಯಲ್ಲಿದ್ದಾರೆ. ಅತ್ತ ರಾಜಕೀಯದಲ್ಲೂ ಇಲ್ಲ, ಇತ್ತ ಚಿತ್ರರಂಗದಲ್ಲೂ ...ಂಬಂತಿರುವ ಜಗ್ಗೇಶ್ ಇತ್ತೀಚೆಗೆ ತಮ್ಮ ಸಹೋದರ ಮತ್ತು ... ಪ್ರಚಾರದಲ್ಲಿ ಮಾತ್ರ ತೊಡಗಿದ್ದಾರೆ.

...ಜಗ್ಗೇಶ್ 'ಕೆಂಪು ಬಸ್'ಅನ್ನು ಬಿಡಲು ಆರಂಭಿಸಿದ ನಂತರ ... ಸಿನಿಮಾಗಳಲ್ಲಿ ನಟಿಸಿಲ್ಲ. ಸದ್ಯಕ್ಕೆ ಜಗ್ಗೇಶ್ ಅಭಿನಯದ ...ಮ ಮಂಜುನಾಥಾ' ಎಂಬ ಚಿತ್ರವೊಂದು ಬಿಡುಗಡೆಗೆ ಬಾಕಿಯಿದೆ. ...ಂತೆ ಅವರ ಯಾವುದೇ ಚಿತ್ರ ಸೆಟ್ಟೇರಿಲ್ಲ. ಆದರೆ ಮೊನ್ನೆ ಅವರು ಎರಡು ...ರಂಗದ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಂಡರು. ಅವತ್ತು ಇಡೀ ದಿನ ಸಿನಿಮಾ ...ಕರಿಗೆ 'ಜಗ್ಗೇಶ್ ದರ್ಶನ ಭಾಗ್ಯ' ಪ್ರಾಪ್ತಿಯಾಯಿತು. ಅಂದು ಬೆಳಗ್ಗೆ ...ಕುಲ್ ಅಭಿನಯಿಸಿರುವ, ಎ.ಆರ್. ಬಾಬು ನಿರ್ದೇಶನದ 'ಬಮ್ಮಾಯ್ಸಿ ...ಉದಾಯ್ಸಿ' ಚಿತ್ರದ ಹಾಡುಗಳ ಪ್ರದರ್ಶನವಿತ್ತು. ಅಲ್ಲಿ ಹಾಡುಗಳನ್ನು ...ದ ನಂತರ ಜಗ್ಗೇಶ್ ತನ್ನ ಸಹೋದರ ಕೋಮಲ್ ಬಗ್ಗೆ ಮಾತನಾಡುತ್ತಾ ...ಭಾವುಕರಾಗಿ ಕಣ್ಣೀರು ಸುರಿಸಿದರು. ''ನಮ್ಮ ಮನೆಯಲ್ಲಿ ಈತನೇ ಬುದ್ಧಿವಂತ. ಎಲ್‌ಎಲ್‌ಬಿ ಬೇರೆ ಮಾಡಿದ್ದಾನೆ. ಸಿನಿಮಾ ಬ್ಯಾಡ ಎಂದು ಹೇಳಿದರೂ ಕೇಳದೇ ಸ್ವಂತ ಪರಿಶ್ರಮದಿಂದ ಈ ಎತ್ತರಕ್ಕೆ ಬೆಳೆದಿದ್ದಾನೆ' ಎಂದು ಜಗ್ಗೇಶ್ ತಮ್ಮ ಸಹೋದರನನ್ನು ಕೊಂಡಾಡಿದರು. ಅದಾದ ಕೆಲವೇ ಗಂಟೆಗಳ ನಂತರ ಮತ್ತೊಂದು ಕಡೆ ಜಗ್ಗೇಶ್ ಮಗ ನಟಿಸಿರುವ 'ಗಿಲ್ಲಿ' ಚಿತ್ರದ ಪತ್ರಿಕಾಗೋಷ್ಠಿ ಇತ್ತು. ಅಲ್ಲಿಗೂ ಹಾಜರಾದ ಜಗ್ಗೇಶ್ ತನ್ನ ಪುತ್ರನಿಗೆ ಹಿತೋಪದೇಶ ನೀಡುತ್ತಾ ಸಾಗಿದರು. ಅದನ್ನು ಕಂಡ ಪತ್ರಕರ್ತರಿಗೆ ಸಹೋದರ ಮತ್ತು ಪುತ್ರನನ್ನು ದೊಡ್ಡ ರೀತಿಯಲ್ಲಿ ಪ್ರೊಜೆಕ್ಟ್ ಮಾಡುವುದಷ್ಟೇ ಜಗ್ಗೇಶ್ ಮುಂದಿರುವ ಸದ್ಯದ ಸಿನಿಮಾ ಅಸೈನ್‌ಮೆಂಟು ಎಂದನಿಸಿತು.

ಇದಾದ ಮಾರನೆ ದಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಿನಿಮಾ ಅಕಾಡೆಮಿ ಸ್ಥಾಪನಾ ಸಮಾರಂಭದಲ್ಲಿ ಜಗ್ಗೇಶ್ ಕಾಣಿಸಿಕೊಂಡರು. ವೇದಿಕೆಯಲ್ಲಿ ಅವರ ಉಪಸ್ಥಿತಿ ಬಗ್ಗೆ ಅಹ್ವಾನ ಪತ್ರಿಕೆಯಲ್ಲಿ ಮಾಹಿತಿ ಇರದಿದ್ದರೂ ಜಗ್ಗೇಶ್ ಮುಖ್ಯಮಂತ್ರಿ ಯಡ್ಡಿ ಪಕ್ಕದಲ್ಲಿ ವಕ್ಕರಿಸಿದರು.

ಜಗ್ಗೇಶ್‌ಗೆ ಇದೆಲ್ಲ ಬೇಕಿತ್ತಾ?

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 24-06-2009 RNI No. KAR



ನಿಧಿ ಬಗೆದ ಕೋಮಲ



ಕೋಮಲ್ ಮತ್ತು ನಿಧಿ ಸುಬ್ಬಯ್ಯ ಕನ್ನಡ ಚಿತ್ರರಂಗದ ಹಾಟೆಸ್ಟ್ ಜೋಡಿ ಆಗುವ ಸಾಧ್ಯತೆಗಳು ಕಾಣಿಸುತ್ತಿವೆ. ಎ.ಆರ್. ಬಾಬು ನಿರ್ದೇಶನದ 'ಚಮ್ಕಾಯ್ಸಿ ಚಿಂದಿ ಉಡಾಯ್ಸಿ' ಚಿತ್ರದ ಒಂದು ಹಾಡು ನೋಡುಗರನ್ನು ರೋಮಾಂಚನಗೊಳಿಸುತ್ತದೆ ಮಾತ್ರವಲ್ಲ, ಕಾಮಸೂತ್ರದ ಅರವತ್ನಾಲ್ಕು ಭಂಗಿಗಳನ್ನೂ ನೆನಪಿಸುವಷ್ಟು ರಸವತ್ತಾಗಿದೆ. ಈ ಹಾಡಿಗೆ ರಸಸಾಹಿತ್ಯ ಬರೆದವರು 'ಮುಂಗಾರು ಮಳೆ' ಖ್ಯಾತಿಯ ಜಯಂತ ಕಾಯ್ಕಿಣಿ ಎಂಬುದೇ ವಿಶೇಷ. ಹಾಗಂತ ಇದು ತೀರಾ ವಲ್ಗರ್ ಆಗಿ ಮೂಡಿಬಂದಿಲ್ಲ. ಕೋಮಲ್ ಮತ್ತು ಕೊಡಗಿನ ಬೆಡಗಿ ನಿಧಿ ಸುಬ್ಬಯ್ಯ ತುಂಬಾ ಅಚ್ಚುಕಟ್ಟಾಗಿ ಈ ಹಾಡಿಗೆ ನರ್ತಿಸಿದ್ದಾರೆ. ನಿಜ ಹೇಳಬೇಕೆಂದರೆ, ಇವರಿಬ್ಬರೂ ಎಲ್ಲೋ ಏರೋಬಿಕ್ಸ್ ವ್ಯಾಯಾಮ ಮಾಡುತ್ತಿದ್ದಾರೆಯೋ ಎಂದೆನಿಸುತ್ತದೆ.

ಮೊದಲ ಬಾರಿಗೆ ಕನ್ನಡದ ಹುಡುಗಿಯೊಬ್ಬಳು ತುಂಬಾ ಬೋಲ್ಡ್ ಆಗಿ, ಗ್ಲಾಮರಸ್ ಆಗಿ ಮುಂಬೈಯ ಐಟಂ ಹುಡುಗಿಯರೂ ನಾಚುವಂತೆ ನಟಿಸಿ, ನರ್ತಿಸಿದ್ದಾಳೆ. ಕನ್ನಡದಲ್ಲಿ ಮಡಿವಂತಿಕೆಯ ಗಡಿಯನ್ನು ದಾಟಿ ಈ ಹೊಸ ಜೋಡಿ ರೋಮಾಂಚನಕಾರಿಯಾಗಿ ಕುಣಿದಿರುವುದು ಬಹುಶಃ ಒಂದು ಹೊಸ ಬೆಳವಣಿಗೆಯೇ ಸರಿ. ಇಂತಹ ಹೊಸತನಕ್ಕೆ ಕೈಹಾಕಿದ ಕೋಮಲ್‌ಗೂ ನಿಧಿಗೂ ಒಂದು ಪುಟ್ಟ ಕಾಂಪ್ಲಿಮೆಂಟ್ಸ್ ನಿಮ್ಮದೂ ಇರಲಿ.

ಇದೆಂಥ ಸನ್ಮಾನ?



ಮೊನ್ನೆ ಚಲನಚಿತ್ರ ವಾಣಿಜ್ಯ ಮಂಡಳಿಯು ಈಗ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದ ಅಧ್ಯಕ್ಷೆಯಾಗಿರುವ ಶ್ರುತಿಯನ್ನು ಕರೆದು ಸನ್ಮಾನಿಸಲು ನಿರ್ಧರಿಸಿತು. ಖಂಡಿತವಾಗಿಯೂ ಇದು ಸ್ವಾಗತಾರ್ಹ ವಿಷಯ. ಉದ್ಯಮದ ಮಂದಿ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಏನಾದರೂ ಮಹತ್ತರದ ಜವಾಬ್ದಾರಿ ವಹಿಸಿಕೊಂಡಾಗ ಈ ತರಹ ಸನ್ಮಾನಿಸಿ ಉತ್ತೇಜಿಸುವುದು ತಪ್ಪೇನಲ್ಲ.

ಆದರೆ ಉದ್ಯಮದಿಂದ ಮೊದಲ ಬಾರಿ ಶಾಸಕರಾದ ಮುಖ್ಯಮಂತ್ರಿ ಚಂದ್ರು ಅವರನ್ನು ಈ ಛೇಂಬರ್‌ನವರು ಸನ್ಮಾನಿಸಿರಲಿಲ್ಲ. ಅಷ್ಟೇ ಅಲ್ಲ ಚಲನಚಿತ್ರ ನಟ ಅನಂತ್ ನಾಗ್ ಅವರು ಪ್ರಥಮ ಬಾರಿಗೆ ಮಂತ್ರಿಯಾದಾಗಲೂ ಅವರನ್ನು ಸನ್ಮಾನಿಸುವ ಐಡಿಯಾ ಈ ಜನರಿಗೆ ಬರಲೇ ಇಲ್ಲ. ಹಾಗೆಯೇ ಸಂಗೀತ ನಿರ್ದೇಶಕ ಹಂಸಲೇಖ ಅವರಿಗೆ 'ಗಾನಯೋಗಿ ಪಂಚಾಕ್ಷರಿ ಗವಾಯಿ' ಚಿತ್ರಕ್ಕಾಗಿ ರಾಷ್ಟ್ರೀಯ ಪ್ರಶಸ್ತಿ ದೊರಕಿದಾಗಲೂ ಈ ಛೇಂಬರ್ ಮೌನ ವಹಿಸಿತ್ತು. ಗಿರೀಶ್ ಕಾಸರವಳ್ಳಿಯಂತೂ ಹಲವಾರು ಬಾರಿ ದೆಹಲಿಯಿಂದ ಚಿನ್ನ ತಂದಾಗ ಅದರ ಬಗ್ಗೆ ತಾತ್ಸಾರ ಮನೋಭಾವದಿಂದ ಛೇಂಬರ್ ನೋಡಿತ್ತೇ ವಿನಃ ಅವರನ್ನು ಅಭಿನಂದಿಸುವ ಗೋಜಿಗೇ ಯಾವತ್ತೂ ಹೋಗಿಲ್ಲ.

ಹೀಗೆ ಸಿನಿಮಾ ಮಂದಿ ಸ್ಥಾನ ಪಡೆದಾಗ, ಪ್ರಶಸ್ತಿಗಳನ್ನು ಗಳಿಸಿದಾಗ ಅವರ‍್ಯಾರನ್ನೂ ಅಭಿನಂದಿಸದ ಈ ಛೇಂಬರ್ ಎಂಬ ಸೊಂಬೇರಿಕಟ್ಟೆಯ ಸದಸ್ಯರು ಈಗ ಯಡಿಯೂರಪ್ಪ ನೀಡಿದ ಅದ್ಯಾವುದೋ ಜುಜುಬಿ ಬೋರ್ಡ್ ಛೇರ್ಮನ್‌ಗಿರಿಗಾಗಿ ಶ್ರುತಿಯನ್ನು ಅಭಿನಂದಿಸುತ್ತಿರುವುದು ಹಾಸ್ಯಾಸ್ಪದವಾಗಿ ಕಾಣಿಸುತ್ತಿದೆ.

ಬಹುಶಃ ಮೊನ್ನೆ ಮೊನ್ನೆ ವೆಂಕಟೇಶ್ ಸುಧೀಂದ್ರ ಅವರ ಶ್ರೀ ರಾಘವೇಂದ್ರ ಚಿತ್ರವಾಣಿ ಸಮಾರಂಭದಲ್ಲಿ ಶ್ರುತಿಯವರು ಸೋಡ ಚೀಟಿ ಕೊಟ್ಟಿರುವ ಪತಿ ನಿರ್ದೇಶಕ ಮಹೇಂದರ್ ಅವರನ್ನು ಸನ್ಮಾನಿಸಿದ ಕಾರಣಕ್ಕೆ ಪೈಪೋಟಿಗಾಗಿ ಛೇಂಬರ್ ಈ ಕಾರ್ಯಕ್ರಮವನ್ನು ಗುಟ್ಟಾಗಿ ಹಮ್ಮಿಕೊಳ್ಳಲು ನಿರ್ಧರಿಸಿದಂತೆ ಕಾಣಿಸುತ್ತಿದೆ. ಇಂತಹ ಅಭಿನಂದನಾ ಸಮಾರಂಭಕ್ಕೆ ಮಾಧ್ಯಮದವರನ್ನು ಕರೆಸದೇ ಇರುವ ಔಚಿತ್ಯವೂ ಹಲವಾರು ಸಂಶಯಕ್ಕೆ ಎಡೆ ಮಾಡಿಕೊಡುತ್ತಿದೆ.

ಹೀಗಾಗಿ ಇದು ಛೇಂಬರ್‌ನವರೇ ಹೃದಯ ತುಂಬಿ ಮಾಡುವ ಸಮಾರಂಭವೋ ಅಥವಾ ಛೇಂಬರ್‌ನಲ್ಲಿ ತುಂಬಿ ತುಳುಕುತ್ತಿರುವ ಚೆಡ್ಡಿಗಳು ಈ ಸಮಾರಂಭವನ್ನು ಬಲವಂತವಾಗಿ ಮಾಡಿಸುತ್ತಿದ್ದಾರೆಯೋ ಒಂದೂ ಅರ್ಥವಾಗುತ್ತಿಲ್ಲ.

ಈಗ ನೀವೇ ಹೇಳಿ ಛೇಂಬರ್‌ನವರ ಈ ಅಭಿನಂದನೆ, ಸನ್ಮಾನಗಳಿಗೆ ಅರ್ಥವಿದೆಯೇ ಎಂದು?

ಮತ್ತೆ ಬಂದರು ಮಹೇಂದರ್!



ತನ್ನ ತಾರಾ ಪತ್ನಿ ಶ್ರುತಿ ಇದ್ದಕ್ಕಿದ್ದಂತೆ ಸೋಡ ಚೀಟಿ ನೀಡಿದ ನಂತರ ಯಾರ ಕಣ್ಣಿಗೂ ಬೀಳದಂತೆ ಮೈಸೂರಿಗೆ ಹೋಗಿ ಕುಳಿತಿದ್ದ ಮಹೇಂದರ್ ಮತ್ತೆ ಬೆಂಗಳೂರಿಗೆ ಮರಳಿದ್ದಾರೆ.

ಮರಳಿದ್ದಾರೆ ಮಾತ್ರವಲ್ಲ, ಜೋರು ಮಳೆಗೆ ಸಿಕ್ಕು ತತ್ತರಿಸಿದರೂ ಆ ಮಳೆಯಲ್ಲೇ ತೋಯ್ದು ಫುಲ್ ಫ್ರೆಶ್ ಆದ ಗಿಡದಂತೆ ಹೊಸಹೊಸ ಕನಸುಗಳನ್ನು ಚಿಗುರಿಸಿಕೊಂಡು ಕಂಗೊಳಿಸುತ್ತಿದ್ದಾರೆ.

ಮೊನ್ನೆ ಸ್ವತಃ ಮಹೇಂದರ್ ಅವರೇ 'ಲಂಕೇಶ್' ಅನ್ನು ಸಂಪರ್ಕಿಸಿ ತಮ್ಮ ಮುಂದಿನ ಪ್ರಾಜೆಕ್ಟ್‌ಗಳ ಬಗ್ಗೆ ಮಾತನಾಡಿದರು.

ಶ್ರುತಿ ಪ್ರಕರಣವು ಮಹೇಂದರ್‌ಗೆ ಯಾವ ಮಟ್ಟದ ಸಿಂಪತಿ ಗಿಟ್ಟಿಸಿಕೊಟ್ಟಿದೆಯೆಂದರೆ, ಉದ್ಯಮದವರು ಮಹೇಂದರ್ ಅವರನ್ನು ಕರೆಸಿಕೊಂಡು ಅವಕಾಶಗಳ ಮೇಲೆ ಅವಕಾಶಗಳ ಸುರಿಮಳೆಯನ್ನೆ ಚೆಲ್ಲುತ್ತಿದ್ದಾರೆ.


ಮಹೇಂದರ್ ಹೇಳುವ ಪ್ರಕಾರ ಅವರೀಗ ಒಂದರ ಹಿಂದೆ ಒಂದರಂತೆ ಮೂರು ಚಿತ್ರಗಳನ್ನು ನಿರ್ದೇಶಿಸಲಿದ್ದಾರೆ. ಮೊದಲನೆಯದು ನೆನಪಿರಲಿ ಪ್ರೇಮ್ ನಾಯಕನಟನಾಗಿರುವ ಚಿತ್ರ. ಈ ಚಿತ್ರವನ್ನು ನಿರ್ದೇಶಕ ಎಂ.ಎಸ್. ರಮೇಶ್, ರಂಗಾಯಣ ರಘು ಮತ್ತವರ ಗೆಳೆಯರ '24 ಫ್ರೇಂ' ಸಂಸ್ಥೆ ನಿರ್ಮಿಸುತ್ತಿದೆ. ಸ್ವತಃ ಎಂ.ಎಸ್. ರಮೇಶ್ ಅವರೇ ನಿರ್ದೇಶಕರಾಗಿದ್ದರೂ ಮತ್ತೊಬ್ಬ ನಿರ್ದೇಶಕ ಮಹೇಂದರ್‌ರನ್ನು ಕರೆದು ಅವರಿಗೆ ಅವಕಾಶ ನೀಡಿರುವುದು ಅವರ ದೊಡ್ಡ ಗುಣ.

ಎರಡನೆಯದು ಶಿವರಾಜ್‌ಕುಮಾರ್ ಅಭಿನಯದ ಚಿತ್ರ. ಈ ಚಿತ್ರಕ್ಕೆ ಈಗಾಗಲೇ 'ಹಾಡುಗಾರ' ಎಂಬ ಹೆಸರನ್ನೂ ಇಟ್ಟಿದ್ದಾರೆ. ಸಂಸಾರ ಕಲಹದಿಂದ ಬೇಸತ್ತು ಮೈಸೂರಿನಲ್ಲಿದ್ದ ಮಹೇಂದರ್‌ರನ್ನು ಸ್ವತಃ ಶಿವರಾಜ್‌ಕುಮಾರ್ ಅವರೇ ಕರೆದು ಈ ಚಿತ್ರವನ್ನು ಮಾಡಿಕೊಡಬೇಕೆಂದು ವಿನಂತಿಸಿಕೊಂಡಿದ್ದಾರೆ. ಅಲ್ಲದೇ ಈ ಚಿತ್ರವನ್ನು ರಮೇಶ್ ಯಾದವ್ ಅವರೇ ನಿರ್ಮಿಸಲು ಮುಂದಾಗಿದ್ದಾರೆ.

ಇನ್ನು ಮೂರನೆಯ ಚಿತ್ರ ದುನಿಯಾ ವಿಜಯ್‌ಗಾಗಿ. ತನಗೂ ಒಂದು ಸಿನಿಮಾ ಮಾಡಿಕೊಡಿ ಎಂದು ವಿಜಯ್ ಮಹೇಂದರ್‌ರನ್ನು ಕೇಳಿರುವುದರಿಂದ ಮಹೇಂದರ್ ಓಕೆ ಎಂದಿದ್ದಾರೆ. ಆದರೆ ಈ ಚಿತ್ರದ ನಿರ್ಮಾಪಕ ಯಾರು ಎಂಬುದು ಮಾತ್ರ ಇನ್ನೆರಡು ದಿನಗಳಲ್ಲಿ ನಿಕ್ಕಿಯಾಗಲಿದೆ.

ಇದನ್ನೆಲ್ಲಾ ನೋಡಿದರೆ ಕನ್ನಡ ಚಿತ್ರರಂಗದಲ್ಲಿ ಮಾನವೀಯತೆ ಇನ್ನೂ ಸತ್ತಿಲ್ಲ ಎಂದೆನಿಸುತ್ತದೆ. ಮಹೇಂದರ್ ಅವರು ಈ ಎಲ್ಲ ಅವಕಾಶಗಳನ್ನು ಚೆನ್ನಾಗಿ ಉಪಯೋಗಿಸಿಕೊಂಡು ತಮ್ಮ ವೃತ್ತಿ ಬದುಕಿನ ಮತ್ತೊಂದು ಇನ್ನಿಂಗ್ಸ್ ಅನ್ನು ಆರಂಭಿಸಲಿ ಎಂದು ಶುಭಕೋರೋಣ.

ಮಮ್ಮೂಟಿಯ ದಾಖಲೆಯ ಬಜೆಟ್!



ಮಮ್ಮುಟಿ, ಹರಿಹರನ್ ಮತ್ತು ಎಂ.ಟಿ ವಾಸುದೇವನ್ ನಾಯರ್‌ರಂಥ ಮಲಯಾಳಂನ ಹಿರಿಯಾತಿ ಹಿರಿಯ ಸಿನಿಮಾ ದಿಗ್ಗಜರೆಲ್ಲಾ ಸೇರಿ ಒಂದು ಸಿನಿಮಾ ಮಾಡಲು ಮುಂದಾಗಿದ್ದಾರೆ. ಕನ್ನಡದಂತೆ ಸೀಮಿತ ಮಾರುಕಟ್ಟೆಯನ್ನು ಮಲಯಾಳಂ ಚಿತ್ರರಂಗ ಹೊಂದಿದ್ದರೂ ಈ ಇಡೀ ದಕ್ಷಿಣ ಭಾರತದಲ್ಲೇ ಈವರೆಗೆ ಬಂದಿರುವ ಎಲ್ಲಾ ಬಿಗ್ ಬಜೆಟ್ ಚಿತ್ರಗಳನ್ನು ಮೀರಿಸುವಷ್ಟು ದೊಡ್ಡ ಚಿತ್ರವಂತೆ. ಏಕಕಾಲದಲ್ಲಿ ಇಂಗ್ಲಿಷ್, ತಮಿಳು, ತೆಲುಗು ಹಾಗೂ ಮಲಯಾಳಂಗಳಲ್ಲಿ ತಯಾರಾಗುತ್ತಿರುವ ಈ 'ಪಯಸಿ ರಾಜಾ' ಚಿತ್ರದಲ್ಲಿ ಖ್ಯಾತ ನಟ ಮಮ್ಮುಟಿ ನಾಯಕನಾಗಿ ನಟಿಸುತ್ತಿದ್ದಾರೆ.

ಇತ್ತೀಚೆಗಷ್ಟೇ ಆಸ್ಕರ್ ಪ್ರಶಸ್ತಿಗೆ ಭಾಜನರಾಗಿದ್ದ ರಸೂಲ್ ಪೂಕುಟ್ಟಿ ಈ ಚಿತ್ರಕ್ಕೆ ಶಬ್ದಗ್ರಹಣ ಮಾಡುತ್ತಿರುವುದು ಈ ಚಿತ್ರದ ಮತ್ತೊಂದು ವಿಶೇಷ. ಸದ್ಯ ಎರಡು ಬಾಲಿವುಡ್ ಹಾಗೂ ಒಂದು ಹಾಲಿವುಡ್ ಸಿನಿಮಾಕ್ಕೆ ಸೌಂಡ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿರುವ ಪೂಕುಟ್ಟಿ ತನ್ನ ತಾಯ್ನಾಡಿನಲ್ಲೇ ಇಂಥದ್ದೊಂದು ಅವಕಾಶ ಬಂದಿರುವುದರಿಂದ ಮತ್ತಷ್ಟು ಹುಮ್ಮಸ್ಸಿನಲ್ಲಿದ್ದಾರೆ.

ಬಂಡಲ್ ಬಡಾಯಿ ಹೇಮಂತ

ಕನ್ನಡ ಚಿತ್ರರಂಗ ಎಂದೂ ಕೇಳಿರದಷ್ಟು ಸುಳ್ಳಿನ ಸರಮಾಲೆಯನ್ನು ಹೇಳುತ್ತಾ ಬಂದಿರುವ ನಿರ್ದೇಶಕ ಹೇಮಂತ್ ಹೆಗ್ಗಡೆ ಕೀಳುಪ್ರಚಾರ ಪಡೆಯುವಲ್ಲಿ ಎತ್ತಿದ ಕೈ ಎನಿಸಿಕೊಳ್ಳುತ್ತಿದ್ದಾರೆ.

ಇವರ ನಿರ್ದೇಶನದ 'ಹೌಸ್‌ಫುಲ್' ಚಿತ್ರಕ್ಕೆ ಅಂತರರಾಷ್ಟ್ರೀಯ ಖ್ಯಾತಿಯ ನಟ ಚಾರ್ಲಿ ಚಾಪ್ಲಿನ್ ಪ್ರತಿಮೆಯನ್ನು ಕರಾವಳಿ ತೀರದಲ್ಲಿ ಪ್ರತಿಷ್ಠಾಪಿಸಲು ಹೊರಟಾಗ ಅಲ್ಲಿನವರು ಅದನ್ನು ವಿರೋಧಿಸಿದ್ದು, ಬುದ್ಧಿಜೀವಿಗಳು ಹೆಗ್ಗಡೆ ಬೆನ್ನಿಗೆ ನಿಂತಿದ್ದು... ಇದೆಲ್ಲಾ ನೀವು ಓದಿದ್ದೀರಿ.

ಇದಾದ ನಂತರ ಕರಾವಳಿ ತೀರದ ಬದಲು ಬೆಂಗಳೂರು ಹೊರವಲಯದ ಇನ್ನೋವೇಟಿವ್ ಫಿಲ್ಮ್ ಸಿಟಿಯಲ್ಲಿ ಈ ಪ್ರತಿಮೆಯನ್ನು ಸ್ಥಾಪಿಸಲಾಗುವುದೆಂದು ಹೆಗ್ಗಡೆ ಹೇಳಿದರು. ಈಗ ಲೇಟೆಸ್ಟ್ ಸುದ್ದಿಯೇನೆಂದರೆ ಫಿಲ್ಮಂ ಸಿಟಿಯಲ್ಲೂ ಈ ಪ್ರತಿಮೆಯನ್ನು ಸ್ಥಾಪಿಸುತ್ತಿಲ್ಲವಂತೆ! ಅದಕ್ಕೆ ಆತ ನೀಡುತ್ತಿರುವ ಕಾರಣವೂ ಹಾಸ್ಯಾಸ್ಪದವಾಗಿದೆ. ಈ ಸುಳ್ಳುಗಾರ ಹೆಗ್ಗಡೆ ಹೇಳುವ ಪ್ರಕಾರ ಅಷ್ಟು ಎತ್ತರದ ಪ್ರತಿಮೆಯನ್ನು ಬೆಂಗಳೂರಿನ ಸುತ್ತ ಸ್ಥಾಪಿಸಬಾರದೆಂದು ಕಾನೂನು ಇದೆಯಂತೆ. ಕಾರಣ ಅಂತಹ ಪ್ರತಿಮೆ ವಿಮಾನಗಳ ಹಾರಾಟಕ್ಕೆ ತೊಂದರೆ ನೀಡುತ್ತದಂತೆ!



ಈಗ ಈತ ಮತ್ತೊಂದು ವರಾತೆಯನ್ನು ತೆಗೆದಿದ್ದಾನೆ. ಅದೇನೆಂದರೆ ಯಾವ ಹಾಡಿಗಾಗಿ ಆತ ಈ ಪ್ರತಿಮೆಯನ್ನು ಸ್ಥಾಪಿಸಲು ಹೊರಟಿದ್ದನೋ ಆ ಹಾಡನ್ನೇ ಈಗ ಚಿತ್ರೀಕರಿಸುವುದಿಲ್ಲವಂತೆ. ತನ್ನ ಚಿತ್ರ 50 ದಿನಗಳು ಓಡಿದನಂತರ ಈ ಹಾಡನ್ನು ಸೇರಿಸುತ್ತಾನಂತೆ. ಅಂದರೆ ಯಾವುದೇ ಕಾರಣಕ್ಕೂ ಆತನ ಚಿತ್ರ 50 ದಿನ ಓಡುವುದಿಲ್ಲವೆನ್ನುವುದು ಆತನಿಗೆ ಖಾತ್ರಿಯಾದ ನಂತರವೇ ಈ ತರಹದ ಹೇಳಿಕೆಯನ್ನು ನೀಡಿದ್ದಾನೆ ಎಂದು ಇಡೀ ಗಾಂಧಿನಗರ ನಗುತ್ತಿದೆ.

ಈ ಚಿತ್ರದ ಮುಹೂರ್ತ ಸಂದರ್ಭದಲ್ಲಿ ಇಂತಹ ಅನೇಕ ಸುಳ್ಳುಗಳನ್ನು ಹೇಳಿ ಪ್ರಚಾರ ಗಿಟ್ಟಿಸಿದ್ದ ಹೆಗ್ಗಡೆ. ಅವುಗಳಲ್ಲೊಂದು ತನ್ನ ಚಿತ್ರದಲ್ಲಿ ಅತಿಥಿ ನಟನಾಗಿ ಕ್ರಿಕೆಟ್ ಆಟಗಾರ ನವಜ್ಯೋತ್‌ಸಿಂಗ್ ಸಿದ್ದು ನಟಿಸುತ್ತಾರೆ ಎಂಬುದು. ಆದರೆ ಅನಂತರ ಸಿಕ್ಸರ್ ಸಿದ್ದು ವಿಷಯವನ್ನು ಈ ಮನುಷ್ಯ ಅಪ್ಪಿತಪ್ಪಿಯೂ ಮಾತನಾಡಿದ್ದೇ ಇಲ್ಲ. ಇಂತಹ ಹಲವಾರು ಸುಳ್ಳು ಹೇಳಿಕೆಗಳ ಮುಖಾಂತರ ಪುಕ್ಕಟೆ ಪ್ರಚಾರ ಗಿಟ್ಟಿಸಿದ್ದ ಈ ಮನುಷ್ಯ ತನ್ನ ಚಿತ್ರದ ಬಗ್ಗೆ ಯಾವತ್ತೂ ಮಾತನಾಡದೇ ಈಗ ಅದನ್ನು ಮುಗಿಸಿದ್ದಾನೆ.

ಹೆಗ್ಗಡೆ ಪ್ರಚಾರದಲ್ಲಿ ಗೆದ್ದಿರಬಹುದು ಆದರೆ ಚಿತ್ರ ಚೆನ್ನಾಗಿಲ್ಲದಿದ್ದರೆ ಒಂದೇ ವಾರಕ್ಕೆ ನಮ್ಮ ಪ್ರೇಕ್ಷಕ ಮಹಾಪ್ರಭುಗಳು ಅದನ್ನು ಮತ್ತೆ ಡಬ್ಬದೊಳಗೆ ನೂಕುತ್ತಾರೆ ಎಂಬುದು ಆತನಿಗೆ ಗೊತ್ತಿಲ್ಲದಿರುವ ಕಟುಸತ್ಯ.

ಈತನ 'ಹೌಸ್‌ಫುಲ್' ಚಿತ್ರದ ಮೊದಲ ಪ್ರದರ್ಶನವೇ ಹೌಸ್‌ಫುಲ್ ಆಗುವುದಿಲ್ಲವೆಂದು ಗಾಂಧಿನಗರಿಗಳು ಬೆಟ್ ಕಟ್ಟಿದ್ದಾರೆಂಬುದು ಮಾತ್ರ ಸುಳ್ಳಲ್ಲ!

ಶೆಣೈ


ಪ್ರೌಢಶಾಲಾ ಶಿಕ್ಷಕರ ನೇಮಕಾತಿ

ಸಾಮಾನ್ಯ ಜ್ಞಾನ, ಶೈಕ್ಷಣಿಕ ಮನೋವಿಜ್ಞಾನ, ಮೆಂಟಲ್ ಎಬಿಲಿಟಿ

ಸ್ಪರ್ಧಾತ್ಮಕ ಪರೀಕ್ಷಾ ಪುಸ್ತಕ

ಪುಟಗಳು : 552 , ಬೆಲೆ : 200/-

ಎಲ್ಲೆಡೆ ಲಭ್ಯ



ಗ್ರೇಟ್ ಪ್ರಕಾಶನ

ನಂ 9, ಇ.ಎ.ಟಿ ರಸ್ತೆ, ಬಸವನಗುಡಿ, ಬೆಂ - 04

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44